Vol-52, Issue-204 ■ PMG/KA/NK/BM/690/12-14, RNI No. 29764/74

ಉತ್ತರ ಕರ್ನಾಟಕದಿಂದ ಹೊರಹೊಮ್ಮಿದ ಜನಮನದ ಧ್ವನಿ


# ಕನ್ನಡಮ್ಮ

ಬೆಳಗಾವಿ ಹುಬ್ಬಳ್ಳಿಯಿಂದ ಏಕಕಾಲಕ್ಕೆ ಪ್ರಕಾಶಿತ

ದಿನಪತ್ರಿಕೆ

ಮುಂದಿನ ವರ್ಷ ಜೂನ್ 4 ರಿಂದ ಟಿ20 ವಿಶ್ವಕಪ್ ಟೂರ್ನಿ ಆರಂಭ..?

KNN
Kannadamma News Network
ಸಿಟಿ ನ್ಯೂಸ್ ಮರಾಠಿ
ಹಾಥ್‌ವೇನಲ್ಲಿ ವೀಕ್ಷಿಸಿ
M.G Towers, Club Road, Belagavi




M.G Towers, Club Road, Belagavi

www.facebook.com/kannadamma www.twitter.com/kannadamma www.kannadamma.net news21.kannadamma@gmail.com 0831-4203065 | ₹3 | ಪುಟ 08 | ರವಿವಾರ | ಜುಲೈ | 30 | 2023

## ಮಣಿಪುರ ಘಟನೆ ಮೇಲೆ ಸಿಬಿಐ

ನವದೆಹಲಿ: ಮೇ 4 ರಂದು ಮಣಿಪುರದಲ್ಲಿ ಸಮುದಾಯಕ್ಕೆ ಸೇರಿದ ಇಬ್ಬರು ಮಹಿಳೆಯರನ್ನು ಗುಂಪೊಂದು ಇಬ್ಬರು ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪಕ್ಕೆ ಸಂಬಂಧಿಸಿದ ಪ್ರಕರಣದ ತನಿಖೆಯನ್ನು ಸಿಬಿಐ ಕೈಗೆತ್ತಿಕೊಂಡಿದೆ. ರಾಜ್ಯದಲ್ಲಿನ ಎರಡು ಸಮುದಾಯದ ಪೈಕಿ ಒಂದು ಸಮುದಾಯಕ್ಕೆ ಸೇರಿದ ಇಬ್ಬರು ಮಹಿಳೆಯರನ್ನು ಇನ್ನೊಂದು ಸಮುದಾಯದ ಪುರುಷರು ಬೆತ್ತಲೆಗೊಳಿಸಿ, ಮೆರವಣಿಗೆ ಮಾಡಿರುವುದನ್ನು ತೋರಿಸುವ ವಿಡಿಯೋ ಜುಲೈ 19ರಂದು ಸಾಮಾಜಿಕ ಮಾಧ್ಯಮಗಳಲ್ಲಿ ಭಾರಿ ವೈರಲ್ ಆಗಿತ್ತು. ಇದರ ಪರಿಣಾಮವಾಗಿ ಈಶಾನ್ಯ ರಾಜ್ಯದಲ್ಲಿ ನಡೆದ ಅಪರಾಧಗಳ ಬಗ್ಗೆ ದೇಶದಾದ್ಯಂತ ತೀವ್ರ ಕೋಲಾಹಲ ಉಂಟಾಗಿದೆ. ವ್ಯಾಪಕ ಖಂಡನೆಗೆ ಗುರಿಯಾದ ವಿಡಿಯೋದಲ್ಲಿ, ಪುರುಷರು ಇಬ್ಬರು ಮಹಿಳೆಯರಿಗೆ ನಿರಂತರವಾಗಿ ಕಿರುಕುಳ ನೀಡುವುದನ್ನು ತೋರಿಸುತ್ತದೆ. ಅವರು ಈ ವೇಳೆ ಎಷ್ಟೇ ಅತ್ತು ಗೋಗರೆದರೂ, ಯಾವುದೇ ಪ್ರಯೋಜನವಾಗಿರಲಿಲ್ಲ. ಕೇಂದ್ರ ಗೃಹ ಸಚಿವಾಲಯದ ಸೂಚನೆಯ ಮೇರೆಗೆ ಪ್ರಕರಣವನ್ನು ಕೇಂದ್ರೀಯ ತನಿಖಾ ದಳಕ್ಕೆ (ಸಿಬಿಐ) ಹಸ್ತಾಂತರಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.


### ಶುಭ ನುಡಿ

ಯೋಚನೆ ಮಾಡುತ್ತಾ ಕಾಲ ಕಳೆಯಬೇಡಿ, ನೀವು ಯೋಚನೆ ಮಾಡುತ್ತಾ ಕುಳಿತರೆ.. ಸಮಯ ವ್ಯರ್ಥದ ಜೊತೆಗೆ ನೆಮ್ಮದಿಯೂ ಹಾಳಾಗುತ್ತದೆ ಪರಿಹಾರವೂ ಸಿಗಲ್ಲ.

### ಚಿನಿವಾಲ ಪೇಟೆ

| | |
|---|---|
| ಮುಂಬೈ 10 ಗ್ರಾ ಬಂಗಾರ | |
| 22 ಕ್ಯಾ | 55,100 |
| 24ಕ್ಯಾ | 60,100 |
| ಬೆಂಗಳೂರು 10 ಗ್ರಾ ಬಂಗಾರ | |
| 22 ಕ್ಯಾ | 55,150 |
| 24 ಕ್ಯಾ | 60,100 |
| ಮುಂಬೈ 1 ಕೆ.ಜಿ ಬೆಳ್ಳಿ | |
| ಮುಂಬೈ 1 ಕೆ.ಜಿ ಬೆಳ್ಳಿ | 78,000 |
| ಬೆಂಗಳೂರು 1 ಕೆ.ಜಿ ಬೆಳ್ಳಿ | |
| ಬೆಂಗಳೂರು 1ಕೆ.ಜಿ ಬೆಳ್ಳಿ | 77,000 |

### ಕಚ-ಗುಳಿ




ಬಿಜೆಪಿ ರಾಷ್ಟ್ರೀಯ ಮಂಡಳಿ ಪುನರ್ ರಚನೆ

# ಸಿಟಿ ರವಿ ಬಿಜೆಪಿ ರಾಜ್ಯಾಧ್ಯಕ್ಷ, ಯತ್ನಾಳ್ ವಿಪಕ್ಷ ನಾಯಕ..?

ಬೆಂಗಳೂರು:-ಬಿಜೆಪಿ ರಾಷ್ಟ್ರೀಯ ಮಂಡಳಿಯನ್ನು ಪುನರ್‌ರಚಿಸಿ ಹೊಸ ಪದಾಧಿಕಾರಿಗಳನ್ನು ನೇಮಕ ಮಾಡಿದ್ದು, ಈ ಪುನರ್ ರಚನೆ ಸಂದರ್ಭದಲ್ಲಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಹುದ್ದೆಯಿಂದ ಸಿ.ಟಿ ರವಿ ಅವರನ್ನು ಬಿಡುಗಡೆ ಮಾಡಿರುವುದು ಸಿ.ಟಿ ರವಿ ಅವರು ಬಿಜೆಪಿಯ ರಾಜ್ಯಾಧ್ಯಕ್ಷರಾಗುತ್ತಾರಾ ಎಂಬ ಸುದ್ದಿಗಳಿಗೆ ಪುಷ್ಠಿ ಬಂದಂತಾಗಿದೆ.

ಸಿ.ಟಿ ರವಿ ಅವರನ್ನು 2020ರಲ್ಲಿ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯಾಗಿ ನೇಮಕ ಮಾಡಲಾಗಿತ್ತು. ಈಗ ಈ ಹುದ್ದೆಯಿಂದ ಸಿ.ಟಿ ರವಿ ಅವರನ್ನು ಬಿಡುಗಡೆ ಮಾಡಲಾಗಿದ್ದು, ರಾಜ್ಯ ಬಿಜೆಪಿ ಅಧ್ಯಕ್ಷ ಸ್ಥಾನಕ್ಕೆ ಸಿ.ಟಿ ರವಿ ಅವರು ನೇಮಕಗೊಳ್ಳಲಿದ್ದಾರೆ ಎಂದು ಹೇಳಲಾಗಿದೆ.ಬಿಜೆಪಿಯಲ್ಲಿ ಒಂದು ವ್ಯಕ್ತಿಗೆ ಒಂದೇ ಹುದ್ದೆ ಎಂಬ ನಿಯಮವಿದ್ದು, ರಾಜ್ಯ ಬಿಜೆಪಿ ಅಧ್ಯಕ್ಷರನ್ನಾಗಿ ಸಿ.ಟಿ ರವಿ ಅವರನ್ನು ನೇಮಕ ಮಾಡಲು ಅವರನ್ನು ಪ್ರಧಾನ ಕಾರ್ಯದರ್ಶಿ ಹುದ್ದೆಯಿಂದ ಕೈ ಬಿಡಲಾಗಿದೆ ಎಂದು ಹೇಳಲಾಗಿದೆ.

ಮಾಜಿ ಶಾಸಕ ಸಿ.ಟಿ ರವಿ ರಾಜ್ಯ ಬಿಜೆಪಿ ಅಧ್ಯಕ್ಷರಾಗಲಿದ್ದಾರೆ ಎಂಬ ಸುದ್ದಿಗಳು ಬಿಜೆಪಿ ವಲಯದಲ್ಲಿ ಕೆಲ ದಿನಗಳಿಂದ ಹರಿದಾಡುತ್ತಿದ್ದು, ಕಳೆದವಾರ ಸಿ.ಟಿ ರವಿ ಯಡಿಯೂರಪ್ಪರವರನ್ನು ಭೇಟಿ ಮಾಡಿ ಅವರ ಆರ್ಶೀವಾದ ಸಹ ಪಡೆದುಕೊಂಡಿದ್ದರು. ಈ ಎಲ್ಲ ಬೆಳವಣಿಗೆಗಳನ್ನು ಗಮನಿಸಿದರೆ ಸಿ.ಟಿ ರವಿ ಬಿಜೆಪಿ ರಾಜ್ಯಾಧ್ಯಕ್ಷರಾಗುವ ಸಾಧ್ಯತೆಗಳು ನಿಚ್ಚಳವಾಗಿವೆ.

ಬಿ.ಎಲ್. ಸಂತೋಷ್ ಮುಂದುವರಿಕೆ, ರಾಜ್ಯದ ಬೇರೆ ನಾಯಕರಿಗೆ ಇಲ್ಲ ಹುದ್ದೆ



ಮೇಜರ ಸರ್ಜರಿ

ರಾಷ್ಟ್ರೀಯ ಮಟ್ಟದಲ್ಲಿ ಭಾರತೀಯ ಜನತಾ ಪಕ್ಷವನ್ನು ಪುನರ್‌ರಚಿಸಿ ಹೊಸ ಪದಾಧಿಕಾರಿಗಳನ್ನು ನೇಮಕ ಮಾಡಲಾಗಿದ್ದು, ಪ್ರಧಾನ ಕಾರ್ಯದರ್ಶಿ ಹುದ್ದೆಯಿಂದ ಕರ್ನಾಟಕದವರಾದ ಸಿ.ಟಿ ರವಿ ಅವರಿಗೆ ಕೊಕ್ ನೀಡಲಾಗಿದೆ. ಬಿ.ಎಲ್ ಸಂತೋಷ್‌ರವರನ್ನು ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯನ್ನಾಗಿ ಮುಂದುವರೆಸಲಾಗಿದೆ.

ಬಿಜೆಪಿಯ ರಾಷ್ಟ್ರೀಯ ಮಂಡಳಿಯ ಪುನಾರಚನೆಯ ಪಟ್ಟಿ ಬಿಡುಗಡೆಯಾಗಿದ್ದು, 8 ಮಂದಿಯನ್ನು ಪ್ರಧಾನ ಕಾರ್ಯದರ್ಶಿಗಳನ್ನಾಗಿ ಮತ್ತು 13 ಮಂದಿಯನ್ನು ರಾಷ್ಟ್ರೀಯ ಉಪಾಧ್ಯಕ್ಷರನ್ನಾಗಿ ಹೊಸದಾಗಿ ನೇಮಕ ಮಾಡಲಾಗಿದೆ.

ಬಿಜೆಪಿಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯಾಗಿ ತಮಿಳುನಾಡು ಬಿಜೆಪಿ ಉಸ್ತುವಾರಿಯಾಗಿದ್ದ ಸಿ.ಟಿ ರವಿ ಅವರನ್ನು ಪ್ರಧಾನ ಕಾರ್ಯದರ್ಶಿ ಹುದ್ದೆಯಿಂದ ಕೈ ಬಿಡಲಾಗಿದೆ. ಕರ್ನಾಟಕದವರಾದ ಬಿ.ಎಲ್ ಸಂತೋಷ್‌ರವರನ್ನು ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಹುದ್ದೆಯಲ್ಲೇ ಮುಂದುವರೆಸಲಾಗಿದೆ. ಛತ್ತೀಸ್‌ಘಡ್‌ನ ಮಾಜಿ ಮುಖ್ಯಮಂತ್ರಿ ರಮಣಸಿಂಗ್, ರಾಜಸ್ತಾನದ ಮಾಜಿ ಮುಖ್ಯಮಂತ್ರಿ ವಸುಂಧರರಾಜೆ ಅವರನ್ನು ರಾಷ್ಟ್ರೀಯ ಉಪಾಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದ್ದು, ಹಾಗೆಯೇ, ತೆಲಂಗಾಣ ರಾಜ್ಯ ಬಿಜೆಪಿಯ ಮಾಜಿ ಅಧ್ಯಕ್ಷ ಬಂಡಿಸಂಜಯ್ ಕುಮಾರ್, ರಾಜ್ಯಾಸಭಾಧ್ಯಕ್ಷ ರಾಧಾ ಮೋಹನ್ ಅಗರ್‌ವಾಲ್,ಅರುಣ್‌ಸಿಂಗ್ ಇವರುಗಳು ಪ್ರಧಾನ ಕಾರ್ಯದರ್ಶಿ ಹುದ್ದೆ ಗಿಟ್ಟಿಸಿಕೊಂಡಿದ್ದಾರೆ.

ಕಾಂಗ್ರೆಸ್‌ನ ಹಿರಿಯ ನಾಯಕ ಕೇರಳದ ಮಾಜಿ ಮುಖ್ಯಮಂತ್ರಿ ಎ.ಕೆ. ಆಂಟನಿ ಅವರ ಪುತ್ರ ಅನಿಲ್ ಆಂಟನಿ ಅವರನ್ನು ಕಾರ್ಯದರ್ಶಿಯನ್ನಾಗಿ ನೇಮಕ ಮಾಡಲಾಗಿದೆ.

ಪುನರ್ ರಚಿತ ಬಿಜೆಪಿ ಪದಾಧಿಕಾರಿಗಳಲ್ಲಿ ಒಟ್ಟು 13 ಮಂದಿ ಉಪಾಧ್ಯಕ್ಷರು, 13 ಮಂದಿ ಕಾರ್ಯದರ್ಶಿಗಳು, 12 ಮಂದಿ ಉಪಾಧ್ಯಕ್ಷರ ಹುದ್ದೆಗೆ ಹೊಸದಾಗಿ ನೇಮಕ ಮಾಡಲಾಗಿದ್ದು, ಕರ್ನಾಟಕದ ಯಾವುದೇ ನಾಯಕರಿಗೂ ನೂತನ ಪದಾಧಿಕಾರಿಗಳ ಪಟ್ಟಿಯಲ್ಲಿ ಸ್ಥಾನ ಸಿಕ್ಕಿಲ್ಲ.

**ದೇವೇಗೌಡರ ಭವಿಷ್ಯ ನಿಜ**

**ಕೆಲ ದಿನಗಳ ಹಿಂದೆ ಸುದ್ದಿಗೋಷ್ಠಿಯಲ್ಲಿ ಮಾಜಿ ಪ್ರಧಾನಿ ದೇವೇಗೌಡರು ಸಿ.ಟಿ ರವಿ ಬಿಜೆಪಿ ರಾಜ್ಯಾಧ್ಯಕ್ಷರಾಗುತ್ತಾರೆ ಮತ್ತು ವಿಪಕ್ಷ ನಾಯಕರಾಗಿ ಬಸನಗೌಡ ಪಾಟೀಲ್ ನೇಮಕವಾಗುತ್ತಾರೆ ಎಂಬ ಸುಳಿವನ್ನು ನೀಡಿದ್ದರು. ದೇವೇಗೌಡರ ಭವಿಷ್ಯ ನಿಜವಾಗುವ ಸಾಧ್ಯತೆಗಳು ಹೆಚ್ಚಿವೆ.**

**ಯತ್ನಾಳ್ ವಿಪಕ್ಷ ನಾಯಕ**


**ಸಿ.ಟಿ ರವಿ ಅವರನ್ನು ರಾಜ್ಯಾಧ್ಯಕ್ಷರನ್ನಾಗಿ ನೇಮಕ ಮಾಡಿ, ಬಸನಗೌಡ ಪಾಟೀಲ್ ಯತ್ನಾಳ್ ಅವರನ್ನು ವಿಪಕ್ಷ ನಾಯಕರನ್ನಾಗಿ ನೇಮಕ ಮಾಡುವ ಸಾಧ್ಯತೆಗಳು ಇವೆ.ವಿಧಾನ ಪರಿಷತ್ತಿನ ವಿಪಕ್ಷ ನಾಯಕರಾಗಿ ಕೋಟಾಶ್ರೀನಿವಾಸ ಪೂಜಾರಿ ಹೆಸರು ಅಂತಿಮಗೊಂಡಿದೆ ಎಂದು ಹೇಳಲಾಗಿದೆ.ಈ ಹಿಂದೆ ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನಕ್ಕೆ ಶೋಭಾಕರಂದ್ಲಾಜೆ ಅವರ ಹೆಸರು ಅಂತಿಮಗೊಂಡಿತ್ತಾದರೂ ಕೇಂದ್ರ ಸಚಿವ ಸಂಪುಟದಿಂದ ಶೋಭಾಕರಂದ್ಲಾಜೆ ಅವರನ್ನು ಬಿಟ್ಟು ಕೊಡಲು ಪ್ರಧಾನಿ ಮೋದಿ ಅವರು ಮನಸ್ಸು ಮಾಡದ ಕಾರಣ ಶೋಭಾಕರಂದ್ಲಾಜೆ ಅವರ ಬದಲಿಗೆ ಸಿ.ಟಿ ರವಿ ಅವರನ್ನು ರಾಜ್ಯಾಧ್ಯಕ್ಷರನ್ನಾಗಿ, ಯತ್ನಾಳ್‌ರವರನ್ನು ವಿಪಕ್ಷ ನಾಯಕರನ್ನಾಗಿ ನೇಮಕ ಮಾಡಲು ಬಿಜೆಪಿ ಹೈಕಮಾಂಡ್ ತೀರ್ಮಾನಿಸಿದೆ. ಸದ್ಯದಲ್ಲೇ ಈ ಬಗ್ಗೆ ಅಧಿಕೃತವಾಗಿ ಪ್ರಕಟಣೆ ಹೊರಬೀಳಲಿದೆ ಎಂದು ಬಿಜೆಪಿ ಮೂಲಗಳು ಹೇಳಿವೆ.**

## ರಾಷ್ಟ್ರೀಯ ಶಿಕ್ಷಣ ನೀತಿ ದೇಶದ ಎಲ್ಲಾ ಭಾಷೆಗಳನ್ನು ಗೌರವಿಸುತ್ತದೆ: ಪ್ರಧಾನಿ

ನವದೆಹಲಿ: ಹೊಸ ರಾಷ್ಟೀಯ ಶಿಕ್ಷಣ ನೀತಿಯು ದೇಶದ ಪ್ರತಿಯೊಂದು ಭಾಷೆಗೆ ಗೌರವ ಮತ್ತು ಮನ್ನಣೆ ನೀಡುತ್ತದೆ ಎಂದು ಶನಿವಾರ ಹೇಳಿರುವ ಪ್ರಧಾನಿ ನರೇಂದ್ರ ಮೋದಿ, ತಮ್ಮ ಸ್ವಾರ್ಥಕ್ಕಾಗಿ ಭಾಷೆಯನ್ನು ರಾಜಕೀಯಗೊಳಿಸಲು ಪ್ರಯತ್ನಿಸುವವರು ತಮ್ಮ ಅಂಗಡಿಗಳನ್ನು ಮುಚ್ಚಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆ.

ಎನ್‌ಇಪಿ ಮೂರನೇ ವಾರ್ಷಿಕೋತ್ಸವ ಅಂಗವಾಗಿ 'ಅಖಿಲ ಭಾರತೀಯ ಶಿಕ್ಷಾ ಸಮಾಗಮ್' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಪ್ರಧಾನಿ ಮೋದಿ, ವಿದ್ಯಾರ್ಥಿಗಳ ಸಾಮರ್ಥ್ಯದ ಬದಲಿಗೆ ಅವರ ಭಾಷೆಯ ಆಧಾರದ ಮೇಲೆ ಅವರನ್ನು ನಿರ್ಣಯಿಸುವುದೇ ದೊಡ್ಡ ಅನ್ಯಾಯ ಎಂದು ಹೇಳಿದರು. "ಮಾತೃಭಾಷೆಯಲ್ಲಿನ ಶಿಕ್ಷಣವು ದೇಶದಲ್ಲಿನ ಎಲ್ಲಾ ವಿದ್ಯಾರ್ಥಿಗಳಿಗೆ ನ್ಯಾಯದ ಹೊಸ ರೂಪವಾಗಿದೆ. ಇದು ಸಾಮಾಜಿಕ ನ್ಯಾಯದ ಕಡೆಗೆ ಮಹತ್ವದ ಹೆಜ್ಜೆಯಾಗಿದೆ ಎಂದರು.

ಹಲವಾರು ಅಭಿವೃದ್ಧಿ ಹೊಂದಿದ ದೇಶಗಳು ತಮ್ಮ ಸ್ಥಳೀಯ ಭಾಷೆಗಳಿಗೆ ಆದ್ಯತೆ ನೀಡಿದ್ದು, ಭಾರತದಲ್ಲಿ ಹಲವು ಭಾಷೆಗಳಿದ್ದರೂ ಇಂಗ್ಲಿಷ್ ಮಾತನಾಡಲು ಸಾಧ್ಯವಾಗದವರನ್ನು ನಿರ್ಲಕ್ಷಿಸಲಾಗಿದೆ ಮತ್ತು ಅವರ ಪ್ರತಿಭೆಯನ್ನು ಗುರುತಿಸಲಾಗಿಲ್ಲ ಪರಿಣಾಮವಾಗಿ ಗ್ರಾಮೀಣ ಪ್ರದೇಶದ ಮಕ್ಕಳು ಹೆಚ್ಚು ಹಿಂದುಳಿಯುವಂತಾಗಿದೆ. ಈಗ ದೇಶದಲ್ಲಿ ಎನ್ ಇಪಿ ಜಾರಿಯಿಂದ ಈ ನಂಬಿಕೆಯನ್ನು ದೂರವಿಡಲು ಪ್ರಾರಂಭಿಸಿದೆ. ವಿಶ್ವಸಂಸ್ಥೆಯಲ್ಲಿಯೂ ಸಹ ನಾನು ಭಾರತೀಯ ಭಾಷೆಯಲ್ಲಿ ಮಾತನಾಡುತ್ತೇನೆ ಎಂದು ಅವರು ಹೇಳಿದರು.



**ಸಮಾಜ ವಿಜ್ಞಾನದಿಂದ ಇಂಜಿನಿಯರಿಂಗ್ ವರೆಗಿನ ವಿಷಯಗಳನ್ನು ಈಗ ಭಾರತೀಯ ಭಾಷೆಗಳಲ್ಲಿ ಕಲಿಸಲಾಗುವುದು, ವಿದ್ಯಾರ್ಥಿಗಳು ಭಾಷೆಯ ಮೇಲೆ ವಿಶ್ವಾಸವಿಟ್ಟಾಗ ಅವರಲ್ಲಿರುವ ಕೌಶಲ್ಯ ಮತ್ತು ಪ್ರತಿಭೆ ಯಾವುದೇ ನಿರ್ಬಂಧಗಳಿಲ್ಲದೆ ಹೊರಹೊಮ್ಮುತ್ತದೆ' ಎಂದರು. ಹೊಸ ಸಾಧ್ಯತೆಗಳ ನರ್ಸರಿಯಾಗಿ ಜಗತ್ತು ಭಾರತವನ್ನು ನೋಡುತ್ತಿದೆ ಮತ್ತು ಅಲ್ಲಿ ಐಐಟಿ ಕ್ಯಾಂಪಸ್‌ಗಳನ್ನು ಸ್ಥಾಪಿಸಲು ಹಲವಾರು ದೇಶಗಳು ಸರ್ಕಾರವನ್ನು ಸಂಪರ್ಕಿಸುತ್ತಿವೆ ಎಂದು ಪ್ರಧಾನಿ ಹೇಳಿದರು.**

## ಆ.02ರಂದು ಕೈ ಶಾಸಕರೊಂದಿಗೆ ಹೈ ಕಮಾಂಡ್ ಸಭೆ



ಬೆಂಗಳೂರು: ಕೆಲ ದಿನಗಳಿಂದ ಉಂಟಾಗಿರುವ ಭಿನ್ನಮತವನ್ನು ಶಮನಗೊಳಿಸಲು ಕಾಂಗ್ರೆಸ್ ಹೈಕಮಾಂಡ್ ಆಗಸ್ಟ್ 2 ರಂದು ನವದೆಹಲಿಯಲ್ಲಿ ಕರ್ನಾಟಕದ ಪಕ್ಷದ ನಾಯಕರೊಂದಿಗೆ ಎರಡು ಸಭೆಗಳನ್ನು ಕರೆದಿದೆ ಎಂದು ಪಕ್ಷದ ಉನ್ನತ ಮೂಲಗಳು ತಿಳಿಸಿವೆ.

ಕಾಂಗ್ರೆಸ್ ಮೂಲಗಳ ಪ್ರಕಾರ, ಪಕ್ಷದ ಹೈಕಮಾಂಡ್ ಮತ್ತು ಕರ್ನಾಟಕದ ಪ್ರಮುಖ ಕಾಂಗ್ರೆಸ್ ನಾಯಕರ ನಡುವೆ ಮೊದಲ ಸಭೆ ನಡೆಯಲಿದೆ. ಸಭೆಯಲ್ಲಿ ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ಮಾಜಿ ಅಧ್ಯಕ್ಷ ರಾಹುಲ್ ಗಾಂಧಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಹಾಗೂ ರಾಜ್ಯ ಕಾಂಗ್ರೆಸ್ ಅಧ್ಯಕ್ಷ ಡಿ ಕೆ ಶಿವಕುಮಾರ್, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್ ಕೆ ಪಾಟೀಲ್, ಪ್ರಧಾನ ಕಾರ್ಯದರ್ಶಿಗಳಾದ ಕೆ ಸಿ ವೇಣುಗೋಪಾಲ್ ಮತ್ತು ರಣದೀಪ್ ಸಿಂಗ್ ಸುರ್ಜೇವಾಲಾ. ಕರ್ನಾಟಕ ಉಸ್ತುವಾರಿ ಮತ್ತು ಇತರ ಕೆಲವು ಉನ್ನತ ಪದಾಧಿಕಾರಿಗಳು ಭಾಗವಹಿಸಲಿದ್ದಾರೆ ಎಂದು ಕಾಂಗ್ರೆಸ್ ಪದಾಧಿಕಾರಿಯೊಬ್ಬರು ಪಿಟಿಐಗೆ ತಿಳಿಸಿದ್ದಾರೆ.ಎರಡನೇ ಸಭೆಯು ಕಾಂಗ್ರೆಸ್ ಸಚಿವರೊಂದಿಗೆ ನಡೆಯಲಿದ್ದು, ಪಕ್ಷದ ಕೆಲವು ಹಿರಿಯ ಶಾಸಕರು ಭಾಗವಹಿಸಬಹುದು ಎಂದು ಪದಾಧಿಕಾರಿಗಳು ತಿಳಿಸಿದ್ದಾರೆ. ಪಕ್ಷದ ಶಾಸಕರ ಕುಂದುಕೊರತೆಗಳನ್ನು ಪರಿಹರಿಸಲು ಗುರುವಾರ ನಡೆದ ಕಾಂಗ್ರೆಸ್ ಶಾಸಕಾಂಗ ಪಕ್ಷದ (ಸಿಎಲ್‌ಪಿ) ಸಭೆ ಅನಿರ್ದಿಷ್ಟವಾಗಿ ಉಳಿದಿರುವ ಹಿನ್ನೆಲೆಯಲ್ಲಿ ಈ ಸಭೆಗಳು ನಡೆಯುತ್ತಿವೆ.

ತಮ್ಮ ಕ್ಷೇತ್ರಗಳಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿಲ್ಲ ಎಂದು ಕಾಂಗ್ರೆಸ್ ಶಾಸಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ ಎನ್ನಲಾಗಿದೆ. ಸಚಿವರು ಸಮಯಾವಕಾಶ ನೀಡುತ್ತಿಲ್ಲ ಮತ್ತು ಅವರ ಸಮಸ್ಯೆಗಳನ್ನು ಬಗೆಹರಿಸುತ್ತಿಲ್ಲ ಎಂದು ಸಭೆಯಲ್ಲಿ ಆರೋಪಿಸಿದರು.ಮುಖ್ಯಮಂತ್ರಿ ಸಿದ್ದರಾಮಯ್ಯ ಕೂಡ ಸಿಎಲ್‌ಪಿ ಸಭೆಯಲ್ಲಿ ಸರ್ಕಾರಕ್ಕೆ ಕೆಟ್ಟ ಹೆಸರು ತರುವ ಇಂತಹ ತಂತ್ರಗಳನ್ನು ಅನುಸರಿಸಬೇಡಿ ಎಂದು ತಾಕೀತು ಮಾಡಿದ್ದಾರೆ ಎಂದು ಕಾಂಗ್ರೆಸ್‌ನ ಮತ್ತೊಬ್ಬ ನಾಯಕರೊಬ್ಬರು ತಿಳಿಸಿದ್ದಾರೆ. ಆದರೆ, ಸಿಎಲ್‌ಪಿ ಸಭೆಯಲ್ಲಿ ಯಾವುದೇ ಭಿನ್ನಾಭಿಪ್ರಾಯ ಇಲ್ಲ ಎಂದು ರಾಜ್ಯ ಗೃಹ ಸಚಿವ ಡಾ.ಪರಮೇಶ್ವರ ಹೇಳಿದ್ದಾರೆ.

## ಪಟಾಕಿ ಕಾರ್ಖಾನೆಯಲ್ಲಿ ಬಾರೀ ಸ್ಫೋಟ 9 ಮಂದಿ ಸಾವು

ಕೃಷ್ಣಗಿರಿ(ತಮಿಳುನಾಡು):- ನಗರದಲ್ಲಿನ ಪಟಾಕಿ ಕಾರ್ಖಾನೆಯಲ್ಲಿ ಇಂದು ಬೆಳಗ್ಗೆ ಸಂಭವಿಸಿದ ಭಾರೀ ಪ್ರಮಾಣದ ಸ್ಫೋಟದಲ್ಲಿ 9 ಮಂದಿ ಸಾವನ್ನಪ್ಪಿ,ಹಲವರು ಗಾಯಗೊಂಡಿದ್ದಾರೆ.ಗಾಯಗೊಂಡಿರುವವರನ್ನು ರಕ್ಷಿಸು ತಕ್ಷಣವೇ ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದ್ದು ಅವರಲ್ಲಿ ಕೆಲವರ ಸ್ಥಿತಿ ಚಿಂತಾಜನಕವಾಗಿದೆ.ಹೀಗಾಗಿ ಸಾವಿನ ಸಂಖ್ಯೆ ಹೆಚ್ಚಾಗುವ ಭೀತಿ ತಲೆದೋರಿದೆ.ಸ್ಫೋಟದ ತೀವ್ರತೆ ಎಷ್ಟಿತ್ತೆಂದರೆ ಸಮೀಪದ ಹೋಟೆಲ್ ಕಟ್ಟಡ ಕುಸಿದು ಉಳಿದ ನಾಲ್ಕು ಕಟ್ಟಡಗಳಿಗೆ ಭಾಗಶಃ ಹಾನಿಯಾಗಿದ್ದು, ಹಲವರು ಸಿಲುಕಿಕೊಂಡಿದ್ದಾರೆ.

ಘಟನಾ ಸ್ಥಳದಲ್ಲಿ ರಕ್ಷಣಾಕಾರ್ಯ ಮುಂದುವರೆದಿದ್ದು ಗಾಯಗೊಂಡವರನ್ನು ಚಿಕಿತ್ಸೆಗೆ ಆಸ್ಪತ್ರೆಗೆ ದಾಖಲಿಸಲಾಗಿದೆ.

ಇನ್ನೂ ಹಲವಾರು ಮಂದಿ ಕಟ್ಟಡದ ಅಡಿಯಲ್ಲಿ ಸಿಲುಕಿರುವ ಕುರಿತು ಶಂಕೆ ವ್ಯಕ್ತವಾಗಿದ್ದು ಅವರನ್ನು ಸುರಕ್ಷಿತವಾಗಿ ಹೊರತರಲು ರಕ್ಷಣಾ ತಂಡಗಳು ನಿರಂತರ ಕಾರ್ಯಾಚರಣೆ ನಡೆಸುತ್ತಿದೆ.ಘಟನೆ ಹೇಗೆ ನಡೆಯಿತು ಎಂಬುದರ ಕುರಿತು ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

## ಉಗ್ರರ ದಾಳಿ ಭಯ ಮುಂಬೈಗೆ ಬಿಗಿ ಭದ್ರತೆ

ಮುಂಬೈ(ಮಹಾರಾಷ್ಟ್ರ): ಮುಂಬೈನ ಕೊಲಾಬಾದಲ್ಲಿರುವ ಛಾಬ್ರಾ ಹೌಸ್ ಮತ್ತೊಮ್ಮೆ ಉಗ್ರರ ಕೆಂಗಣ್ಣಿಗೆ ಗುರಿಯಾಗುವ ಸಾಧ್ಯತೆ ಇದೆ. ಏಕೆಂದರೆ ತನಿಖಾಧಿಕಾರಿಗಳು ಪುಣೆಯಲ್ಲಿ ಬಂಧಿತ ಉಗ್ರರೊಂದಿಗೆ ಕೊಲಾಬಾದಲ್ಲಿರುವ ತಾಜ್ ಹೋಟೆಲ್ ಬಳಿಯ ಛಾಬ್ರಾ ಹೌಸ್ ಫೋಟೋಗಳನ್ನು ಪತ್ತೆ ಮಾಡಿದ್ದಾರೆ.ಬಂಧಿತ ಉಗ್ರರು ಮುಂಬೈಗೆ ಬಂದು ಛಾಬ್ರಾ ಹೌಸ್ ಮೇಲೆ ದಾಳಿ ನಡೆಸಬಹುದು ಎಂದು ಶಂಕಿಸಲಾಗಿದೆ. ಹೀಗಾಗಿ ಮುಂಬೈ ಪೊಲೀಸರು ಕೊಲಾಬಾದಲ್ಲಿರುವ ಛಾಬ್ರಾ ಹೌಸ್ ಸುತ್ತಮುತ್ತಲಿನ ಪ್ರದೇಶದಲ್ಲಿ ಭಯೋತ್ಪಾದನಾ ನಿಗ್ರಹ ದಳದ ನೆರವಿನೊಂದಿಗೆ ಭದ್ರತೆ ಹೆಚ್ಚಿಸಿದ್ದಾರೆ. ಛಾಬ್ರಾ ಹೌಸ್, ಮುಂಬೈನಲ್ಲಿ 26/11 ಭಯೋತ್ಪಾದಕ ದಾಳಿಯ ಸಮಯದಲ್ಲಿ ಪ್ರಮುಖ ಗುರಿಗಳಲ್ಲಿ ಒಂದಾಗಿತ್ತು. ಈ ಛಾಬ್ರಾ ಹೌಸ್‌ನ ಗೂಗಲ್ ಚಿತ್ರವನ್ನು ರಾಜಸ್ಥಾನದಲ್ಲಿ ದಾಳಿ ಮಾಡಲು ಯೋಜಿಸುತ್ತಿದ್ದ ಇಬ್ಬರು ಆರೋಪಿಗಳಿಂದ ವಶಪಡಿಸಿಕೊಳ್ಳಲಾಗಿದೆ. ಮುಂಬೈ ಪೊಲೀಸರಿಗೆ ಸಿಕ್ಕ ಮಾಹಿತಿ ಮೇರೆಗೆ ಪೊಲೀಸರು ಕೊಲಾಬಾದಲ್ಲಿರುವ ಯಹೂದಿ ಸಮುದಾಯ ಕೇಂದ್ರದಲ್ಲಿ ಭದ್ರತೆ ಹೆಚ್ಚಿಸಿದ್ದಾರೆ. ಮಹಾರಾಷ್ಟ್ರ ಎಟಿಎಸ್ ನೀಡಿದ ಮಾಹಿತಿಯ ಪ್ರಕಾರ, ಶಂಕಿತ ಆರೋಪಿಗಳಿಂದ ಕೊಲಾಬಾದಲ್ಲಿರುವ ಛಾಬ್ರಾ ಹೌಸ್‌ನ ಕೆಲವು ಗೂಗಲ್ ಫೋಟೋಗಳನ್ನು ವಶಪಡಿಸಿಕೊಳ್ಳಲಾಗಿದೆ.

## ಮಣಿಪುರಕ್ಕೆ ಇಂಡಿಯಾ ಮೈತ್ರಿಕೂಟ ನಿಯೋಗ ಭೇಟಿ

ನವದೆಹಲಿ:- ಮಣಿಪುರ ಹಿಂಸಾಚಾರ ಪ್ರಕರಣ ಆಡಳಿತ ಮತ್ತು ಪ್ರತಿಪಕ್ಷಗಳ ನಡುವೆ ವಾಕ್ಸಮರಕ್ಕೆ ಕಾರಣವಾಗಿರುವ ನಡುವೆಯೇ "ಇಂಡಿಯಾ" ಮೈತ್ರಿಕೂಟದ 16 ಪಕ್ಷಗಳ 21 ಸದಸ್ಯರ ನಿಯೋಗ ಇಂದಿನಿಂದ ಎರಡು ದಿನಗಳ ಕಾಲ ಮಣಿಪುರ ಪ್ರವಾಸಕೈಗೊಂಡಿದ್ದು ಅಲ್ಲಿನ ವಾಸ್ತವ ಸ್ಥಿತಿಗತಿಯನ್ನು ಖುದ್ದು ಅವಲೋಕಿಸಿ ಸ್ಥಳೀಯರಿಂದ ಮಾಹಿತಿ ಸಂಗ್ರಹಿಸಿತು. ನಾಳೆ ಗಲಭೆ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ ಪರಿಸ್ಥಿತಿ ಪರಾಮರ್ಶೆ ನಡೆಸಲಿದೆ.ಕಾಂಗ್ರೆಸ್, ಟಿಎಂಸಿ,ಉದ್ಧವ್ ಠಾಕ್ರೆ ಶಿವಸೇನೆ ಬಣ, ಎನ್‌ಸಿಪಿ ಶರದ್ ಪವಾರ್ ಬಣ, ಡಿಎಂಕೆ ಸೇರಿದಂತೆ ಇಂಡಿಯಾ 21 ಸದಸ್ಯರ ನಿಯೋಗ ಲೋಕಸಭೆಯಲ್ಲಿ ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ ನೇತೃತ್ವದಲ್ಲಿ ಇಂಫಾಲ ತಲುಪಿದ್ದು ಮಣಿಪುರ ಹಿಂಸಾಚಾರ ಪ್ರಕರಣದ ಬಗ್ಗೆ ಅಲ್ಲಿನ ರಾಜ್ಯಸರ್ಕಾರದ ಹಿರಿಯ ಅಧಿಕಾರಿಗಳಿಂದ ಮಾಹಿತಿ ಪಡೆಯಲಿದ್ದಾರೆ.

ಎರಡು ದಿನಗಳ ಅವಧಿಯಲ್ಲಿ ರಾಜ್ಯದ ಹಿಂಸಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಹಿತಿ ಕಲೆಹಾಕಿ ಲೋಕಸಭೆ ಮತ್ತು ರಾಜ್ಯಸಭೆಯ ಪೀಠಾಸಿನಾಧಿಕಾರಿಗಳಿಗೆ ವರದಿ ನೀಡಲಿದೆ.

ಮಣಿಪುರ ಹಿಂಸಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಸಂಸತ್ತಿನ ಉಭಯ ಸದನಗಳಲ್ಲಿ ಹೇಳಿಕೆ ನೀಡುವಂತೆ ಪ್ರಧಾನಿ ನರೇಂದ್ರ ಮೋದಿ ಅವರಿಗೆ ವಿರೋಧ ಪಕ್ಷಗಳು ಹಲವು ಬಾರಿ ಒತ್ತಡ ಹೇರಿದರೂ ಅವರು ಅದನ್ನು ಕೇಳುವ ಗೋಜಿಗೆ ಹೋಗದಿರುವುದು ವಿರೋಧ ಪಕ್ಷಗಳನ್ನು ಕೆರಳಿಸಿದೆ.

## ಎಕ್ಸ್‌ಪ್ರೆಸ್ ವೇಯಲ್ಲಿ ಅಪಘಾತ ಹೆಚ್ಚಳ ಸಿಎಂ ಸಿದ್ದರಾಮಯ್ಯ ಪರಿಶೀಲನೆ



ಬೆಂಗಳೂರು: ಬೆಂಗಳೂರು -ಮೈಸೂರು ಎಕ್ಸ್ ಪ್ರೆಸ್ ಹೆದ್ದಾರಿಯಲ್ಲಿ ಅಪಘಾತಗಳು ಸಂಖ್ಯೆ ಹೆಚ್ಚಾಗಿರುವುದು ಹಾಗೂ ಅವೈಜ್ಞಾನಿಕ ಕಾಮಗಾರಿಯ ದೂರುಗಳು ಬಂದಿರುವ ಹಿನ್ನೆಲೆಯಲ್ಲಿ ಇಂದು ಸಿಎಂ ಸಿದ್ದರಾಮಯ್ಯ ಅವರೇ ಖುದ್ದಾಗಿ ಎಕ್ಸ್ ಪ್ರೆಸ್ ಹೈವೇ ವೀಕ್ಷಿಸಿದ್ದಾರೆ.ಪೊಲೀಸರು ಹಾಗೂ ಅಧಿಕಾರಿಗಳೊಂದಿಗೆ ಆಗಮಿಸಿದ ಸಿಎಂ ಸಿದ್ದರಾಮಯ್ಯ ಸಿಎಂ ಆದ ಮೊದಲ ಬಾರಿಗೆ ಬೆಂಗಳೂರು-ಮೈಸೂರು ಎಕ್ಸ್ ಪ್ರೆಸ್ ಹೈವೇ ವೀಕ್ಷಿಸಿದರು. ನಂತರ ಅಧಿಕಾರಿಗಳು ಹಾಗೂ ಪೊಲೀಸರ ಬಳಿ ಹೈವೇ ಬಗ್ಗೆ ಮಾಹಿತಿ ಪಡೆದುಕೊಂಡಿದ್ದಾರೆ.ಮುಖ್ಯಮಂತ್ರಿ ಆದ ಬಳಿಕ ಮೊದಲ ಬಾರಿಗೆ ಇಂದು ಸಿಎಂ ಮಂಡ್ಯ ಜಿಲ್ಲೆಗೆ ಭೇಟಿ ನೀಡಿದ್ದು, ಮಂಡ್ಯ ತಾಲೂಕಿನ ಗುಮ್ಮಡಹಳ್ಳಿ ಗೇಟ್ ಹೆದ್ದಾರಿ ವೀಕ್ಷಣೆ ನಡೆಸಿದ್ದಾರೆ.ನಂತರ ಮಾಧ್ಯಮದವರೊಂದಿಗೆ ಮಾತನಾಡಿದರು. ಬೆಂಗಳೂರು, ಮೈಸೂರು ಎಕ್ಸ್ ಪ್ರೆಸ್ ವೇನಲ್ಲಿ ಸ್ಪೀಡ್ ಡಿಟೆಕ್ಟರ್ ಗಳನ್ನು ಅಳವಡಿಸಿರಲಿಲ್ಲ. ಹಾಗಾಗಿ ಅಪಘಾತಗಳು ಹೆಚ್ಚಾಗಿದ್ದವು. ಜುಲೈ ತಿಂಗಳಲ್ಲಿ ಅಪಘಾತಗಳು ಕಡಿಮೆ ಯಾಗಿವೆ. ಜೂನ್ ತಿಂಗಳಲ್ಲಿ 20 ಅಪಘಾತಗಳಾಗಿದ್ದರೆ, ಜುಲೈನಲ್ಲಿ 5 ಅಪಘಾತಗಳು ಸಂಭವಿಸಿವೆ.ಸ್ಪೀಡ್ ಡಿಟೆಕ್ಟರ್ ಗಳನ್ನು 10 ಕಿಮೀ ಅಂತರದಲ್ಲಿ ಅಳವಡಿಸಿದರೆ ಅಪಘಾತಗಳನ್ನು ಕಡಿಮೆ ಮಾಡಲು ಸಾಧ್ಯ. ಮುಖ್ಯ ಕಾರ್ಯದರ್ಶಿಗಳು ಎನ್. ಹೆಚ್.ಎ. ಐ ಅಧಿಕಾರಿಗಳೊಂದಿಗೆ ಸಭೆ ನಡೆಸಿದ್ದು, ನನ್ನ ಅಧ್ಯಕ್ಷತೆಯಲ್ಲಿ ಸಭೆ ನಡೆಯಲಿದೆ. ಎಕ್ಸ್ ಪ್ರೆಸ್ ವೇ ನಲ್ಲಿ ಕೆಲವು ಸುರಕ್ಷಾ ಕ್ರಮಗಳನ್ನು ಕೈಗೊಳ್ಳಬೇಕಿದ್ದು ಅದಕ್ಕಾಗಿಯೇ ಕಾಮಗಾರಿ ಕೈಗೊಳ್ಳಲು ಸೂಚನೆ ನೀಡಲಾಗಿದೆ.

## ಇಂಡಿಯಾ ಮೈತ್ರಿಕೂಟದಲ್ಲಿ ಅಪಸ್ವರ



ನವದೆಹಲಿ:-ವಿಪಕ್ಷಗಳ ಮೈತ್ರಿಕೂಟ ಇಂಡಿಯಾ ಅಸ್ತಿತ್ವಕ್ಕೆ ಬಂದ ಕೆಲವೇ ದಿನಗಳಲ್ಲಿ ಮೈತ್ರಿಕೂಟದಲ್ಲಿ ಅಪಸ್ವರಗಳು ಕಾಣಿಸಿಕೊಂಡಿದ್ದು, ಮೈತ್ರಿಕೂಟದ ಭಾಗವಾಗಿರುವ ಎನ್‌ಸಿಪಿಯ ಮುಖ್ಯಸ್ಥ ಶರದ್‌ಪವಾರ್ ಪ್ರಧಾನಿ ನರೇಂದ್ರಮೋದಿ ಅವರ ಜತೆ ಕಾರ್ಯಕ್ರಮವೊಂದರಲ್ಲಿ ವೇದಿಕೆ ಹಂಚಿಕೊಳ್ಳುತ್ತಿರುವುದು ಮೈತ್ರಿಕೂಟದಲ್ಲಿ ಅಸಮಾಧಾನ ಮೂಡಲು ಕಾರಣವಾಗಿದೆ. ಆಗಸ್ಟ್ 1 ರಂದು ಮಹಾರಾಷ್ಟ್ರದ ಪುಣೆಯಲ್ಲಿ ತಿಲಕ್ ಸ್ಮಾರಕ ಮಂದಿರ್ ಟ್ರಸ್ಟ್ ಆಯೋಜಿಸಿರುವ ಕಾರ್ಯಕ್ರಮದಲ್ಲಿ ಪ್ರಧಾನಿ ಮೋದಿ ಹಾಗೂ ಎನ್‌ಸಿಪಿ ಮುಖ್ಯಸ್ಥ ಶರದ್‌ಪವಾರ್ ಪಾಲ್ಗೊಳ್ಳಲಿದ್ದು, ಶರದ್‌ಪವಾರ್ ಅವರು ಪ್ರಧಾನಿ ಮೋದಿ ಅವರಿಗೆ ಲೋಕಮಾನ್ಯ ತಿಲಕ್ ಪ್ರಶಸ್ತಿಯನ್ನು ಪ್ರದಾನ ಮಾಡಲಿದ್ದಾರೆ. ಪ್ರಧಾನಿ ಮೋದಿ ಜತೆ ವೇದಿಕೆ ಹಂಚಿಕೊಳ್ಳಲಿರುವ ಶರದ್‌ಪವಾರ್ ಅವರ ಬಗ್ಗೆ ಇಂಡಿಯಾ ಮೈತ್ರಿಕೂಟದಲ್ಲಿರುವ ಕೆಲ ಪಕ್ಷಗಳು ಅಸಮಾಧಾನ ವ್ಯಕ್ತಪಡಿಸಿವೆ.

ಇಂಡಿಯಾ ಮೈತ್ರಿಕೂಟದ ಪ್ರಮುಖ ವಿರೋಧಿಯಾಗಿರುವ ಪ್ರಧಾನಿ ನರೇಂದ್ರಮೋದಿ ಅವರ ಜತೆ ಪವಾರ್ ವೇದಿಕೆ ಹಂಚಿಕೊಳ್ಳುತ್ತಿರುವುದು ಸರಿಯಲ್ಲ ಎಂಬ ಕಳವಳವನ್ನು ಮೈತ್ರಿಕೂಟದ ಹಲವು ಪಕ್ಷಗಳು ವ್ಯಕ್ತಪಡಿಸಿದ್ದು. ಈ ಕಾರ್ಯಕ್ರಮದಲ್ಲಿ ಪವಾರ್ ಪಾಲ್ಗೊಳ್ಳದಂತೆ ಅವರಗೆ ತಿಳಿ ಹೇಳಿ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಮೇಲೆ ಮೈತ್ರಿಕೂಟದ ಪಕ್ಷಗಳು ಒತ್ತಡ ಹೇರಿವೆ. ಇತ್ತೀಚೆಗಷ್ಟೆ ಸ್ಥಾಪನೆಯಾಗಿರುವ ಮೈತ್ರಿಕೂಟ ಎನ್‌ಡಿಎಗೆ ಸಡ್ಡು ಹೊಡೆದಿದ್ದು, ಮೈತ್ರಿಕೂಟದ ಎಲ್ಲ ಪಕ್ಷಗಳು ಒಗ್ಗಟ್ಟಿನ ಜಪ ಮಾಡುತ್ತಿರುವಾಗಲೇ ಶರದ್‌ಪವಾರ್ ಅವರು ಮೋದಿ ಜತೆವೇದಿಕೆಯಲ್ಲಿ ಕಾಣಿಸಿಕೊಳ್ಳಲು ನಿರ್ಧರಿಸಿರುವುದು ಅಸಮಾಧಾನ ಹೊಗೆಯಾಡಲು ಕಾರಣವಾಗಿದೆ.

ಪವಾರ್ ಅವರ ನಡೆಯ ಬಗ್ಗೆ ಮೈತ್ರಿಕೂಟದಲ್ಲಿ ತೀವ್ರ ಅಪಸ್ವರ ಕೇಳಿ ಬಂದಿದೆ.ಪ್ರಧಾನಿ ಮೋದಿ ಅವರು ಇಂಡಿಯಾ ಮೈತ್ರಿಕೂಟವನ್ನು ಈಸ್ಟ್ ಇಂಡಿಯಾ ಕಂಪನಿ ಇಂಡಯನ್ ಮುಜಾಹಿದ್ದೀನ್ ಉಗ್ರ ಸಂಘಟನೆಗೆ ಹೋಲಿಕೆ ಮಾಡಿದ್ದಾರೆ. ಹೀಗಾಗಿ ಪವಾರ್ ಪ್ರಧಾನಿ ಜತೆ ವೇದಿಕೆ ಹಂಚಿಕೊಳ್ಳುವುದು ಸೂಕ್ತವಲ್ಲ ಎಂದು ಮೈತ್ರಿಕೂಟದ ಕೆಲ ಪಕ್ಷಗಳು ಹೇಳಿವೆ.

**ಇಂಡಿಯಾ ಮೈತ್ರಿಕೂಟದಲ್ಲಿ ಮೋದಿ ಜತೆಗೆ ವೇದಿಕೆ ಹಂಚಿಕೊಳ್ಳುವುದಕ್ಕೆ ಅಪಸ್ವರ ತೆಗೆದಿರುವುದರಿಂದ ಸೋಮವಾರ ನಡೆಯಲಿರುವ ಕಾರ್ಯಕ್ರಮದಲ್ಲಿ ಪವಾರ್ ಭಾಗಿಯಾಗುತ್ತಾರೋ ಇಲ್ಲವೋ ಎಂಬುದು ಕುತೂಹಲ ಮೂಡಿಸಿದೆ. ಇದುವರೆಗೂ ಪವಾರ್ ಅವರು ಕಾರ್ಯಕ್ರಮದಲ್ಲಿ ಭಾಗಿಯಾಗಿರುವ ಕುರಿತು ಯಾವುದೇ ಹೇಳಿಕೆ ನೀಡಿಲ್ಲ.**


**ನವದೆಹಲಿ: ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಗಾಂಧಿ ಅವರು ತಮ್ಮ ಪುತ್ರ ರಾಹುಲ್ ಗಾಂಧಿಗೆ ಮದುವೆ ಮಾಡುವ ಮನಸ್ಸು ಮಾಡಿದ್ದು, ತಕ್ಕ ಹುಡುಗಿಯನ್ನು ಹುಡುಕಿಕೊಡುವಂತೆ ತಮ್ಮನ್ನು ಭೇಟಿಯಾದ ರೈತ ಮಹಿಳೆಯರ ಬಳ ಹೇಳಕೊಂಡಿದ್ದಾರೆ. ಶನಿವಾರ ಹರಿಯಾಣದ ಇಬ್ಬರು ಮಹಿಳಾ ರೈತರೊಂದಿಗೆ ಕೆಲವು ಅಮೂಲ್ಯವಾದ ಸಮಯ ಕಳೆದ ಕಳೆದ ಸೋನಿಯಾ ಗಾಂಧಿ ಅವರು ಈ ವಿಚಾರಗಳನ್ನು ಹಂಚಿಕೊಂಡಿದ್ದಾರೆ.**

ಕಿಡ್ನಿ ಸ್ಟೋನ್ ಕರಗಿಸುವಿಕೆ

ಹೊಟ್ಟೆಯಲ್ಲಿನ ಕಲ್ಲು ಹಾಗೂ ಕಿಡ್ನಿ ಕಲ್ಲು ಕರಗಿಸುವದು, ಕಿಡ್ನಿ ಬಾವು, ಕಿವಿ ಸೋರುವಿಕೆ, ಉಸಿರಾಟದ ತೊಂದರೆ, ಅಸ್ತಮಾ, ಅಲ್ಸರ್ ಹಾಗೂ ರಕ್ತ ಮೂಲವ್ಯಾಧಿ, ಇಸುಬು, ಮಹಿಳೆಯರ ಎಂ.ಸಿ, ಬಿಳಿಸೆರಗು ಸಮಸ್ಯೆ, ಲೀವರ್, ಕೈಕಾಲು ಬಾವು, ಪೀಡ್ಸ್, ಕೈ ನಡುಗುವದು, ತಡಮೂತ್ರ ನಿವಾರಣೆ, ಪಾದಶೂಲಿ ಹಾಗೂ ಹಾರ್ಟ್‌ಗೆ ಸಂಬಂಧಿಸಿದ ಸಮಸ್ಯೆಗಳಿಗೆ ಔಷಧ ನೀಡಲಾಗುವದು.

ಅಂಧ, ಬುದ್ದಿಮಾಂದ್ಯ-ವಿಕಲಚೇತನರಿಗೆ ಉಚಿತ ಔಷಧ

ಈಗಾಗಲೇ ಅನೇಕರು ಗುಣಮುಖರಾಗಿದ್ದಾರೆ.



ಲಕ್ಷ್ಮಣಸಾ ಎಚ್. ಹಾವನೂರ

ನಾಟಿ ವೈದ್ಯರು

ರಿಂಗ್ ರೋಡ, ಕಳಸಾಪೂರ ರಸ್ತೆ-ಗದಗ

ಫೋನ್ : 9901111568

30ನೇ ಜನ್ಮ ದಿನದ ಶುಭಾಶಯಗಳು

ದಿನಾಂಕ 01-08-2023 ಮಂಗಳವಾರ
ಬೆಳಗ್ಗೆ 11-00 ಗಂಟೆಗೆ ಸ್ಥಳ -ಕೃಷ್ಣ ಕಲ್ಯಾಣ ಮಂಟಪ ನವಲಗುಂದ

ಸರ್ವರಿಗೂ ಆದರದ ಸುಸ್ವಾಗತ





ಅರುಣಕುಮಾರ ಜೆ. ಮಜ್ಜಗಿ
ವಕೀಲರು ಹಾಗೂ ರಾಜ್ಯ ಸಂಘಟನಾ ಕಾರ್ಯದರ್ಶಿ
ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ
ಹಿಂದೂಳಿದ ವರ್ಗಗಳ ವಿಭಾಗ.

ಶುಭಾಶಯ ಕೋರುವವರು

ಗೆಳೆಯರ ಬಳಗ, ಶಲವಡಿ, ತಾ: ಅಣ್ಣಿಗೇರಿ

ಬೆಳಗಾವಿ: ಪ್ರಾಕೃತಿಕ, ವ್ಯವಹಾರಿಕ ಮಾತ್ರವಲ್ಲ, ರಾಜಸ್ವ ಸಂಗ್ರಹ ವಿಚಾರದಲ್ಲೂ ಕರ್ನಾಟಕಕ್ಕೆ 'ಮಹಾ' ಪೆಟ್ಟು ಬೀಳುತ್ತಿದೆ. ತವರಲ್ಲೇ ವಾಹನಗಳು ಸಂಚರಿಸಿದರೂ ತೆರಿಗೆ ಸಂದಾಯವಾಗುತ್ತಿರುವುದು ನೆರೆ ರಾಜ್ಯಗಳಲ್ಲಿ ಎನ್ನುವ ಸಂಗತಿ ಆತಂಕಕ್ಕೆ ಕಾರಣವಾಗಿದೆ.

ಬೆಳಗಾವಿ: ರಾಜ್ಯ ಸರಕಾರಕ್ಕೆ ಅತೀ ಹೆಚ್ಚು ತೆರಿಗೆ ಕಟ್ಟು ಜಿಲ್ಲೆ ಬೆಳಗಾವಿ. ಬೆಳಗಾವಿ ಚೇಂಬರ್ ಆಫ್ ಕಾಮರ್ಸ್ ಒಂದು ರಾಜಕೀಯ ಪಕ್ಷದ ಪರವಾಗಿ ಕೆಲಸ ಮಾಡುತ್ತಿರುವುದು ಇಲ್ಲಿನ ಅಭಿವೃದ್ಧಿಗೆ ಕುಂಠಿತವಾಗಿದೆ ಎನ್ನುವ ಮಾತುಗಳು ಇಲ್ಲಿನ ಸಣ್ಣ ಉದ್ಯಮಿಗಳ ಅಳಲಾಗಿದೆ.

ಬೆಳಗಾವಿ: ಗೃಹಲಕ್ಷ್ಮೀ ಯೋಜನೆಯ ಫಲಾನುಭವಿಗಳ ನೋಂದಣಿಗಾಗಿ ಗ್ರಾಮ ಒನ್ ಕೇಂದ್ರದ ಲಾಗಿನ್ ಐಡಿ ದುರ್ಬಳಕೆ ಮಾಡಿಕೊಂಡು ಸಾರ್ವಜನಿಕರಿಂದ ಹಣ ವಸೂಲಿ ಮಾಡಿರುವುದಕ್ಕೆ ಸಂಬಂಧಿಸಿದಂತೆ ಇಬ್ಬರ ವಿರುದ್ಧ ಪ್ರಕರಣವನ್ನು ದಾಖಲಿಸಲಾಗಿದೆ.

## ರಾಜಕೀಯ ಪಕ್ಷದ ಅಂಗ ಸಂಸ್ಥೆಯಾದ ಚೇಂಬರ್ ಆಫ್ ಕಾಮರ್ಸ್ ?

# ಸಭೆ ನಡೆದ ಮೂರು ವರ್ಷವಾಯ್ತು-ಸಂಚಾರ ಸಮಸ್ಯೆ ಇವರಿಗೇಕೆ ಬೇಕು !

ಕನ್ನಡಮ್ಮ ವಿಶೇಷ

ಬೆಳಗಾವಿ: ರಾಜ್ಯ ಸರಕಾರ-ಕ್ಕೆ ಅತೀ ಹೆಚ್ಚು ತೆರಿಗೆ ಕಟ್ಟು ಜಿಲ್ಲೆ ಬೆಳಗಾವಿ. ಬೆಳಗಾವಿ ಚೇಂಬರ್ ಆಫ್ ಕಾಮರ್ಸ್ ಒಂದು ರಾಜಕೀಯ ಪಕ್ಷದ ಪರವಾಗಿ ಕೆಲಸ ಮಾಡುತ್ತಿರುವುದು ಇಲ್ಲಿನ ಅಭಿವೃದ್ಧಿಗೆ ಕುಂಠಿತವಾಗಿದೆ ಎನ್ನುವ ಮಾತುಗಳು ಇಲ್ಲಿನ ಸಣ್ಣ ಉದ್ಯಮಿಗಳ ಅಳಲಾಗಿದೆ.

ಹೌದು. ಬೆಳಗಾವಿ ನಗರದ ಸಂಚಾರ ಸಮಸ್ಯೆಯನ್ನು ನಿವಾರಿಸುವಂತೆ ಇತ್ತೀಚಗೆ ನಗರ ಪೊಲೀಸ್ ಆಯುಕ್ತರನ್ನು ಭೇಟಿಯಾಗಿ ಮನವಿ ಸಲ್ಲಿಸಿದ್ದ ಚೇಂಬರ್ ಆಫ್ ಕಾಮರ್ಸ್‌ನ ಅಧ್ಯಕ್ಷ ಹೇಮೇಂದ್ರ ಪೋರವಾಲ ನೇತೃತ್ವದ ನಿಯೋಗ ಉದ್ಯಮಬಾಗದಲ್ಲಿ ಸಾಕಷ್ಟು ಸಮಸ್ಯೆಗಳಿವೆ. ಅವುಗಳನ್ನು ಬಗೆ ಹರಿಸುವತ್ತ ಲಕ್ಷ ಕೊಡದ ಚೇಂಬರ್ ಆಫ್ ಕಾಮರ್ಸ್‌ನ ಅಧ್ಯಕ್ಷ ಬೇಡವಾದ ವಿಷಯಲ್ಲಿ ಮುಂದೆ ಬರುತ್ತಿರುವುದು ಸಣ್ಣ ಉದ್ಯಮಿಗಳ ಆಕ್ರೋಶಕ್ಕೆ ಕಾರಣವಾಗಿದೆ.

ಬೆಂಗಳೂರು ಬಿಟ್ಟರೆ ಅತಿ ಹೆಚ್ಚು ತೆರಿಗೆ ಪಾವತಿಸುವ ಖ್ಯಾತಿ ಬೆಳಗಾವಿ ಜಿಲ್ಲೆಯ ಕೈಗಾರಿಕೆ ವಲಯದ್ದು. ಪ್ರತಿ ವರ್ಷ ಸರಾಸರಿ 30 ಸಾವಿರ ಕೋಟಿ ರೂಪಾಯಿ ಕೈಗಾರಿಕೆ ವಹಿವಾಟು ನಡೆಸುತ್ತಿರುವ ಬೆಳಗಾವಿ ಜಿಲ್ಲೆಯಲ್ಲಿ ಇಂದಿಗೂ ಪಬ್ಲಿಕ್ ಸೆಕ್ಟರ್ ಕೈಗಾರಿಕೆ ವಸಾಹತು ನಿರ್ಮಾಣಗೊಂಡಿಲ್ಲ. ಕೊನೆ ಪಕ್ಷ ಬೃಹತ್ ಕೈಗಾರಿಕೆಗಳನ್ನು ಸೆಳೆಯುವಲ್ಲೂ ಚೇಂಬರ್ ಆಫ್ ಕಾಮರ್ಸ್ ವಿಫಲವಾಗುತ್ತಿರುವುದು ಜಿಲ್ಲೆಯ ಆರ್ಥಿಕ ಬೆಳವಣಿಗೆಗೆ ಅಡ್ಡಿಯಾಗಿದೆ ಎನ್ನುವ ಮಾತುಗಳು



ಕೇಳಿ ಬರುತ್ತಿವೆ.

ಅಂತಾರಾಷ್ಟ್ರೀಯ ಕಂಪನಿಗಳನ್ನು ಸೆಳೆದು ಜಿಲ್ಲೆಯ ಕೈಗಾರಿಕೆ ವಲಯ ಬಲಗೊಳಿಸಲು ಪ್ರತ್ಯೇಕ 'ಫೈವ್‌ಸ್ಟಾರ್ ಇಂಡಸ್ಟ್ರಿಯಲ್ ಎಕ್ಸಟೆನ್ಶನ್' ಸ್ಥಾಪನೆ ಮಾಡಬೇಕು. ರಸ್ತೆ, ರೈಲು ಮತ್ತು ವಿಮಾನ ಸೌಲಭ್ಯ ಹೊಂದಿರುವ ಬೆಳಗಾವಿಯತ್ತ ಬೃಹತ್ ಕೈಗಾರಿಕೆಗಳನ್ನು ಸೆಳೆಯಲು ಯಶಸ್ವಿಯಾದರೆ ಜಿಲ್ಲೆಯ ಆರ್ಥಿಕ ಸ್ಥಿತಿಯೇ ಬದಲಾಗುತ್ತದೆ. ಸದ್ಯ 200ಕ್ಕೂ ಹೆಚ್ಚು ಫೌಂಡ್ರಿ ಘಟಕ ಹೊಂದಿರುವ ಬೆಳಗಾವಿಯಲ್ಲಿ 'ಫೌಂಡ್ರಿ ಪಾರ್ಕ್' ನಿರ್ಮಿಸಬೇಕು ಎನ್ನುವುದು ಸ್ಥಳೀಯ ಸಣ್ಣ ಉದ್ಯಮಿಗಳ ಒತ್ತಾಯವಾಗಿದ್ದರೂ ಅದನ್ನು ಹೇಮೇಂದ್ರ ಪೋರವಾಲ ಪ್ರಯತ್ನ ಮಾಡದೆ ಇರುವುದು ದುರ್ದೈವದ ಸಂಗತಿ.

ಕೇಂದ್ರ ಸರಕಾರದ ಹೊಸ ಉದ್ಯಮಿಗಳಿಗೆ ಸಾಕಷ್ಟು ಯೋಜನೆಗಳಿವೆ. ಬ್ಯಾಂಕ್‌ಗಳು ಲೋನ್ ನೀಡುತ್ತಿಲ್ಲ. ಸಣ್ಣ ಮತ್ತು ಮದ್ಯಮ ಉದ್ಯಮದಲ್ಲಿ ವ್ಯವಹಾರಿಕ ಪ್ರಕರಣದ ಬೆಳಗಾವಿಯಲ್ಲಿ ಎಂಎಸ್‌ಇಎಫ್‌ಸಿ ಕೌನ್ಸಿಲ್ ಸಭೆ ನಡೆದು ಮೂರು ವರ್ಷವಾಗಿದೆ. ಆರ್ಥಿಕ ವ್ಯವಹಾರದ ಸಮಸ್ಯೆಯ ಬಗ್ಗೆ ಕೋರ್ಟ್ ನಡೆಸುತ್ತಾರೆ. ಇಲ್ಲಿಯೇ ಸಾವಿರು ಪ್ರಕರಣ ಇದ್ದಾವೆ. ಚೇಂಬರ್ ಆಫ್ ಕಾಮರ್ಸ್‌ಗೆ ಸಾಕಷ್ಟು ಸಮಸ್ಯೆ ಇದೆ. ಚೇಂಬರ್ ಆಫ್ ಕಾಮರ್ಸ್ ಅಧ್ಯಕ್ಷ ಹೇಮೇಂದ್ರ ಪೋರವಾಲ್ ಅಧಿಕಾರ ವಹಿಸಿಕೊಂಡ ಬಳಿಕ ಇಲ್ಲಿನ ಕೈಗಾರಿಕಾ ಪ್ರದೇಶದಲ್ಲಿ ಬದಲಾವಣೆಯಾಗಿದ್ದಾರೂ ಏನು ಎನ್ನುವ ಪ್ರಶ್ನೆ ಸಣ್ಣ ಉದ್ಯಮಿಗಳಲ್ಲಿ ಕಾಡುತ್ತಿದೆ. ಕೇವಲ ಒಂದು ರಾಜಕೀಯ ಪಕ್ಷದ ಅಂಗ ಸಂಸ್ಥೆಯಾಗಿ ಕೆಲಸ ಮಾಡುವುದನ್ನು ಬಿಟ್ಟು ಕೈಗಾರಿಕಾ ಉದ್ಯಮಿಗಳಿಗೆ ನ್ಯಾಯ ಕೊಡಿಸುವ ಕೆಲಸ ಮಾಡಬೇಕೆನ್ನುವುದು ಇಲ್ಲಿನ ಸಣ್ಣ ಉದ್ಯಮಿಗಳ ಆಶಯವಾಗಿದೆ.

## ಗೃಹಲಕ್ಷ್ಮೀ ನೋಂದಣಿಗೆ ಲಾಗಿನ್ ದುರ್ಬಳಕೆ-ಹಣ ವಸೂಲಿ ಪ್ರಕರಣ: ಇಬ್ಬರ ವಿರುದ್ಧ ದೂರು ದಾಖಲು

ಬೆಳಗಾವಿ: ಗೃಹಲಕ್ಷ್ಮೀ ಯೋಜನೆಯ ಫಲಾನುಭವಿಗಳ ನೋಂದಣಿಗಾಗಿ ಗ್ರಾಮ ಒನ್ ಕೇಂದ್ರದ ಲಾಗಿನ್ ಐಡಿ ದರ್ಬಳಕೆ ಮಾಡಿಕೊಂಡು ಸಾರ್ವಜನಿಕರಿಂದ ಹಣ ವಸೂಲಿ ಮಾಡಿರುವುದಕ್ಕೆ ಸಂಬಂಧಿಸಿದಂತೆ ಇಬ್ಬರ ವಿರುದ್ಧ ಪ್ರಕರಣವನ್ನು ದಾಖಲಿಸಲಾಗಿದೆ.

ಬೆಳಗಾವಿ ನಗರದ ಚವಾಟಗಲ್ಲಿಯಲ್ಲಿ ಜನತಾ ಆನ್ ಲೈನ್ ಸೆಂಟರ್ ನಡೆಸುತ್ತಿರುವ ಅದೃಶ್ ಆರ್.ಟಿ. ಹಾಗೂ ಮುತಗಾ ಗ್ರಾಮ ಒನ್ ಕೇಂದ್ರದ ಕಿರಣ ಚೌಗಲಾ ಎಂಬುವರ ವಿರುದ್ಧ ಬೆಳಗಾವಿ ನಗರದ ಮಾರ್ಕೆಟ್ ಪೊಲೀಸ್ ಠಾಣೆಯಲ್ಲಿ ಪ್ರಕರಣವನ್ನು ದಾಖಲಿಸಲಾಗಿರುತ್ತದೆ.



ಚವಾಟಗಲ್ಲಿಯ ಜನತಾ ಆನ್ ಲೈನ್ ಕೇಂದ್ರದಲ್ಲಿ ಗೃಹಲಕ್ಷ್ಮೀ ಫಲಾನುಭವಿಗಳ ನೋಂದಣಿಗೆ ಹಣ ಪಡೆಯಲಾಗುತ್ತಿದೆ ಎಂಬ ಸಾರ್ವಜನಿಕರ ದೂರಿನ ಮೇರೆಗೆ ಇಂದು ಅಧಿಕಾರಿಗಳ ತಂಡವು ದಾಳಿ ನಡೆಸಿತ್ತು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ಆರ್.ನಾಗರಾಜ್, ಬೆಳಗಾವಿ ತಹಶಿಲ್ದಾರ ಸಿದ್ದರಾಯ ಬೋಸಗಿ ಹಾಗೂ ನಗರ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಭಜಂತ್ರಿ ಅವರು ಜನತಾ ಆನ್ ಲೈನ್ ಕೇಂದ್ರದ ಮೇಲೆ ದಾಳಿ ನಡೆಸಿ ಅಕ್ರಮವನ್ನು ಪತ್ತೆ ಮಾಡಿದ್ದರು.

ಇದಾದ ಬಳಿಕ ಸದರಿ ಕೇಂದ್ರಕ್ಕೆ ಬೀಗ ಜಡಿದು ಪೊಲೀಸ್ ಠಾಣೆಯಲ್ಲಿ ದೂರು ನೀಡಿರುತ್ತಾರೆ.

ಗೃಹಲಕ್ಷ್ಮೀ ಯೋಜನೆಯ ಫಲಾನುಭವಿಗಳ ನೋಂದಣಿ ಪ್ರಕ್ರಿಯೆಯಲ್ಲಿ ಅಕ್ರಮ ನಡೆಸಿರುವ ಮುತಗಾ ಗ್ರಾಮ ಒನ್ ಕೇಂದ್ರದ ಪರವಾನಿಗೆಯನ್ನು ಕೂಡ ಅಮಾನತು ಮಾಡಲಾಗುವುದು ಎಂದು ಜಿಲ್ಲಾಧಿಕಾರಿ ನಿತೇಶ್ ಪಾಟೀಲ ತಿಳಿಸಿದ್ದಾರೆ.

# ಬೆಳಗಾವಿಯಲ್ಲಿ ಹೊರ ರಾಜ್ಯದ ವಾಹನಗಳಿಲ್ಲ ಕಡಿವಾಣ

ಬೆಳಗಾವಿ: ಪ್ರಾಕೃತಿಕ, ವ್ಯವಹಾರಿಕ ಮಾತ್ರವಲ್ಲ, ರಾಜಸ್ವ ಸಂಗ್ರಹ ವಿಚಾರದಲ್ಲೂ ಕರ್ನಾಟಕಕ್ಕೆ 'ಮಹಾ' ಪೆಟ್ಟು ಬೀಳುತ್ತಿದೆ. ತವರಲ್ಲೇ ವಾಹನಗಳು ಸಂಚರಿಸಿದರೂ ತೆ-ರಿಗೆ ಸಂದಾಯವಾಗುತ್ತಿರುವುದು ನೆರೆ ರಾಜ್ಯಗಳಲ್ಲಿ ಎನ್ನುವ ಸಂಗತಿ ಆತಂಕಕ್ಕೆ ಕಾರಣವಾಗಿದೆ. ಇನ್ನು ಅಚ್ಚರಿ ಎಂದರೆ, ಬಹುತೇಕ ವಾಹನಗಳು ಸಂಚಾರ ನಿಯಮ ಉಲ್ಲಂಘಿಸಿ ಸಂಚರಿಸುತ್ತಿರುವುದು ಅಕ್ರಮ ಚಟುವಟಿಕೆಗಳ ಸುಳಿವನ್ನು ಬಿಟ್ಟುಕೊಡುತ್ತಿವೆ.

ವಾಹನ ತೆರಿಗೆ ಕರ್ನಾಟಕಕ್ಕಿಂತ ಮಹಾರಾಷ್ಟ್ರ ಮತ್ತು ಗೋವಾ ರಾಜ್ಯದಲ್ಲಿ ಕಡಿಮೆ ಇದೆ ಎಂಬ ಕಾರಣಕ್ಕೆ ಇಲ್ಲಿನ ನಿವಾಸಿಗಳು ಸ್ಥಳೀಯ ಕಾಯಂ ವಿಳಾಸವನ್ನು ನೀಡಿ ಮಹಾರಾಷ್ಟ್ರದಲ್ಲಿ ವಾಹನ ಖರೀದಿಸಿ ನೋಂದಣಿ ಮಾಡಿಸುತ್ತಿದ್ದಾರೆ. ಮತ್ತೊಂದೆಡೆ ಹಳೆ ವಾಹನಗಳನ್ನು ಅಗ್ಗದಲ್ಲಿ ದರದಲ್ಲಿ ಖರೀದಿಸಿ ರಾಜ್ಯದಲ್ಲಿ ಬಳಕೆ ಮಾಡುತ್ತಿದ್ದಾರೆ. ಇದ-ರಿಂದ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಸಂದಾಯಬೇಕಿದ್ದ ಕೋಟ್ಯಂತರ ರು. ತೆರಿಗೆ ಮಹಾ ಪಾಲಾಗುತ್ತಿದೆ. ಅಲ್ಲದೆ, ಯಾವುದೇ ಅಕ್ರಮಗಳು, ಸಂಚಾರಿ ನಿಯಮಗಳ ಉಲ್ಲಂಘನೆ ನಡೆದಂಥ ವೇಳೆಯಲ್ಲೂ ಸಂಚಾರಿ ಪೊಲೀಸರಿಗೆ ಕ್ರಮ ಜರುಗಿಸಲು ಕಷ್ಟವಾಗುತ್ತಿದೆ.

ಸಾರಿಗೆ ಮತ್ತು ಪೊಲೀಸ್ ಇಲಾಖೆಗಳ ಮಾಹಿತಿ ಪ್ರಕಾರ ಮಹಾರಾಷ್ಟ್ರ ಮತ್ತು



### ಹಳೆ ವಾಹನಗಳ ಹೆಚ್ಚಳ

ಜಿಲ್ಲೆಯಲ್ಲಿ ವಾರ್ಷಿಕ ಆಟೋ, ಕಾರ್, ಬೈಕ್, ಲಾರಿ ಸೇರಿದಂತೆ ಇನ್ನಿತರ 38 ರಿಂದ 45 ಸಾವಿರ ಹೊಸ ವಾಹನಗಳ ನೋಂದಣಿಯಾಗುತ್ತಿದೆ. ಆದರೆ, ಕಳೆದ ನಾಲ್ಕೈದು ವರ್ಷಗಳ ಅವಧಿಯಲ್ಲಿ ಗಡಿಭಾಗದ ಪ್ರದೇಶಗಳಲ್ಲಿ ವಾಹನಗಳ ನೋಂದಣಿ ಕಡಿಮೆಯಾಗಿದೆ. ಅಥಣಿ, ಚಿಕ್ಕೋಡಿ, ಕಾಗವಾಡ, ಖಾನಾಪೂರ, ನಿಪ್ಪಾಣಿ, ರಾಯಬಾಗ, ಬೆಳಗಾವಿ ಗ್ರಾಮೀಣ ತಾಲೂಕು ಮತ್ತು ಬೆಳಗಾವಿ ನಗರ ಪ್ರದೇಶಗಳಲ್ಲಿನ ಜನರು ಮಹಾರಾಷ್ಟ್ರ ಮತ್ತು ಗೋವಾ ರಾಜ್ಯಗಳಲ್ಲಿ ನೋಂದಣಿಯಾಗಿರುವ ಹಳೆ ವಾಹನಗಳನ್ನು ಅಧಿಕ ಪ್ರಮಾಣದಲ್ಲಿ ಖರೀದಿಸುತ್ತಿದ್ದಾರೆ. ಈ ವಾಹನಗಳಿಗೆ ಸೂಕ್ತ ದಾಖಲಾತಿಗಳನ್ನು ಹೊಂದಿರುವುದಿಲ್ಲ ಎಂದು ಸಂಚಾರಿ ಪೊಲೀಸರು ತಿಳಿಸಿದ್ದಾರೆ.

ಗೋವಾ ರಾಜ್ಯಗಳಲ್ಲಿ ವಾಹನ ನೋಂದಣಿಯಾಗಿರುವ ಸುಮಾರು 3.20 ಲಕ್ಷ ದಷ್ಟು ಬೈಕ್,ಕಾರು, ಗೂಡ್ಸ್ ಇನ್ನಿತರ ವಾಹನಗಳು ಜಿಲ್ಲೆಯಲ್ಲಿ ಸಂಚಾರ ನಡೆಸುತ್ತಿವೆ. ವಾರ್ಷಿಕ 12 ರಿಂದ 16 ಸಾವಿರ ದಷ್ಟು ಹೊಸ ವಾಹನಗಳು ಮಹಾರಾಷ್ಟ್ರದಲ್ಲಿ ವಾಹನ ನೋಂದಣಿಯಾಗಿ ಕರ್ನಾಟಕ್ಕೆ ಬರುತ್ತಿವೆ. ಅದರಲ್ಲಿ ಬೆಳಗಾವಿ ಜಿಲ್ಲೆಯ ಅಥಣಿ, ಚಿಕ್ಕೋಡಿ, ಕಾಗವಾಡ, ಖಾನಾಪೂರ, ನಿಪ್ಪಾಣಿ, ರಾಯಬಾಗ, ಬೆಳಗಾವಿ ಗ್ರಾಮೀಣ ಮತ್ತು ನಗರ, ವಿಜಯಪುರ ಜಿಲ್ಲೆಗಳಲ್ಲಿ ಅಧಿಕ ಪ್ರಮಾಣದಲ್ಲಿ ಸಂಚಾರ ನಡೆಸುತ್ತಿವೆ. ಆದರೆ, ಇಲ್ಲಿಯವರೆಗೆ ಯಾವುದೇ ವಾಹನ ಮಾಲೀಕರು ಕರ್ನಾಟಕದಲ್ಲಿ ನೋಂದಣಿ ಮಾಡಿಕೊಂಡಿಲ್ಲ ಎಂದು ಸಾರಿಗೆ ಅಧಿಕಾರಿಗಳು ತಿಳಿಸಿದ್ದಾರೆ.

## ಇಂದು ಗುರುವಂದನಾ ಕಾರ್ಯಕ್ರಮ

ಬೆಳಗಾವಿ: ಗುರುಪ್ರಸಾದ ನಗರದ ಸಪ್ತಸ್ವರ ಸಂಗೀತ ಮಹಾವಿದ್ಯಾಲದವರು ಇದೇ ದಿ. 30 ರವಿವಾರದಂದು ಮಂಜಾನೆ 9 ಗಂ-ಟೆಗೆ ಹಿಂದವಾಡಿಯ ಗೋಮಟೇಶ ವಿದ್ಯಾಪೀಠ ಪಕ್ಕದಲ್ಲಿರುವ ಐಎಂ.ಇ.ಆರ್. ಸಭಾಭವನದಲ್ಲಿ ಗುರುವಂದನಾ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ.

ಮುಖ್ಯ ಅತಿಥಿಗಳಾಗಿ ಖ್ಯಾತ ಸಂಗೀತಗಾರ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ನಿವೃತ್ತ ವ್ಯವಸ್ಥಾಪಕರಾದ ಮುಕುಂದ ಗೋರೆಯವರು ಆಗಮಿಸಲಿದ್ದಾರೆ. ಈ ಸಂದರ್ಭದಲ್ಲಿ ಶಾಸ್ತ್ರೀಯ ಸಂಗೀತ, ಲಘು ಸಂಗೀತ, ಹಾರ್ಮೋನಿಯಮ್, ತಬಲಾ, ಕಥಕ್ ನೃತ್ಯ, ಭರತ ನಾಟ್ಯಗಳು ನಡೆಯಲಿದ್ದು ಆಸಕ್ತರು ಕಾರ್ಯಕ್ರಮದ ಸದುಪಯೋಗ ಪಡೆಯುವಂತೆ ಸಂಘಟಕರು ಕೇಳಿಕೊಂಡಿದ್ದಾರೆ.

# ಬೆಳಗಾವಿಯಲ್ಲಿ ಶ್ರದ್ಧಾ, ಭಕ್ತಿಯಿಂದ ಆಚರಿಸಿದ ಮೊಹರಂ

ಬೆಳಗಾವಿ: ಬಹುಸಂಸ್ಕೃತಿಗಳ ನಗರ ಬೆಳಗಾವಿಯಲ್ಲಿ ಮೊಹರಂ ಹಬ್ಬದ ಕೊನೆಯ ದಿನವನ್ನು ಶನಿವಾರ ಶ್ರದ್ಧಾ, ಭಕ್ತಿಯಿಂದ ಆಚರಿಸಲಾಯಿತು.

ತ್ಯಾಗ, ಬಲಿದಾನಗಳ ಸಂಕೇತವಾಗಿರುವ ಈ ಹಬ್ಬವನ್ನು ಹಿಂದೂ-ಮುಸ್ಲಿಂ ಮತ್ತು ಇತರೆ ಸಮುದಾಯದವರು ಒಟ್ಟಿಗೆ ಸೇರಿ ಆಚರಿಸಿ, ಸೌಹಾರ್ದತೆ ಮೆರೆದರು. ಖಂಜರಗಲ್ಲಿ, ದರ್ಬಾರ್‌ಗಲ್ಲಿ, ಗಾಂಧಿನಗರ, ಟೋಪಿಗಲ್ಲಿ, ರವಿವಾರಪೇಟೆ ಒಳಗೊಂಡು ನಗರದ ವಿವಿಧ ಬಡಾಣೆಗಳಲ್ಲಿ ಪ್ರತಿಷ್ಠಾಪನೆಗೊಂಡಿದ್ದ ಪಂಜಾ, ತಾಬೂತ (ತಾಜಿಯಾ)ಗಳು ಹಬ್ಬದ ಹತ್ತನೇ ದಿನವಾದ ಶನಿವಾರ ಬೆಳಗ್ಗೆ ದರ್ಬಾರ್‌ಗಲ್ಲಿ ಸಮ್ಮಿಲನಗೊಂಡು, ನಂತರ ತಮ್ಮ ಬಡಾವಣೆ ಸ್ಥಳಕ್ಕೆ



ಮರಳಿದವು.

ಪಂಜಾಗಳ ಈ ಅಪೂರ್ವ ಮಿಲನ ನೋಡಲು ಎಲ್ಲ ಧರ್ಮಿಯರು ನೆರೆದಿದ್ದರು. ಇದಕ್ಕಾಗಿ ದರ್ಬಾರಗಲ್ಲಿಯ ಶೇರ್‌ಖಾನ್ ಬಂಧುಗಳು ಎಲ್ಲ ರೀತಿಯ ವ್ಯವಸ್ಥೆ ಮಾಡಿದ್ದರು. ಭಕ್ತರು 'ಯಾ ಹಸನ್ ಯಾ ಹುಸೇನ್, ಹಸೇನ್ ಹುಸೇನ್ ಕೀ ದೊಸ್ತರಾರ್‌ಧ್ದೀನ್'ಎಂದು ಜಯ ಘೋಷ ಹಾಕಿ ಭಕ್ತಿ ಸಮರ್ಪಣೆ ಮಾಡಿದರು.

ಮುಸ್ಲಿಂ ಧರ್ಮಿಯರು ಧರ್ಮಕ್ಕಾಗಿ ತ್ಯಾಗ, ಬಲಿದಾನ ಮಾಡಿದ ಹಸೇನ್, ಹುಸೇನರ ಸ್ಮರಣೆಗೆ ಈ ದಿನದ ಆಚರಣೆ ಮಾಡುತ್ತಾರೆ. ಇದನ್ನು ಸಂಭ್ರಮವಾಗಿ ನಡೆಸದೆ, ಭಕ್ತಿ ಸಮರ್ಪಣೆಗೆ ಸೀಮಿತಗೊಳಿಸಿಕೊಂಡಿರುತ್ತಾರೆ.

ಹತ್ತು ದಿನಗಳ ಕಾಲ ಪ್ರತಿಷ್ಠಾಪನೆಗೊಳ್ಳುವ ಪಂಜಾ, ತಾಜಿಯಾಗಳು ಕೊನೆಯ ದಿನದ ಸಂಜೆ ಹಿಂದು ಧರ್ಮದ ಆರಾಧ್ಯ ದೈವ ಗಣಪತಿಯಂತೆ ವಿಸರ್ಜನೆಗೊಳ್ಳುತ್ತವೆ. ಅದೇ ಮಾದರಿಯ ಮೆರವಣಿಗೆ ಮತ್ತು ಅವರದೆಯಾದ ರೀತಿಯಲ್ಲಿ ಪೂಜಾ ವಿಧಿ ವಿಧಾನಗಳು ನಡೆಯುತ್ತವೆ. ಮೊರಂದಲ್ಲಿ ಭಕ್ತರು ಕಿಚ್ಚು ಹಾಯುವ ಪದ್ಧತಿ ಇದೆ. ಖತಲ್‌ರಾತ್ರಿಯ ದಿನ ಇಡೀ ರಾತ್ರಿ ವೈವಿಧ್ಯಮಯ ಕಾರ್ಯಕ್ರಮಗಳು ನಡೆಯುತ್ತವೆ.

# ಸ್ಮಾರ್ಟ್‌ಸಿಟಿ ನಗರದಲ್ಲಿ ಕಸದ ಸಮಸ್ಯೆಗೆ ಮುಕ್ತಿ ಎಂದು ?

## ಚರಂಡಿಯಲ್ಲಿ ಕಸದ ರಾಶಿ – ಸಾಂಕ್ರಾಮಿಕ ರೋಗದ ಭೀತಿಯಲ್ಲಿ ಜನತೆ

ಬೆಳಗಾವಿ: ಬೆಂಗಳೂರು ಬಿಬಿಎಂಪಿ ಬಿಟ್ಟರೆ ರಾಜ್ಯದ ಎರಡನೇ ದೊಡ್ಡ ಮಹಾನಗರ ಪಾಲಿಕೆಗೆ ಎಂದು ಹೆಗ್ಗಳಿಕೆಗೆ ಪಾತ್ರವಾಗಿರುವ ಸ್ಮಾರ್ಟ್ ಸಿಟಿಯ ಬೆಳಗಾವಿ ಪಾಲಿಕೆಯಲ್ಲಿ ಕಸ ವಿಲೇವಾರಿ ಮಾಡುವುದು ದೊಡ್ಡ ಸಮಸ್ಯೆಯಾಗಿ ಕಾಡುತ್ತಿರುವುದು ಸಾರ್ವಜನಿಕರಿಗೆ ಕಿರಿಕಿ-ರಿಯುಂಟಾಗಿದೆ.

ಮಹಾನಗರ ಪಾಲಿಕೆಯ ಅಧಿಕಾರಿಗಳು ಹಾಗೂ ಪೌರಕಾರ್ಮಿಕರು ಸಾರ್ವಜನಿಕರಿಗೆ ಎಷ್ಟೆ ಮಾಹಿತಿ, ಜಾಗೃತಿ ಮೂಡಿಸಿದರೂ ನಗರದ ಜನರು ರಸ್ತೆಯ ಮಧ್ಯದಲ್ಲಿಯೇ ತಾಜ್ಯ ಕಸ ಸುರಿಯುತ್ತಿದ್ದು ಪಾದಚಾರಿಗಳಿಗೆ ರೋಗದ ಭೀತಿಗೆ ಒಳಗಾಗುತ್ತಿದ್ದಾರೆ.

ನಗರದ ಗಣಪತಿ ಗಲ್ಲಿ, ಮಾರ್ಕೆಟ್ ರಸ್ತೆ, ಖಡೇಬಜಾರ್, ಲಕ್ಷ್ಮೀ ಟೆಕಡಿ, ಎಪಿಎಂಸಿ ಮಾರ್ಕೆಟ್, ಕೇಂದ್ರ ಬಸ್ ನಿಲ್ದಾಣ, ಪೋರ್ಟ್ ರಸ್ತೆ, ರುಕ್ಮೀಣಿ ನಗರ, ಅಜಂನಗರ, ಉಜ್ವಲ್ ನಗರ, ಸರದಾರ್ಸ್ ಮೈದಾನದ ಹಿಂಬಂದಿಯ ಆವರಣ, ಬಿಮ್ಸ್ ಎದುರಿನ ರಸ್ತೆ, ರಾಮದೇವ ಹೊಟೇಲ್, ಮಹಾಂತೇಶ ನಗರ, ರಾಮತೀರ್ಥನಗರ, ಕುಮಾರಸ್ವಾಮಿ ಲೇಔಟ್ ಸೇರಿದಂತೆ ನಗರದ ಪ್ರಮುಖ ರಸ್ತೆಗಳಲ್ಲಿ ಕಸದ ರಾಶಿ ಬಿದ್ದಿರುವ ರಾಶಿಗಳು ಕಣ್ಣಿಗೆ ರಾರಾಜಿಸುತ್ತಿವೆ.



ಮಳೆಗಾಲದಲ್ಲಿ ಎಲ್ಲಂದರಲ್ಲಿ ಕಸ ಹಾಕುತ್ತಿರುವುದರಿಂದ ಸೊಳ್ಳೆಗಳ ಉತ್ಪತ್ತಿ ತಾಣವಾಗಿ ಪರಿಣಮಿಸಿದ್ದು ಸಾರ್ವನಿಕರಿಂದ ಇವುಗಳ ಕಡಿತದಿಂದ ವಿವಿಧ ರೋಗಗಳಿಗೆ ಒಳಗಾಗುತ್ತಿದ್ದಾರೆ. ಇದರಿಂದ ನಗರದ ಜನರು ಭಯದ ವಾತಾವರಣದಲ್ಲಿ ಬದುಕು ಸಾಗಿಸುತ್ತಿದ್ದಾರೆ. ಕೊಳೆತು ದುರ್ನಾತ ಬೀರುವ ಕಸ ನಾನಾ ರೋಗಗಳನ್ನು ಉಂಟುಮಾಡುತ್ತಿವೆ. ನಗರದ ಜನರು ಮೂಗು ಮುಚ್ಚಿಕೊಂಡು ಸಂಚಾರ ನಡೆಸುವ ಪರಿಸ್ಥಿತಿ ನಿರ್ಮಾಣವಾಗಿದ್ದು ಮಾತ್ರ ಸತ್ಯ.

ಹೊಟೇಲ್‌ನ ತ್ಯಾಜ್ಯ, ಮಾಂಸ, ಕೊಳೆತ ತರಕಾರಿ, ಕಸದ ಬ್ಯಾಗಗಳನ್ನು ರಸ್ತೆಯ ಪಕ್ಕದಲ್ಲಿ ಅಲ್ಲಲ್ಲಿ ಎಸೆಯುವುದರಿಂದ ಪೌರಕಾರ್ಮಿಕರು ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ಸ್ಥಳೀಯರು ಆರೋಪಿಸುತ್ತಿದ್ದಾರೆ. ಈ ಕುರಿತು ಪೌರಕಾರ್ಮಿಕರನ್ನು ಪ್ರಶ್ನಿಸಿದರೆ ಒಂದು ದಿನ ಬಿಟ್ಟು ಒಂದು ದಿನ ಕಸ ವಿಲೇವಾರಿ ಮಾಡುತ್ತೇವೆ. ಬೇಕಾದವರಿಗೆ ದೂರು ನೀಡಿ ಎಂದು ಹೇಳುತ್ತಾರೆ.ಕಸದ ಸಮಸ್ಯೆ ಹೀಗೆ ಮುಂದುವರೆದರೆ ಮಾರಣಾಂತಿಕ ಕಾಯಿಲೆ ಬರುವುದು ಸಹಜ.

ನಗರದ ಪ್ರಮುಖ ರಸ್ತೆಯ ಪಕ್ಕದಲ್ಲಿ ಕಸ ಎಸೆಸುವುದನ್ನು ವಿಲೇವಾರಿ ಮಾಡುವುದೇ ದೊಡ್ಡ ಸಮಸ್ಯೆಯಾಗಿದೆ. ಮಹಾನಗರ ಪಾಲಿಕೆ ಹಾಗೂ ಪರಿಸರ ಪ್ರೇಮಿಗಳು ಇಲ್ಲಿ ಕಸ ಹಾಕಬೇಡಿ ಎಂದು ನಾಮಫಲಕ ಹಾಕಿದ್ದರೂ ಸಹ ಕಸ ಎಸೆಯುವವರ ಸಂಖ್ಯೆ ಮಾತ್ರ ಕಡಿಮೆಯಾಗಿಲ್ಲ ಎನ್ನುವುದು ವಿಪರ್ಯಾಸದ ಸಂಗತಿ.


### ಚರಂಡಿಯಲ್ಲಿ ಕಸದ ರಾಶಿ

ನಗರದಲ್ಲಿ ಖಾಲಿ ಪ್ರದೇಶ ಹಾಗೂ ನಾಲೆಗಳ ಮೇಲೆ ಕಟ್ಟಡ ನಿರ್ಮಾಣ ಮಾಡಿರುವುದರಿಂದ ಬಹುತೇಕ ರಸ್ತೆ ಬದಿ ಹಾಗೂ ಕರೆಗಳಲ್ಲಿ ಮಾತ್ರ ಕಸ ತುಂಬಿಲ್ಲ. ಚರಂಡಿಗಳಲ್ಲಿ ಪ್ಲಾಸ್ಟಿಕ್ ಕವರ್, ಮನೆಯ ಮುಂದೆ ತ್ಯಾಜ್ಯ ಸುರಿಯುವುದರಿಂದ ಮಳೆಯ ನೀರು ಸರಾಗವಾಗಿ ಹರಿಯುತ್ತಿಲ್ಲ. ಪರಿಣಾಮ ನೀರು ನಿಂತು ಸೊಳ್ಳೆಗಳ ಹಾವಳಿ ಹೆಚ್ಚಾಗುತ್ತಿದೆ. ಕಸ ಸುರಿದು ಅದಕ್ಕೆ ಬೆಂಕಿ ಹಚ್ಚುವುದರಿಂದ ವಾಯು ಮಾಲಿನ್ಯ ಹೆಚ್ಚಾಗಿ ಇದ-ರಿಂದ ಅನೇಕ ರೋಗಗಳು ಹರಡುವ ಭೀತಿಯಲ್ಲಿ ನಗರದ ಜನರಿದ್ದಾರೆ. ಪಾಲಿಕೆ ಅಧಿಕಾರಿಗಳು ಎಚ್ಚೆತ್ತುಕೊಂಡು ಈ ಸಮಸ್ಯೆಗೆ ಮುಕ್ತಿ ದೊರಕಿಸಿ ಕೊಡಬೇಕೆನ್ನುವುದು ಸಾರ್ವಜನಿಕರ ಒತ್ತಾಯವಾಗಿದೆ.

# ಹೆಸರಿಗೆ ಸಿಗುತ್ತಿಲ್ಲ ಕನಿಷ್ಠ ಬೆಂಬಲ ಬೆಲೆ

ಬೆಳಗಾವಿ: ಜಿಲ್ಲೆಯಲ್ಲಿ ಹೆಸರು ಬೆಳೆ ರಾಶಿ ಆರಂಭವಾಗಿ ಮೂರು ವಾರ ಕಳೆದಿದೆ. ಆದರೆ, ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಯೋಜನೆಯಡಿ ಜಿಲ್ಲೆಯಲ್ಲಿ ಹೆಸರು ಖರೀದಿ ಕೇಂದ್ರ ಇನ್ನೂ ಆರಂಭವಾಗಿಲ್ಲ. ಹೀಗಾಗಿ ಆರ್ಥಿಕ ಸಂಕಷ್ಟಕದಲ್ಲಿರುವ ರೈತರು ಎಂಎಸ್‌ಪಿಗಿಂತ ಕಡಿಮೆ ದರದಲ್ಲಿ ಹೆಸರು ಮಾರಾಟ ಮಾಡುವಂತಾಗಿದೆ.

ಮುಂಗಾರು ಹಂಗಾಮಿನಲ್ಲಿ ಜಿಲ್ಲೆಯಲ್ಲಿ 40,782 ಹೆಕ್ಟೇರ್ ಪ್ರದೇಶದಲ್ಲಿ ರೈತರು ಹೆಸರು ಬಿತ್ತನೆ ಮಾಡಿದ್ದರು. ಆಗಸ್ಟ್ ಮೊದಲ ವಾರದಿಂದ ಮಳೆಯಿದ್ದರೂ ರೈತರು ಹೆಸರು ಬೆಳೆ ರಾಶಿ ಆರಂಭಿಸಿದ್ದಾರೆ. ಕೆಲ ರೈತರು ಸ್ಥಳೀಯ ವ್ಯಾಪಾರಿಗಳಿಗೆ ಗುಣಮಟ್ಟದ ಆಧಾರದ ಮೇಲೆ ಎಂಎಸ್‌ಪಿಗಿಂತ ಕಡಿಮೆ ದರದಲ್ಲಿ



ಕ್ವಿಂಟಲ್‌ಗೆ 6,450 ರಿಂದ 6,900 ರೂ. ವರೆಗೆ ಮಾರಾಟ ಮಾಡುತ್ತಿದ್ದಾರೆ.

7,196 ರೂ. ದರ ನಿಗದಿ: ಸರ್ಕಾರ ಕನಿಷ್ಠ ಬೆಂಬಲ ಬೆಲೆ ಯೋಜನೆ ಯಡಿ ಖರೀದಿ ಕೇಂದ್ರಗಳಲ್ಲಿ ಕ್ವಿಂಟಾಲ್ ಹೆಸರಿಗೆ 7,196 ರೂ. ದರ ನಿಗದಿ ಮಾಡಿದೆ. ಆದರೆ, ಮಾರುಕಟ್ಟೆಗಳಲ್ಲಿ ಇದಕ್ಕಿಂತ ಕಡಿಮೆ ದರದಲ್ಲಿ ಹೆಸರು ಮಾರಾಟವಾಗುತ್ತಿದೆ. ಇದ-ರಿಂದ ರೈತರಿಗೆ ಕ್ವಿಂಟಾಲ್‌ಗೆ 500 ರೂ.ನಿಂದ ರಿಂದ 800 ರೂ. ನಷ್ಟ ಉಂಟಾಗುತ್ತಿದೆ. ಹೆಸರು ರಾಶಿ ಆರಂಭಗೊಂಡು ಮೂರು ವಾರ ಕಳೆದಿದ್ದರೂ ರೈತರ ನೋಂದಣಿ ಪ್ರಕ್ರಿಯೆಯೇ ಆರಂಭವಾಗಿಲ್ಲ.

ಅನ್ನದಾತರ ಅಸಮಾಧಾನ: ರಾಜ್ಯದಲ್ಲೇ ಅತಿ ಹೆಚ್ಚು ಪ್ರಮಾಣದಲ್ಲಿ ಹೆಸರು ಬೆಳೆಯುವ ಜಿಲ್ಲೆಗಳಲ್ಲಿ ಸರ್ಕಾರ ರಾಶಿ ಮುನ್ನವೇ ಖರೀದಿ ಕೇಂದ್ರ ತೆರೆಯಬೇಕು. ಆದರೆ, ಈ ವರ್ಷ ಒಂದೂ ಕೇಂದ್ರ ಆರಂಭವಾಗಿಲ್ಲ. 2019-20ನೇ ಸಾಲಿನ ಅವಧಿಯಲ್ಲಿ ಮುಂಗಾರು ಮತ್ತು ಹಿಂಗಾರು ಹಂಗಾಮಿನ ಬೆಳೆಗಳ ರಾಶಿ ಆರಂಭವಾಗುತ್ತಿದ್ದಂತೆ ಜಿಲ್ಲಾಡಳಿತ ಕೇಂದ್ರ ಆರಂಭಿಸಿತ್ತು. ಆದರೆ, ಈ ವರ್ಷ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ರೈತ ಸಂಘ, ಹಸಿರು ಸೇನೆ ಜಿಲ್ಲಾಧ್ಯಕ್ಷ ಚೂನಪ್ಪ ಪೂಜೇರಿ, ರಾಘವೇಂದ್ರ ನಾಯಕ, ರವಿ ದೂರಿದ್ದಾರೆ.

## ಗ್ರಾಮ ಒನ್ ಕೇಂದ್ರ ಸೀಜ್?

ಚಿಕ್ಕೋಡಿ: ರಾಜ್ಯ ಕಾಂಗ್ರೆಸ್ ಸರ್ಕಾರ ಇತ್ತೀಚೆಗಷ್ಟೇ ಗೃಹಲಕ್ಷ್ಮಿ ಯೋಜನೆಗೆ ಚಾಲನೆ ನೀಡಿದ್ದು, ರಾಜ್ಯಾದ್ಯಂತ ಅರ್ಜಿ ಸ್ವೀಕಾರ ಪ್ರಕ್ರಿಯೆ ಪ್ರಾರಂಭವಾಗಿದೆ. ಇದನ್ನೇ ಕೆಲವರು ಬಂಡವಾಳ ಮಾಡಿಕೊಂಡಿದ್ದು ವಾಮಮಾರ್ಗದ ಮೂಲಕ ಜನಸಾಮಾನ್ಯರ ಬಳಿ ಹೆಚ್ಚುವರಿ ಹಣ ಪಡೆ-ಯುತ್ತಿದ್ದಾರೆ ಎಂಬ ಆರೋಪಗಳು ಕೇಳಿ ಬಂದಿದೆ.

ಅಥಣಿ ತಾಲೂಕಿನ ಅವರಖೋಡ ಗ್ರಾಮದಲ್ಲಿ ಇಂಥಹದ್ದೇ ಘಟನೆಯೊಂದು ನಡೆದದ್ದು ಆರೋಪ ಕೇಳಿ ಬಂದ ತಕ್ಷಣ ಅಧಿಕಾರಿಗಳು ದಾಳಿ ಮಾಡಿ ಆ ಸೈಬರ್ ಅಂಗಡಿ ಸೀಜ್ ಮಾಡಿದ್ದಾರೆ.ಅದಕ್ಕೂ ಮುನ್ನ ಅರ್ಜಿ ಹಾಕಲು ಬಂದ ಫಲಾನುಭವಿಗಳಿಗೆ ಸೈಬರ್ ಅಂಗಡಿ ಸಿಬ್ಬಂದಿ ಆವಾಜ್ ಹಾಕಿದ್ದು ಆ ದೃಶ್ಯ ಕೂಡ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಗೃಹಲಕ್ಷ್ಮಿ ಯೋಜನೆಗೆ ರಾಜ್ಯ ಸರ್ಕಾರ ಉಚಿತವಾಗಿ ಅರ್ಜಿ ಹಾಕಬಹುದು ಎಂದು ಹೇಳಿದೆ.

ಆದರೆ, ನೀವೇಕೆ ಗ್ರಾಹಕರಿಂದ ಹೆಚ್ಚುವರಿ ಹಣ ಪಡೆಯುತ್ತೀದ್ದೀರಿ ಎಂದು ಅರ್ಜಿ ಹಾಕಲು ಬಂದ ಫಲಾನುಭವಿಯೊಬ್ಬರು ಪ್ರಶ್ನೆ ಮಾಡಿದ್ದರು. ಅದಕ್ಕೆ ಗ್ರಾಮ ಒನ್ ಸೈಬರ್ ಸಿಬಂದಿಯು ಉಡಾಫೆ ಉತ್ತರ ನೀಡುತ್ತಾ ಆವಾಜ್ ಹಾಕಿದ್ದರು.

ಪ್ರತಿ ತಿಂಗಳು ನನಗೆ 18 ಸಾವಿರ ಹಣ ನೀಡಿ, ಆಗ ನಾನು ಸಹ ಉಚಿತವಾಗಿ ಅರ್ಜಿ ಸಲ್ಲಿಕೆ ಮಾಡಿ ಕೊಡುತ್ತೇನೆ ಎಂದು ಗ್ರಾಹಕರಿಗೆ ಉಡಾಫೆ ಉತ್ತರ ನೀಡಿದ್ದರು. ಇದನ್ನು ಗ್ರಾಕಹರೊಬ್ಬರು ತಮ್ಮ ಮೊಬೈಲ್‌ನಲ್ಲಿ ವಿಡಿಯೋ ಸೆರೆ ಹಿಡಿದಿದ್ದರು.

ಅವರಖೋಡ ಗ್ರಾಮ ಒನ್ ಸಿಬಂದಿ ಹಾಲಪ್ಪ ಲೋಕೂರ ಎಂಬುವರು ಗೃಹಲಕ್ಷ್ಮಿ ಯೋಜನೆಗೆ ಅರ್ಜಿ ಹಾಕಲು ಸಾರ್ವಜನಿಕರಿಂದ 100- 200 ರೂಪಾಯಿ ಹಣ ಪಡೆಯುತ್ತಿದ್ದಾರೆ ಎಂದು ಜಾಲತಾಣಗಳಲ್ಲಿಯೇ ಗ್ರಾಹಕರು ಆರೋಪ ಮಾಡಿದ್ದರು. ಇದಕ್ಕೆ ಕ್ಯಾರೆ ಎನ್ನದ ಹಾಲಪ್ಪ ಅವರೊಂದಿಗೆ ಮಾತಿಗೆ ಮಾತು ಬೆಳೆಸಿದ್ದಲ್ಲದೇ ಏನಾದರೂ ಮಾಡಿಕೊಳ್ಳಿ ಎಂದು ದರ್ಪ ತೋರಿದ್ದರು.

ಆತನ ವರ್ತನೆ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿತ್ತು.ಈ ಕುರಿತು ಅವರಖೋಡ ಗ್ರಾಮದ ಶಾಂತಿನಾಥ ಕಾಗವಾಡ ಮಾತನಾಡಿ, ರಾಜ್ಯ ಸರ್ಕಾರ ಗೃಹಲಕ್ಷ್ಮಿ ಯೋಜನೆಗೆ ಅರ್ಜಿ ಹಾಕಲು ಉಚಿತ ಅಂತ ಘೋಷಣೆ ಮಾಡಿದೆ. ಆದರೆ, ನಮ್ಮ ಗ್ರಾಮದಲ್ಲಿ ಒಂದು ಅರ್ಜಿಗೆ 100 ರೂಪಾಯಿ ಪಡೆಯಲಾಗುತ್ತಿದೆ. ಈ ಬಗ್ಗೆ ನಾವು ಪ್ರಶ್ನೆ ಮಾಡಿದರೆ ಸೈಬರ್ ಸಿಬ್ಬಂದಿ ಕ್ಯಾರೆ ಅನ್ನುತ್ತಿಲ್ಲ ಅಂತ ತಮ್ಮ ಅಸಹಾಯಕತೆ ತೋಡಿಕೊಂಡಿದ್ದರು. ಅಲ್ಲದೇ ನಮ್ಮಂತಹ ಯುವಕರು ಇಂತಹ ಭ್ರಷ್ಟಾಚಾರಕ್ಕೆ ದಾರಿ ಮಾಡಿಕೊಡಬಾರದು ಎಂದು ಮನವಿ ಮಾಡಿಕೊಂಡಿದ್ದರು.

ತಹಶೀಲ್ದಾರ್ ಹೇಳಿದ್ದಿಷ್ಟು: ಈ ವಿಷಯಕ್ಕೆ ಸಂಬಂಧಿಸಿದಂತೆ ಆರಂಭದಲ್ಲಿ ಪ್ರತಿಕ್ರಿಯೆ ನೀಡಿದ್ದ ಅಥಣಿ ತಹಶೀಲ್ದಾರ್ ಬಿ ಎಸ್ ಕಡಕಬಾವಿ, ಅವರಖೋಡ ಗ್ರಾಮ ಒನ್ ಸಿಬಂದಿ ವಿರುದ್ಧ ದೂರು ಕೇಳಿ ಬಂದಿದೆ. ಆದಷ್ಟು ಬೇಗನೆ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ. ಅಲ್ಲದೇ ಸ್ಥಳಕ್ಕೆ ಭೇಟಿ ನೀಡಿ ಈ ಬಗ್ಗೆ ವಿಚಾರಣೆ ಮಾಡಲಾಗುಗವುದು. ಒಂದು ವೇಳೆ ಆರೋಪ ಸಾಬೀತಾದರೆ ನಾವು ಗ್ರಾಮ ಒನ್ ಲಾಗಿನ್ ಹಿಂದಕ್ಕೆ ಪಡೆಯುತ್ತೇವೆ ಎಂದು ಹೇಳಿದ್ದರು.

# ಮುಸ್ಲಿಮರಿಲ್ಲದ ಊರಲ್ಲಿ ಹಿಂದೂಗಳಿಂದಲೇ ಮೊಹರಂ ಆಚರಣೆ

ಬೆಳಗಾವಿ: ಶನಿವಾರ ಮೊಹರಂ ಕೊನೆ ದಿನ. ಮೊಹರಂ ಹಿಂದೂ - ಮುಸ್ಲಿಮರ ಭಾವೈಕ್ಯತೆ ಸಾರುವ ಹಬ್ಬ. ಈ ಹಬ್ಬವನ್ನು ಯಾವುದೇ ತಾರತಮ್ಯವಿಲ್ಲದೇ, ಸರ್ವಧರ್ಮೀಯರು ಪಾಲ್ಗೊಂಡು ಹಬ್ಬವನ್ನು ಆಚರಿಸುತ್ತಾರೆ.

ಮೊಹರಂ ಹಬ್ಬ ಮುಸ್ಲಿಮರಿಗೆ ದುಃಖವನ್ನು ಸೂಚಿಸುವ ಹಾಗೂ ಶೋಕಾಚರಣೆಯ ಹಬ್ಬವಾಗಿದೆ. ಇಸ್ಲಾಮಿಕ್ ಕ್ಯಾಲೆಂಡರ್ ಪ್ರಕಾರ ಮೊದಲ ತಿಂಗಳಾದ ಹಾಗೂ ಹೊಸ ಇಸ್ಲಾಮಿಕ್ ವರ್ಷದ ಆರಂಭವನ್ನು ಸೂಚಿಸುವ ಮೊಹರಂ ತಿಂಗಳಲ್ಲಿ ಆಚರಿಸುವ ಪವಿತ್ರ ಮೊಹರಂ, ದು-ಃಖದ ಹಬ್ಬ, ಕಣ್ಣೀರಿನ ಹಬ್ಬವಾಗಿ ಮುಸ್ಲಿಮರು ಆಚರಿಸುತ್ತಾರೆ.

ಇನ್ನು ಮುಸ್ಲಿಂ ಬಂಧುಗಳೇ ಇಲ್ಲದ ಸವದತ್ತಿ ತಾಲೂಕಿನ ಪುಟ್ಟ ಗ್ರಾಮ ಹರ್ಲಾಪುರದಲ್ಲಿ ಹಿಂದೂಗಳೇ ಮೊಹರಂ ಆಚರಣೆ ಮಾಡುವ ಮೂಲಕ ಭಾವೈಕ್ಯತೆ ಮೆರೆಯುತ್ತಿದ್ದಾರೆ.

ಇಂದು ಇಲ್ಲಿ ಪಂಜಾಗಳಿಗೆ ಭಕ್ತರು ಶ್ರದ್ಧೆಯಿಂದ ಪೂಜೆ ಸಲ್ಲಿಸುತ್ತಿರುವುದು, ನೈವೇದ್ಯ ಅರ್ಪಿಸುತ್ತಿರುವುದು, ಇನ್ನೂ ಕೆಲವರು ಹರಕೆ ತೀರಿಸುತ್ತಿರುವ ದೃಶ್ಯಗಳು ಕಂಡು ಬಂದವು.

ಈ ಊರಲ್ಲಿ ಮುಸ್ಲಿಮರ ಒಂದೂ ಮನೆ ಕೂಡ ಇಲ್ಲಿಲ್ಲ. ಭಾವೈಕ್ಯತೆ ಹೆಸರಾದ ಈ ಊರಿನಲ್ಲಿ ಹಿಂದೂಗಳೇ ತಮ್ಮ ಸ್ವಂತ ಹಣದಿಂದ ಫಕೀರಸ್ವಾಮಿ ದರ್ಗಾ ಕಟ್ಟಿದ್ದಾರೆ.

ಅಲ್ಲಿಯೇ ಪಂಜಾಗಳನ್ನು ಪ್ರತಿಷ್ಠಾಪಿಸಿ, ಪೂಜೆ ಪುನಸ್ಕಾರಗಳನ್ನು ಅನೇಕ ವರ್ಷಗಳಿಂದ ಮಾಡಿಕೊಂಡು ಬಂದಿದ್ದಾರೆ.

ಪಂಜಾಗಳನ್ನು ಕೂರಿಸುವುದು, ಪೂಜಿಸುವುದು, ಡೋಲಿಗಳನ್ನು ಸಿದ್ಧಪಡಿಸುವುದು ಹಾಗೂ ಮೊಹರಂ ಕಡೇ ದಿನದಂದು ಅವುಗಳ ಮೆರವಣಿಗೆ ಸೇರಿ ಎಲ್ಲ ವಿಧಿ ವಿಧಾನಗಳನ್ನು ಮಾಡುವುದು ಹಿಂದೂಗಳೇ ಎಂಬುದು ವಿಶೇಷ. ಇಲ್ಲಿನ ಹಿರಿಯರ ಪ್ರಕಾರ, ಹಿಂದೆ ಮುಸ್ಲಿಂ ಸಮುದಾಯದ ಫಕೀರರೊಬ್ಬರು ಇಲ್ಲಿ ವಾಸವಿದ್ದರು.

ಅವರು ನಿತ್ಯ ನಾಲ್ಕು ದೇವರಿಗೆ ಪೂಜಾ ಕೈಂಕರ್ಯ ನೆರವೇರಿಸುತ್ತಿದ್ದರು. ಅವರ ನಿಧನರಾದ ನಂತರ ಇಲ್ಲಿಯೇ ಅವರ ಅಂತ್ಯಕ್ರಿಯೆ ಮಾಡಿ, ಘೋರಿ ಕಟ್ಟಲಾಯಿತು.

11 ವರ್ಷಗಳ ಹಿಂದೆ ಅದ-ಕ್ಕೆ ಹೊಂದಿಕೊಂಡು ದರ್ಗಾ ಕೂಡ ನಿರ್ಮಿಸಲಾಗಿದೆ. ಅಲ್ಲಿಯೇ ಪ್ರತಿವರ್ಷ ಪಂಜಾಗಳನ್ನು ಪ್ರತಿಷ್ಠಾಪಿಸುತ್ತ ಬರಲಾಗಿದೆ.

ಈ ಕುರಿತು ಗ್ರಾಮಸ್ಥರಾದ ಬಸಪ್ಪ ವಕ್ಕುಂದ ಈಟಿವಿ ಭಾರತದ ಜೊತೆ ಮಾತನಾಡಿ, ಮುಸ್ಲಿಂರಿಗಿಂತ ಹೆಚ್ಚು ಸಂಭ್ರಮದಿಂದ ನಮ್ಮೂರಲ್ಲಿ ಮೊಹರಂ ಆಚರಿಸುತ್ತೇವೆ.

ಐದು ಕೈ ದೇವರು ಹೊರುವವರು





ಹಿಂದೂಗಳೇ. ಆದರೆ, ಮುಸ್ಲಿಮರ ಭಾಷೆ ಮಾತ್ರ ನಮಗೆ ಬರುವುದಿಲ್ಲ. ಹಾಗಾಗಿ ಹರ ಹರ ಮಹಾದೇವ ಎಂದು ಘೋಷಣೆ ಕೂಗುತ್ತಾ ಗ್ರಾಮದಲ್ಲಿ ಮೆರವಣಿಗೆ ನಡೆಸುತ್ತೇವೆ ಎಂದರು.

ಗ್ರಾಮದ ಹಿರಿಯರಾದ ಗೌಡಪ್ಪ ವಕ್ಕುಂದ ಮಾತನಾಡಿ, ನಮ್ಮ ಅಜ್ಜ, ಮುತ್ತಜ್ಜರ ಕಾಲದಿಂದಲೂ ಇಲ್ಲಿ ಮೊಹರಂ ಆಚರಿಸಲಾಗುತ್ತಿದೆ.

ಅಮವಾಸ್ಯೆಯಾದ ಮೂರು ದಿನಕ್ಕೆ ಗುದ್ದಲಿ ಹಾಕುತ್ತೇವೆ. ಗುದ್ದಲಿ ಹಾಕಿದ ಐದನೇ ದಿನಕ್ಕೆ ದೇವರನ್ನು ಕೂರಿಸುತ್ತೇವೆ. ಐದು ದಿನಗಳ ಬಳಿಕ ದೇವರನ್ನು ಹೊಳೆಗೆ ಕಳಿಸುತ್ತೇವೆ.

ಈ ವೇಳೆ ವಿವಿಧ ಕಲಾ ತಂಡಗಳೊಂದಿಗೆ ಮೆರವಣಿಗೆ ಮಾಡುತ್ತೇವೆ. ಇದೆಲ್ಲ ಮಾಡೋದು ಹಿಂದೂಗಳೇ ಎಂದು ತಿಳಿಸಿದರು. ಮೊಹರಂ ಕಡೇ ದಿನದಂದು ಪಂಜಾ ಹಿಡಿಯುವ ಗೋವಿಂದ ಚುಳಕಿ ಮಾತನಾಡಿ, ಈ ದರ್ಗಾದಲ್ಲಿ ಸರ್ವಧರ್ಮಗಳ ದೇವರ, ಮಹಾತ್ಮರ ಭಾವಚಿತ್ರಗಳನ್ನು ಹಾಕಲಾಗಿದೆ.

ಇದು ನಮ್ಮ ಪಾಲಿನ ಶ್ರದ್ಧಾ ಕೇಂದ್ರವಾಗಿದೆ. ನಮ್ಮ ತಂದೆ ತೀರಿಕೊಳ್ಳುವ ಒಂದು ವರ್ಷ ಮುಂಚೆಯಿಂದ ನಾನು ದೇವರ ಸೇವೆ ಮಾಡುತ್ತಿದ್ದೇನೆ.

ನಮ್ಮ ಎಲ್ಲ ಇಷ್ಟಾರ್ಥಗಳನ್ನು ದೇವರು ಈಡೇರಿಸಿದ್ದಾರೆ ಎಂದರು.

**ಇಲ್ಲಿನ ಬೇವಿನ ರಸ ಹಾವು ಕಡಿತಕ್ಕೆ ರಾಮಬಾಣ:** ಹೂಲಿಯಿಂದ ಯಲ್ಲಮ್ಮನಗುಡ್ಡಕ್ಕೆ ಸಂಚರಿಸುವ ಮಾರ್ಗದಲ್ಲಿ ಈ ಫಕೀರಸ್ವಾಮಿ ದರ್ಗಾ ಇದೆ. ಹಾಗಾಗಿ ವಿವಿಧೆಡೆಯಿಂದ ಯಲ್ಲಮ್ಮ ದೇವಿ ದರ್ಶನಕ್ಕೆ ಬರುವ ಭಕ್ತರು ಈ ದರ್ಗಾಕ್ಕೆ ಭೇಟಿ ಕೊಡುವುದು ರೂಢಿಯಾಗಿದೆ.

ಇನ್ನು ಇದೇ ದರ್ಗಾ ಆವರಣದಲ್ಲಿರುವ ಬೇವಿನ ಮರಕ್ಕೂ ಭಕ್ತರು ಪೂಜಿಸುತ್ತಾರೆ.

ಈ ಬೇವಿನ ಮರದ ಎಲೆಗಳನ್ನು ಅರಿದು, ರಸ ತೆಗೆದು ಕೂಡಿಸಿದರೆ ಹಾವು ಕಡಿತಕ್ಕೊಳಗಾದವರು ಗುಣಮುಖರಾಗುತ್ತಾರೆ ಎನ್ನುತ್ತಾರೆ.

ಗ್ರಾಮಸ್ಥ ಶಿವಪ್ಪ ವಕ್ಕುಂದ ಒಟ್ಟಾರೆ ಪ್ರಸ್ತುತ ಜಾತಿ-ಧರ್ಮಗಳ ಮಧ್ಯ ದೊಡ್ಡ ಕಂದಕ ಏರ್ಪಟ್ಟಿರುವ ಸಂದರ್ಭದಲ್ಲಿ ನಾವೆಲ್ಲಾ ಒಂದು ಎಂಬ ಸಂದೇಶ ಸಾರುತ್ತಿರುವ ಹರ್ಲಾಪುರ ಗ್ರಾಮಸ್ಥರಿಗೆ ನಮ್ಮದೊಂದು ಸಲಾಂ.

# ಸಂಪಾದಕೀಯ

## ಗ್ಯಾರಂಟಿಗಳಲ್ಲಿ ಶಿಕ್ಷಣ ಭಾಗ್ಯವೂ ಒಂದಾಗಲಿ?

ಗ್ಯಾರಂಟಿಗಳ ಕಾರಣಕ್ಕಾಗಿ ಕರ್ನಾಟಕ ದೇಶದಲ್ಲೇ ಸುದ್ದಿ ಮಾಡುತ್ತಿದೆ. ಕರ್ನಾಟಕ ಜಾರಿಗೆ ತಂದಿರುವ ಶಕ್ತಿ, ಅನ್ನ ಭಾಗ್ಯ, ಗೃಹ ಲಕ್ಷ್ಮಿ ಯೋಜನೆಗಳು ದೇಶದ ಇತರ ರಾಜ್ಯಗಳನ್ನು ಆಕರ್ಷಿಸುತ್ತಿವೆ. ಮಹಿಳೆಯರ ಸ್ವಾಭಿಮಾನದ ಬದುಕಿಗೆ ಈ ಯೋಜನೆಗಳು ಶಕ್ತಿ ತುಂಬಿವೆ. ಕೇಂದ್ರ ಸರಕಾರದ ಅಸಹಕಾರಗಳಿಂದ ಧೃತಿಗೆಡದೆ ನೂತನ ಸರಕಾರ ಜನಪ್ರಿಯ ಯೋಜನೆಗಳ ಯಶಸ್ಸಿಗೆ ಶಕ್ತಿಮೀರಿ ಶ್ರಮಿಸುತ್ತಿದೆ. ಇದೇ ಸಂದರ್ಭದಲ್ಲಿ ಕೊರೋನೋತ್ತರ ದಿನಗಳಿಂದ ಕುಸಿದು ಕೂತಿರುವ ರಾಜ್ಯದ ಶಿಕ್ಷಣ ವ್ಯವಸ್ಥೆಯನ್ನು ಎತ್ತಿ ನಿಲ್ಲಿಸುವ ಮಹತ್ವದ ಹೊಣೆಗಾರಿಕೆಯೂ ನೂತನ ಸರಕಾರದ ಮೇಲಿದೆ. ಅಪೌಷ್ಟಿಕತೆ ನಾಡಿನ ಭವಿಷ್ಯಕ್ಕೆ ಎಷ್ಟರಮಟ್ಟಿಗೆ ಮಾರಕವೋ, ಅನಕ್ಷರತೆಯೂ ಅಷ್ಟೇ ಮಾರಕವಾಗಿದೆ. ಆಹಾರದ ಹಕ್ಕು ಮತ್ತು ಶಿಕ್ಷಣದ ಹಕ್ಕು ಒಂದೇ ನಾಣ್ಯದ ಎರಡು ಮುಖಗಳು. ನಾಡನ್ನು ಅಭಿವೃದ್ಧಿಯ ಕಡೆಗೆ ಮುನ್ನಡೆಸಬಲ್ಲ ಎರಡು ಪ್ರಧಾನ ಸ್ತಂಭಗಳು ಇವು. ಕೊರೋನೋತ್ತರ ದಿನಗಳಲ್ಲಿ ದೇಶಾದ್ಯಂತ ಈ ಎರಡೂ ಸ್ತಂಭಗಳು ದುರ್ಬಲಗೊಂಡವು. ಜನರನ್ನು ಅಪೌಷ್ಟಿಕತೆಯಿಂದ ಮೇಲೆತ್ತುವ ಉದ್ದೇಶವನ್ನು ಹೊತ್ತು ಈಗಾಗಲೇ ಅನ್ನಭಾಗ್ಯದಂತಹ ಕಾರ್ಯಕ್ರಮಗಳನ್ನು ಸರಕಾರ ಘೋಷಿಸಿದೆ. ಶಾಲೆಗಳಲ್ಲಿ ಬಿಸಿಯೂಟ, ಮೊಟ್ಟೆಗಳನ್ನು ನೀಡುವುದಕ್ಕೂ ಕ್ರಮ ತೆಗೆದುಕೊಂಡಿದೆ. ಆದರೆ ಜನಸಾಮಾನ್ಯರಿಗೆ ಶಿಕ್ಷಣದ ಗ್ಯಾರಂಟಿಯನ್ನು ನೀಡುವ ಸರಕಾರಿ ಶಾಲೆಗಳನ್ನು ಮೇಲೆತ್ತುವ ಬಗ್ಗೆ ಇನ್ನೂ ಗಂಭೀರವಾಗಿ ಸರಕಾರ ಯೋಚಿಸಿದಂತಿಲ್ಲ.

ಸಿದ್ದರಾಮಯ್ಯ ನೇತೃತ್ವದ ಸರಕಾರ ಅಧಿಕಾರಕ್ಕೆ ಬಂದ ಬೆನ್ನಿಗೇ ನೂತನ ಶಿಕ್ಷಣ ನೀತಿ ಮತ್ತು ಪಠ್ಯ ಪುಸ್ತಕಗಳ ತಿರುಚುವಿಕೆಯ ವಿರುದ್ಧ ಕಠಿಣ ನಿಲುವುಗಳನ್ನು ತೆಗೆದುಕೊಂಡಿದೆ. ಇದು ಒಟ್ಟು ಶಿಕ್ಷಣದ ಬೌದ್ಧಿಕ ಒಳ ಸಂರಚನೆಗಳಿಗೆ ಸಂಬಂಧಿಸಿದ್ದು. ಇದೇ ಸಂದರ್ಭದಲ್ಲಿ, ಸಂವಿಧಾನ ನೀಡಿರುವ ಮೂಲಭೂತ ಶಿಕ್ಷಣದ ಹಕ್ಕನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲೆಂದೇ ಅಸ್ತಿತ್ವಕ್ಕೆ ಬಂದಿರುವ ರಾಜ್ಯದಲ್ಲಿರುವ ಸಾವಿರಾರು ಸರಕಾರಿ ಶಾಲೆಗಳನ್ನು ಉಳಿಸಿ ಬೆಳೆಸಿದು ಅದಕ್ಕಿಂತಲೂ ಮುಖ್ಯವಾಗಿದೆ. ಸರಕಾರಿ ಶಾಲೆಗಳನ್ನು ಉಳಿಸಿದ ಬಳಿಕ, ಅಲ್ಲಿ ಏನನ್ನು ಬೋಧಿಸಬೇಕು ಎನ್ನುವುದು ಚರ್ಚೆಯಾಗಬೇಕಾಗಿದೆ. ಆದರೆ ದೇಶದಲ್ಲಿ ನೂತನ ಶಿಕ್ಷಣ ನೀತಿಯ ಪರ-ವಿರೋಧ ಗದ್ದಲಗಳ ನಡುವೆ ಈ ದೇಶದ ಬಡವರು ಮತ್ತು ಶೋಷಿತ ಸಮುದಾಯಕ್ಕೆ ಶಿಕ್ಷಣದ ಹಾಲನ್ನು ಉಣಿಸಿ ಪೊರೆಯುತ್ತಿರುವ ಲಕ್ಷಾಂತರ ಸರಕಾರಿ ಶಾಲೆಗಳು ಮುಚ್ಚುತ್ತಿರುವುದು ಮರೆಗೆ ಸರಿಯುತ್ತಿದೆ. ಇಂದು ಮಹಿಳೆಯರ ಹಕ್ಕುಗಳಿಗಾಗಿ, ಬಡಜನರ ಆಹಾರಕ್ಕಾಗಿ ಗ್ಯಾರಂಟಿಗಳನ್ನು ಘೋಷಿಸಿರುವ ರಾಜ್ಯಸರಕಾರ ಬಡವರ ಮಕ್ಕಳ ಶಿಕ್ಷಣದ ಗ್ಯಾರಂಟಿಗಳನ್ನು ಎತ್ತಿ ಹಿಡಿಯುವ ಹಿನ್ನೆಲೆಯಲ್ಲಿ ಮುಚ್ಚುತ್ತಿರುವ ಸರಕಾರಿ ಶಾಲೆಗಳ ಕಡೆಗೆ ತನ್ನ ಗಮನವನ್ನು ಹರಿಸಬೇಕಾಗಿದೆ. ಈಗಾಗಲೇ ಕಳೆದ ಒಂದು ದಶಕದಲ್ಲಿ ರಾಜ್ಯದಲ್ಲಿ ಮೂರು ಸಾವಿರಕ್ಕೂ ಅಧಿಕ ಸರಕಾರಿ ಶಾಲೆಗಳನ್ನು ಮುಚ್ಚಲಾಗಿದೆ. ಹೀಗೆ ಮುಚ್ಚಿರುವ ಶಾಲೆಗಳು ಮತ್ತೆ ತೆರೆಯುವ ಸಾಧ್ಯತೆಗಳು ತೀರಾ ಕಡಿಮೆ. ಆದರೆ ಮುಚ್ಚುವುದಕ್ಕಾಗಿ ಸಿದ್ಧತೆ ನಡೆಸುತ್ತಿರುವ ಸಾವಿರಾರು ಶಾಲೆಗಳನ್ನು ಉಳಿಸುವ ದಾರಿಯೊಂದನ್ನು ಕಂಡುಕೊಳ್ಳಲು ಸರಕಾರಕ್ಕೆ ಇನ್ನೂ ಅವಕಾಶವಿದೆ. ಇಲ್ಲವಾದರೆ ಮುಂದಿನ ದಿನಗಳಲ್ಲಿ ಬಡವರ ಮಕ್ಕಳು, ಶೋಷಿತ ಸಮುದಾಯದ ಮಕ್ಕಳು ಶಾಲೆ ತೊರೆದು ಶಾಶ್ವತವಾಗಿ ಇನ್ನೊಬ್ಬರ ಹಟ್ಟಿಯಲ್ಲಿ ಜೀತ ಮಾಡಬೇಕಾಗುತ್ತದೆ. ಅಥವಾ ಖಾಸಗಿ ಶಾಲೆಗಳ ಶುಲ್ಕ ಪಾವತಿಸುವುದಕ್ಕಾಗಿ ಚೆನ್ನೈಯ ತಾಯಿಯೊಬ್ಬಳು ಮಾಡಿದಂತೆ ಬಡವರ ಮಕ್ಕಳ ಪೋಷಕರು ತಮ್ಮ ಪ್ರಾಣವನ್ನು ಒತ್ತೆಯಿಡಬೇಕಾಗುತ್ತದೆ.

ಕರ್ನಾಟಕದಲ್ಲಿ ಕೊರೋನ ಮತ್ತು ಲಾಕ್‌ಡೌನ್ ಸಂದರ್ಭದಲ್ಲಿ ಸಾವಿರಾರು ಮಕ್ಕಳು ಶಾಲೆ ತೊರೆದಿದ್ದಾರೆ. ಇವರನ್ನು ಮರಳಿ ಶಾಲೆಗೆ ಸೇರಿಸುವ ಬಗ್ಗೆ ಯಾವೊಂದು ಕ್ರಮವನ್ನು ತೆಗೆದುಕೊಳ್ಳದ ಅಂದಿನ ಸರಕಾರ ಅನಗತ್ಯ ಹಿಜಾಬ್ ಮತ್ತು ಪಠ್ಯ ಪುಸ್ತಕ ಪರಿಷ್ಕರಣೆಯ ಹೆಸರಿನಲ್ಲಿ ಶಾಲೆಗಳನ್ನು, ಶಿಕ್ಷಣ ವ್ಯವಸ್ಥೆಯನ್ನು ಅಧ್ವಾನಗೊಳಿಸಿತು. ಕೊರೋನೋತ್ತರ ದಿನಗಳಲ್ಲಿ ವಿದ್ಯಾರ್ಥಿಗಳೇ ಇಲ್ಲದ ಶಾಲೆಗಳ ಸಂಖ್ಯೆ ಇನ್ನಷ್ಟು ಹೆಚ್ಚಿವೆ. ಇದೇ ಸಂದರ್ಭದಲ್ಲಿ ಇನ್ನೊಂದೆಡೆ ಸರಕಾರಿ ಶಾಲೆಗಳು ಶಿಕ್ಷಕರ ಕೊರತೆಗಳನ್ನು ಎದುರಿಸುತ್ತಿವೆ. ನೂತನ ಶಿಕ್ಷಣ ಸಚಿವರ ಹೇಳಿಕೆಯಂತೆ ಈ ರಾಜ್ಯದಲ್ಲಿ 3,000ಕ್ಕೂ ಅಧಿಕ ಸರಕಾರಿ ಶಾಲೆಗಳು 10ಕ್ಕಿಂತಲೂ ಕಡಿಮೆ ವಿದ್ಯಾರ್ಥಿಗಳನ್ನು ಹೊಂದಿವೆ. ಕೆಲವು ಶಾಲೆಗಳಂತೂ ಶೂನ್ಯ ದಾಖಲಾತಿಯನ್ನು ಹೊಂದಿವೆಣಟಿಜಜಜಿಟಿಜಜ ಎನ್ನುವುದು ಅಂಕಿಅಂಶಗಳಿಂದ ಬಯಲಾಗಿದೆ. ಶಿಕ್ಷಣ ಸಚಿವರ ಕ್ಷೇತ್ರವಾಗಿರುವ ಸೊರಬದಲ್ಲೇ 52 ಶಾಲೆಗಳಲ್ಲಿ ಶಿಕ್ಷಕರೇ ಇಲ್ಲ. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರತಿನಿಧಿಸುವ ಕನಕಪುರ ತಾಲೂಕಿನಲ್ಲಿ 72 ಸರಕಾರಿ ಶಾಲೆಗಳಲ್ಲಿ ಶಿಕ್ಷಕರಿಲ್ಲ. ರಾಜ್ಯದಲ್ಲಿರುವ 6,000ಕ್ಕೂ ಅಧಿಕ ಸರಕಾರಿ ಶಾಲೆಗಳು ಏಕ ಶಿಕ್ಷಕರನ್ನು ಹೊಂದಿವೆ. ತೀರಾ ಗುಡ್ಡಗಾಡು ಪ್ರದೇಶಗಳ ಶಾಲೆಗಳಿಗೆ ತೆರಳಲು ಶಿಕ್ಷಕರು ಸಿದ್ಧರಿಲ್ಲ ಎನ್ನುವುದು ಬೆಳಕಿಗೆ ಬಂದಿದೆ. ಶಿಕ್ಷಕರೇ ಇಲ್ಲದ ಶಾಲೆಗಳಲ್ಲಿ ವಿದ್ಯಾರ್ಥಿಗಳಿಲ್ಲ ಎಂದು ದೂರುವುದರಲ್ಲಿ ಏನು ಅರ್ಥವಿದೆ? ಒಟ್ಟಿನಲ್ಲಿ ರಾಜ್ಯದಲ್ಲಿರುವ ಸರಕಾರಿ ಶಾಲೆಗಳು 'ಶಿಕ್ಷಕರಿಲ್ಲ ಎನ್ನುವ ಕಾರಣ-ಕ್ಕಾಗಿ ವಿದ್ಯಾರ್ಥಿಗಳಿಲ್ಲ' 'ವಿದ್ಯಾರ್ಥಿಗಳಿಲ್ಲ ಎನ್ನುವ ಕಾರಣಕ್ಕೆ ಶಿಕ್ಷಕರಿಲ್ಲ' ಎನ್ನುವ ವಿರೋಧಾಭಾಸಗಳಿಂದ ನರಳುತ್ತಿವೆ.

# ಬಿಎಜೆಎಸ್‌ಎಸ್ ಪದವಿ ಕಾಲೇಜಿನಲ್ಲಿ ಪತ್ರಿಕಾ ದಿನಾಚರಣೆ



ರಾಣೇಬೆನ್ನೂರು:- ಸ್ವಾತಂತ್ರ್ಯ ಸಂಗ್ರಾಮ ಸಮಯದಲ್ಲಿ ದೇಶದ ಸ್ವಾತಂತ್ರ್ಯಕ್ಕಾಗಿ ಬಹುಮುಖ್ಯ ಪಾತ್ರ ವಹಿಸಿದ್ದ ಪತ್ರಿಕಾ ರಂಗ ಪ್ರಸ್ತುತ ಕಾಲಘಟ್ಟದಲ್ಲಿ ಉದ್ಯಮವಾಗಿ ಪರಿವರ್ತನೆಯಾಗಿದೆ ಎಂದು ಜಿಪಂ ಮಾಜಿ ಸದಸ್ಯ ಸಂತೋಷಕುಮಾರ ಪಾಟೀಲ ಹೇಳಿದರು.

ನಗರದ ಬಿಎಜೆಎಸ್‌ಎಸ್ ಪದವಿ ಕಾಲೇಜಿನ ಪ್ರೊ. ಐ.ಜಿ.ಸನದಿ ಸಭಾಭವನದಲ್ಲಿ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ವತಿಯಿಂದ ಆಯೋಜಿಸಲಾಗಿದ್ದ ಪತ್ರಿಕಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಇಂದಿನ ಬಹುತೇಕ ಪತ್ರಿಕೆಗಳು ಎಡ ಪಂಥಿಯ ಹಾಗೂ ಬಲ ಪಂಥಿಯ ವಿಚಾರಧಾರೆಗಳನ್ನು ಹೊಂದಿದ್ದು ಅವುಗಳನ್ನು ಓದುಗರ ಹೇರುವ ಕೆಲಸ ಮಾಡುತ್ತಿವೆ. ಹೀಗಾಗಿ ಇಂದಿನ ಪತ್ರಕರ್ತರ ಮೇಲೆ ಜನರಿಗೆ ವಸ್ತುನಿಷ್ಟ ವರದಿಯನ್ನು ತಲುಪಿಸುವ ಗುರುತರ ಸವಾಲು ಹಾಗೂ ಜವಾಬ್ದಾರಿಯಿದೆ ಎಂದರು.

ಹುಬ್ಬಳ್ಳಿ ಆವೃತ್ತಿ ಸ್ಥಾನಿಕ ಸಂಪಾದಕ ಮಲ್ಲಿಕಾರ್ಜುನ ಸಿದ್ದಣ್ಣನವರ ಮಾತನಾಡಿ, ಪತ್ರಕರ್ತರು ಅಡುಗೆಯಲ್ಲಿ ಬಳಸುವ ಕರಿ ಬೇವಿನಂತೆ ಅದು ರುಚಿಗೆ ಬಹುಮುಖ್ಯವಾಗಿದ್ದರೂ ಊಟ ಮಾಡುವಾಗ ಅದನ್ನು ಹೊರಕ್ಕೆ ಚೆಲ್ಲಲಾಗುತ್ತದೆ. ಅದೇ ರೀತಿ ಕೆಲಸವಾಗುವ ಮುನ್ನ ಅತ್ಯಂತ ಪತ್ರಕರ್ತರನ್ನು ಗೌರವಯುತವಾಗಿ ನಡೆಸಿಕೊಳ್ಳುವ ಸಮಾಜ ಕೆಲಸ ಮುಗಿದ ನಂತರ ಅವರನ್ನು ನಗಣ್ಯವಾಗಿ ಕಾಣುತ್ತಾರೆ. ನಮ್ಮ ಸಂವಿಧಾನದಲ್ಲಿ ಅವಕಾಶ ಇಲ್ಲದಿದ್ದರೂ ಅಸ್ಪೃಶ್ಯತೆ, ವರದಕ್ಷಿಣೆ, ಜೀತ ಪದ್ಧತಿ, ಪ್ರಾಣಿ ಬಲಿ ಮುಂತಾದ ಕೆಟ್ಟ ಆಚರಣೆಗಳು ಅನೂಚಾನವಾಗಿ ನಡೆದುಕೊಂಡು ಬಂದಿದೆ. ಸಮಾಜದಲ್ಲಿ ಮೌಢ್ಯತೆಯಲ್ಲಿ ಮುಳುಗಿರುವವರನ್ನು ಎಚ್ಚರಿಸಿ ಅವರುಗಳನ್ನು ಸರಿದಾರಿಯಲ್ಲಿ ಸಾಗುವಂತೆ ಮಾಡುವವರೇ ಪತ್ರಕರ್ತರು. ಅವರ ಸೇವೆ, ತ್ಯಾಗವನ್ನು ಸ್ಮರಿಸುವ ಸಲುವಾಗಿ ಆಚರಿಸುವ ದಿನವೇ ಪತ್ರಿಕಾ ದಿನಾಚರಣೆಯಾಗಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ಪತ್ರಿಕಾ ರಂಗಕ್ಕೆ ಒಂದು ಗುರಿಯಿತ್ತು. ಮಹಾತ್ಮ ಗಾಂಧೀಜಿ, ಅಂಬೇಡ್ಕರ್, ಲಾಲ ಲಜಪತರಾಯ್, ಜವಾಹರಲಾಲ್ ನೆಹರು ಮುಂತಾದ ಅನೇಕ ಸ್ವಾತಂತ್ರ್ಯ ಹೋರಾಟಗಾರರು ಕೂಡ ಪತ್ರಕರ್ತರು ಆಗಿದ್ದರು. ಸ್ವಾತಂತ್ರ್ಯ ತರುವಲ್ಲಿ ಮಾಧ್ಯಮ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಿತು. ಸಮಾಜದ ಸಮಸ್ಯೆಗಳನ್ನು ಪರಿಹರಿಸಲು ಪತ್ರಕರ್ತರು ಶ್ರಮಿಸುತ್ತಾರೆ. ವೈಯಕ್ತಿಕ ಹಿತಾಸಕ್ತಿಗಿಂತ ಸಮಾಜದ ಅಭ್ಯುದಯಕ್ಕಾಗಿ ಪತ್ರಕರ್ತ ಒತ್ತು ನೀಡುತ್ತಾನೆ. ಹೀಗಿದ್ದರೂ ಇಂದಿನ ಹೊಸ ತಲೆಮಾರಿನ ಯುವ ಜನಾಂಗದಲ್ಲಿ ಪತ್ರಿಕೆ ಓದುವ ಹವ್ಯಾಸ ತುಂಬಾ ಕಡಿಮೆಯಾಗಿದೆ. ಇತ್ತೀಚಿನ ದಿನಗಳಲ್ಲಿ ಸಾಮಾಜಿಕ ಮಾಧ್ಯಮಗಳ ದುರ್ಬಳಕೆ ಹೆಚ್ಚಾಗಿದೆ. ಅವುಗಳಲ್ಲಿ ಪ್ರಚುರಪಡಿಸಲಾಗುವ ಸಂಗತಿಗಳ ಸತ್ಯಾಸತ್ಯತೆ ಪರಿಶೀಲಿಸಿ ಸುದ್ದಿ ಮಾಡುವುದು ಇಂದಿನ ಪತ್ರಕರ್ತನಿಗೆ ನಿಜಕ್ಕೂ ಸವಾಲಿನ ಕೆಲಸವಾಗಿದೆ ಎಂದರು. ಎಜೆಎಸ್‌ಎಸ್ ಸಮೂಹ ಶಿಕ್ಷಣ ಸಂಸ್ಥೆಗಳ ಆಡಳಿತಾಧಿಕಾರಿ ಡಾ.ಆರ್.ಎಂ.ಕುಬೇರಪ್ಪ, ನಗರಸಭೆ ಮಾಜಿ ಸದಸ್ಯ ಮಂಜುನಾಥ ಗೌಡಶಿವಣ್ಣನವರ ಮಾತನಾಡಿದರು.

ಜಿಲ್ಲಾ ಕಾನಿಪ ಅಧ್ಯಕ್ಷ ನಾಗರಾಜ ಕುರವತ್ತೇರ, ಕಾರ್ಯದರ್ಶಿ ವೀರೇಶ ಮಡ್ಲೂರ, ಖಜಾಂಚಿ ನಾರಾಯಣ ಹೆಗಡೆ. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

ತಾಲೂಕು ಕಾನಿಪ ಸಂಘದ ಅಧ್ಯಕ್ಷ ಎಸ್.ಟಿ.ವೇದಮೂರ್ತಿ ಅಧ್ಯಕ್ಷತೆ ವಹಿಸಿದ್ದರು.

ನಗರಸಭಾ ಸದಸ್ಯರುಗಳಾದ ಮಂಜುಳಾ ಹತ್ತಿ, ಗಂಗಮ್ಮ ಹಾವನೂರ, ಮಲ್ಲಿಕಾರ್ಜುನ ಅಂಗಡಿ, ಡಾ.ಗಿರೀಶ ಕೆಂಚಪ್ಪನವರ, ಡಾ.ರತ್ನಪ್ರಭಾ ಕೆಂಚಪ್ಪನವರ, ರೋಟರಿ ಕ್ಲಬ್ ಅಧ್ಯಕ್ಷ ಸುಜಿತ್ ಜಂಬಗಿ, ರೈತ ಮುಖಂಡರಾದ ಹನುಮಂತಪ್ಪ ಕಬ್ಬಾರ, ರವೀಂದ್ರಗೌಡ ಪಾಟೀಲ, ಬಿಜೆಪಿ ನಗರ ಘಟಕ ಅಧ್ಯಕ್ಷ ದೀಪಕ ಹರಪನಹಳ್ಳಿ, ಗದಿಗೆಪ್ಪ ಹೊಟ್ಟಿಗೌಡ್ರ, ಪ್ರೊ.ಬಿ.ಬಿ.ನಂದ್ಯಾಲ, ರುಕ್ಮಿಣಿ ಸಾವಕಾರ, ಡಾ.ಗಣೇಶ ದೇವಗಿರಿಮಠ, ಪರಮೇಶ ಗೂಳಣ್ಣನವರ, ಎ.ಬಿ.ಪಾಟೀಲ, ಚಂದ್ರಣ್ಣ ಬೇಡರ, ಸಂಕಪ್ಪ ಮಾರನಾಳ, ಪ್ರಭಾಕರ ಶಿಗ್ಲಿ, ಪರಶುರಾಮ ಕಾಳೇರ, ಆರ್.ಟಿ.ತಾಂಬೆ, ಏಕಾಂತ ಮುದಿಗೌಡ್ರ, ಯುವರಾಜ ಬಾರಾಟಕ್ಕಿ ಮತ್ತಿತರರಿದ್ದರು.

# ಜಿಲ್ಲಾ ಮಟ್ಟದ ಅಧಿಕಾರಿಗಳ ನಿಯೋಜನೆ

ಹಾವೇರಿ: ಮುಂಗಾರು ಪ್ರಕೃತಿ ವಿಕೋಪಗಳ ನಿರ್ವಹಣೆಗೆ ತಾಲೂಕಾವಾರು ಉಸ್ತುವಾರಿಗೆ ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ನಿಯೋಜಿಸಿ ಜಿಲ್ಲಾಧಿಕಾರಿ ರಘುನಂದನ್ ಮೂರ್ತಿ ಅವರು ಆದೇಶ ಹೊರಡಿಸಿದ್ದಾರೆ.

ಹಾವೇರಿ ತಾಲೂಕಿಗೆ ಆಹಾರ ನಾಗರೀಕ ಸರಬರಾಜು ಇಲಾಖೆ ಉಪನಿರ್ದೇಶಕ ಡಾ.ನಾಗರಾಜ್ ಎಲ್ (9945060295), ರಾಣೇಬೆನ್ನೂರ ತಾಲೂಕಿಗೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಅಧಿಕಾರಿ ಅಶೋಕ ಗದ್ದಿಗೌಡರ (ಮೊ. 9402216015), ಬ್ಯಾಡಗಿ ತಾಲೂಕಿಗೆ ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕಿ ಶ್ರೀಮತಿ ರೇಷ್ಮಾ ಕೌಸಸ್, ಹಿರೇಕೆರೂರು ತಾಲೂಕಿಗೆ ರೇಷ್ಮೆ ಇಲಾಖೆ ಉಪನಿರ್ದೇಶಕ ಮಲ್ಲಿಕಾರ್ಜುಸ್ವಾಮಿ(ಮೊ.7411469318), ರಟ್ಟಿಹಳ್ಳಿ ತಾಲೂಕಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿ ಪ್ರವೀಣ (ಮೊ.9945060295), ಸವಣೂರ ತಾಲೂಕಿಗೆ ಜಿಲ್ಲಾ ಕೈಗಾರಿಕಾ ಇಲಾಖೆ ಉಪನಿರ್ದೇಶಕ ವಿನಾಯಕ ಜೋಶಿ (ಮೊ.9448826871), ಶಿಗ್ಗಾಂವ ತಾಲೂಕಿಗೆ ಮೀನುಗಾರಿಕೆ ಇಲಾಖೆ ಉಪನಿರ್ದೇಶಕ ಸಂತೋಷ ಕೊಪ್ಪದ(ಮೊ.9845369817), ಹಾನಗಲ್ ತಾಲೂಕಿಗೆ ಸವಣೂರ ಉಪವಿಭಾಗಾಧಿಕಾರಿ ಮಹ್ಮದ ಪೈಜಾರ (ಮೊ.9164055006) ಅವರನ್ನು ನೇಮಕ ಮಾಡಲಾಗಿದೆ.

ಮನೆಹಾನಿಯ ಬಗ್ಗೆ ತಹಶೀಲ್ದಾರರು, ಕಾರ್ಯನಿರ್ವಾಹಕ ಅಧಿಕಾರಿಗಳು, ಕಾರ್ಯನಿರ್ವಾಹಕ ಅಭಿಯಂತರರು, ಸಿಡಿಪಿಒ, ಟಿ.ಎಚ್‌ಒ, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಅಗ್ನಿಶಾಮಕ ದಳ, ಪಿಡಿಒ, ಗ್ರಾಮ ಲೆಕ್ಕಾಧಿಕಾರಿಗಳೊಂದಿಗೆ ತುರ್ತಾಗಿ ಮನೆ ಹಾನಿ, ಮಾನವ ಹಾನಿ, ಜಾನುವಾರು ಜೀವಹಾನಿ, ಅಂಗನವಾಡಿ, ಶಾಲಾ ಕೊಠಡಿ, ರಸ್ತೆ, ಸೇತುವೆ, ಕೆರೆ, ಕಟ್ಟೆ, ನದಿ ಪ್ರವಾಹಗಳ ಕುರಿತು ಸಭೆ ನಡೆಸಿ ಪ್ರತಿಯೊಂದು ಗ್ರಾಮಗಳಿಗೆ ಭೇಟಿ ನೀಡಿ ಪರಿಶೀಲಿಸಿದ ಬಗ್ಗೆ ವರದಿ ಸಲ್ಲಿಸಬೇಕು.

ಸರ್ಕಾರಿ ಶಾಲೆ, ಅಂಗನವಾಡಿ, ಎಲ್ಲ ಆರೋಗ್ಯ ಕೇಂದ್ರ ಹಾಗೂ ಇತರೆ ಎಲ್ಲ ಸರ್ಕಾರಿ ಕಚೇರಿಗಳ ಮೇಲ್ಛಾವಣಿ ಸ್ವಚ್ಛಗೊಳಿಸಿ ನೀರು ಸರಾಗವಾಗಿ ಹರಿಯುವಂತೆ ಆಯಾ ಇಲಾಖೆ ಮುಖ್ಯಸ್ಥರಿಂದ ಕ್ರಮವಹಿಸಿ ವರದಿ ಸಲ್ಲಿಸಬೇಕು. ತಾಲೂಕಿನಲ್ಲಿ ಪ್ರವಾಹಕ್ಕೆ ತುತ್ತಾಗಬಹುದಾದ ಗ್ರಾಮಗಳ ಪರಿಶೀಲನೆ ಹಾಗೂ ತಗ್ಗು ಪ್ರದೇಶದ ಜನರ ಸುರಕ್ಷತೆ, ಕಾಳಜಿ ಕೇಂದ್ರಗಳ ತೆರೆಯುವ ಬಗ್ಗೆ ವರದಿ, ಗ್ರಾಮಗಳಲ್ಲಿ ನಿರಂತರ ಮಳೆಯಿಂದ ನೀರು ನುಗ್ಗಿರುವ ಮನೆಗಳ ಗೃಹೋಪಯೋಗಿ ವಸ್ತುಗಳ ಹಾಗೂ ಬಟ್ಟೆಬರೆ ಹಾನಿಗಳ ಸಂತ್ರಸ್ಥರುಗಳ ಕುಟುಂಬಗಳಿಗೆ ತುರ್ತು ಪರಿಹಾರ ನೀಡಿದ ಬಗ್ಗೆ ಪರಿಶೀಲಿಸಿ ವರದಿ ಸಲ್ಲಿಸಬೇಕು.

ಪ್ರತಿಯೊಂದು ತಾಲೂಕಿನಿಂದ ಹಾನಿಯಾದ ಬಗ್ಗೆ ತಹಶೀಲ್ದಾರರು ಮಾಹಿತಿ ಸಲ್ಲಿಸಿ ಮೊತ್ತದ ಪುನರ್ ಪರಿಶೀಲಿಸಬೇಕು, ನದಿ ಪಾತ್ರಗಳಲ್ಲಿ ಜನ ಮತ್ತು ಜಾನುವಾರುಗಳನ್ನು ಸೂಕ್ತ ಸ್ಥಳದಲ್ಲಿಸ್ಥಳಾಂತರ ಮಾಡಲು ಅಗತ್ಯ ಕ್ರಮಕೈಗೊಳ್ಳಬೇಕು ಹಾಗೂ ಅಂತಹ ಗ್ರಾಮಗಳ ಯಾದಿಯನ್ನು ಸಲ್ಲಿಸಬೇಕು.

ತಾಲೂಕು ಮಟ್ಟದ ನೋಡಲ್ ಅಧಿಕಾರಿಗಳು ಅತೀವೃಷ್ಟಿ/ಪ್ರವಾಹದ ಪ್ರದೇಶಗಳಿಗೆ ತಾಲೂಕು ಮಟ್ಟದ ಸಂಬಂಧಿಸಿದ ಅಧಿಕಾರಿಗಳೊಂದಿಗೆ ತಪ್ಪದೇ ಭೇಟಿ ನೀಡುವುದು ಹಾಗೂ ಪ್ರಚಲಿತ ವಸ್ತುಸ್ಥಿತಿಯನ್ನು ಪರಿಶೀಲಿಸಬೇಕು. ತಾಲೂಕಾ ಮಟ್ಟದ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ಅತಿವೃಷ್ಟಿ ಕುರಿತಂತೆ ಸಮರ್ಪಕವಾಗಿ ಯಾವುದೇ ಲೋಪವಾಗದಂತೆ ಕಾರ್ಯನಿರ್ವಹಿಸಬೇಕು.

ನೋಡಲ್ ಅಧಿಕಾರಿಗಳು ಪ್ರತಿದಿನ ಪ್ರಕೃತಿ ವಿಕೋಪ ವಿಷಯಕ್ಕೆ ಸಂಬಂಧಿಸಿದಂತೆ ಹೋಬಳಿ, ಪಂಚಾಯತಿ ಮಟ್ಟದ ಅಧಿಕಾರಿಗಳೊಂದಿಗೆ ಸಮನ್ವಯತೆಯನ್ನು ಸಾಧಿಸಿ, ಅತಿವೃಷ್ಟಿ, ಪ್ರವಾಹ ಸಮರ್ಥವಾಗಿ ನಿಭಾಯಿಸುವ ನಿಟ್ಟಿನಲ್ಲಿ ಕರ್ತವ್ಯ ನಿರ್ವಹಿಸಬೇಕು. ನೆರೆ ಹಾವಳಿಯಿಂದ ಉಂಟಾಗುವ ಅನಾಹುತಗಳನ್ನು ತಡೆಗಟ್ಟಲು ಅಗ್ನಿಶಾಮಕ, ಸಂಬಂಧಿಸಿದ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ, ಅತಿವೃಷ್ಟಿ ಕುರಿತಂತೆ ಸಮರ್ಪಕವಾಗಿ ಯಾವುದೇ ಲೋಪವಾಗದಂತೆ ಕಾರ್ಯನಿರ್ವಹಿಸಬೇಕು. ಕಾಲಕಾಲಕ್ಕೆ ಸರ್ಕಾರದಿಂದ ಹಾಗೂ ಜಿಲ್ಲಾಡಳಿತದಿಂದ ನೀಡುವ ನಿರ್ದೇಶನ ಆದೇಶಗಳನ್ವಯ ನಿಯಮಾನುಸಾರ ಕಾರ್ಯನಿರ್ವಹಿಸುವಂತೆ ನಿರ್ದೇಶನ ನೀಡಲಾಗಿದೆ.

# ಹೊರಗುತ್ತಿಗೆ ಸಿಬ್ಬಂದಿಗಳಿಗೆ ನಿಗದಿತ ಸಮಯದಲ್ಲಿ ವೇತನ ಪಾವತಿಸಿ-ಜಿಲ್ಲಾಧಿಕಾರಿ



ಹಾವೇರಿ: ಜಿಲ್ಲೆಯ ಪ್ರತಿಯೊಂದು ಇಲಾಖೆಯಲ್ಲಿ ನೇಮಕಮಾಡಿಕೊಂಡ ಹೊರಗುತ್ತಿಗೆ ನೌಕರರು ಹಾಗೂ ಕಾರ್ಮಿಕರಿಗೆ ಸಕಾಲಕ್ಕೆ ವೇತನ ಪಾವತಿ ಮಾಡಲು ಕ್ರಮವಹಿಸುವಂತೆ ಜಿಲ್ಲಾಧಿಕಾರಿ ರಘುನಂದನ್ ಮೂರ್ತಿ ಅವರು ಹೇಳಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಗುರುವಾರ ವಿವಿಧ ಇಲಾಖೆಗಳಲ್ಲಿ ಹಾಗೂ ನಿಗಮ ಮಂಡಳಿಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಹೊರಗುತ್ತಿಗೆ ಕಾರ್ಮಿಕರಿಗೆ ದೊರಕುವ ಶಾಸನಾತ್ಮಕ ಸೌಲಭ್ಯಗಳ ಕುರಿತು ಅರಿವು ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಒಂದು ವೇಳೆ ವೇತನ ವಿಳಂಬವಾಗಿದ್ದಲ್ಲಿ ಹಾಗೂ ಸರಿಯಾಗಿ ಪಾವತಿಯಾಗದಿದ್ದಲ್ಲಿ ಸಂಬಂಧಪಟ್ಟವರ ವಿರುದ್ಧ ಕ್ರಮಕೈಗೊಳ್ಳಬೇಕು.

ಪ್ರತಿ ಇಲಾಖೆಯ ಹೊರಗುತ್ತಿಗೆ ಸಿಬ್ಬಂದಿ ಹಾಗೂ ಕಾರ್ಮಿಕರು ಶಾಸನಾತ್ಮಕ ಸೌಲಭ್ಯಗಳ ಬಗ್ಗೆ ತಿಳಿದುಕೊಳ್ಳಬೇಕು ಎಂದು ಸಲಹೆ ನೀಡಿದರು.

ಬೆಳಗಾವಿ ಪ್ರಾದೇಶಿಕ ಉಪ ಕಾರ್ಮಿಕ ಆಯುಕ್ತರಾದ ಡಿ.ಜಿ.ನಾಗೇಶ ಹಾಗೂ ಧಾರವಾಡ ವಿಭಾಗದ ಸಹಾಯಕ ಕಾರ್ಮಿಕ ಆಯುಕ್ತರಾದ ಕು. ಶ್ವೇತಾ ಅವರು, ಸರ್ಕಾರದ ವಿವಿಧ ಇಲಾಖೆಗಳು ಹಾಗೂ ನಿಗಮ ಮಂಡಳಿಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಹೊರಗುತ್ತಿಗೆ ಕಾರ್ಮಿಕರಿಗೆ ದೊರಕುವ ಶಾಸನಾತ್ಮಕ ಸೌಲಭ್ಯಗಳು, ಕನಿಷ್ಠ ವೇತನ ಕಾಯ್ದೆ, ವೇತನ ಪಾವತಿಕಾಯ್ದೆ, ಮಾತೃತ್ವಕಾಯ್ದೆ, ಗುತ್ತಿಗೆ ಕಾರ್ಮಿಕ ಕಾಯ್ದೆ ಹಾಗೂ ಇನ್ನಿತರ ಹಲವಾರು ಕಾಯ್ದೆಗಳ ಕುರಿತು ಉಪನ್ಯಾಸ ನೀಡಿದರು.

ಜಿಲ್ಲಾ ಕಾರ್ಮಿಕ ಅಧಿಕಾರಿ ಮಹೇಶ ಲಕ್ಷ್ಮಣ ಕುಳಲಿ ಉಪಸ್ಥಿತರಿದ್ದರು.

# ಬೀರೇನ್‌ಸಿಂಗ್ ಸರ್ಕಾರವನ್ನು ವಜಾಗೊಳಿಸಿ



ಮುಂಡಗೋಡ: ಜನಾಂಗೀಯ ಸಂಘರ್ಷ ಮತ್ತು ಹಿಂಸಾಚಾರದಿಂದ ನಲುಗಿ ಹೋಗಿರುವ ಮಣಿಪುರದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವಲ್ಲಿ ವಿಫಲವಾಗಿರುವ ಮುಖ್ಯಮಂತ್ರಿ ಬೀರೇನ್‌ಸಿಂಗ್ ಸರ್ಕಾರವನ್ನು ವಜಾಗೊಳಿಸಿ ರಾಷ್ಟ್ರಪತಿ ಆಡಳಿತ ಜಾರಿ ಮಾಡುವಂತೆ ಒತ್ತಾಯಿಸಿ ದಲಿತ ಸಂಘರ್ಷ ಸಮಿತಿ ಸೇರಿದಂತೆ ವಿವಿಧ ಸಂಘಟನೆಗಳು ಪಟ್ಟಣದಲ್ಲಿ ಮೆರವಣಿಗೆ ನಡೆಸಿ ತಹಸೀಲ್ದಾರ ಮೂಲಕ ರಾಷ್ಟ್ರಪತಿಗಳಿಗೆ ಮನವಿ ಅರ್ಪಿಸಿದರು.

ಈಶಾನ್ಯ ರಾಜ್ಯವಾದ ಮಣಿಪುರದಲ್ಲಿ ಸುಮಾರು ಮೂರು ತಿಂಗಳುಗಳ ಹಿಂದೆ ಜನಾಂಗೀಯ ಸಂಘರ್ಷ ಮತ್ತು ಹಿಂಸಾಚಾರದಿಂದ ನಲುಗಿ ಹೋಗಿದೆ. ಕುಕಿ ಜೋ ಬುಡಕಟ್ಟು ಸಮುದಾಯದ ಇಬ್ಬರು ಮಹಿಳೆಯರನ್ನು ಸಂಪೂರ್ಣ ಬೆತ್ತಲು ಮಾಡಿ ಅವರ ಮೇಲೆ ಗುಂಪೊಂದು ಲೈಂಗಿಕ ದೌರ್ಜನ್ಯ, ಸಾಮೂಹಿಕ ಅತ್ಯಾಚಾರ ನಡೆಸಿದ ವಿಡಿಯೋ ಒಂದು ಇತ್ತೀಚಿಗೆ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದೆ. ಇದು ಮಣಿಪುರ ಹಿಂಸಾಚಾರದ ಕೌರ್ಯದ ಮುಖವನ್ನು ತೆರೆದಿಟ್ಟಿದೆ. ಹಿಂಸಾಚಾರದ ಕರಾಳ ಮುಖವನ್ನು ಇಡೀ ದೇಶಕ್ಕೆ ತೋರಿಸಿದೆ. ಮಹಿಳೆಯರಿಗೆ ಯಾವ ಮಟ್ಟದ ಅವಮಾನ ಮಾಡುವುದಕ್ಕೂ ಹೇಸದ ಮನಸ್ಥಿತಿ, ಪೊಲೀಸರು ಮತ್ತು ಅಧಿಕಾರ ಸ್ಥಾನದಲ್ಲಿರುವವರ ಅಸಡ್ಡೆ, ಹಿಂಸೆಗೆ ನೀಡಿದ ಕುಮ್ಮಕ್ಕು, ಮಧ್ಯ ಪ್ರವೇಶ ಮಾಡಲು ಕೇಂದ್ರ ಸರ್ಕಾರದ ಹಿಂದೇಟು ಮತ್ತು ಎಲ್ಲಕ್ಕಿಂತ ಮಾನವೀಯತೆಯನ್ನೇ ಮರೆತಿರುವ ಸ್ಥಿತಿ ಎಲ್ಲದಕ್ಕೂ ಈ ವಿಡಿಯೋ ಕನ್ನಡಿ ಹಿಡಿದಿದೆ.ಈ ಕೃತ್ಯವು ಮಣಿಪುರ ಮಾತ್ರವಲ್ಲ ಇಡೀ ದೇಶ ಬೆಚ್ಚಿಬೀಳಿಸುವಂತೆ ಮಾಡಿದ ಈ ಘಟನೆಯ ಪೂರ್ಣ ಹೊಣೆಗಾರಿಕೆಯನ್ನು ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರಗಳೇ ಹೊತ್ತುಕೊಳ್ಳಬೇಕು.

ಕಾನೂನಿನ ಆಡಳಿತಕ್ಕೆ ಒಳಪಟ್ಟ ಯಾವುದೇ ನಾಗರೀಕ ಸಮಾಜವು ಇಂತಹ ಹೀನ ಕೃತ್ಯ ಎಸಗಿದವರ ಮೇಲೆ ತಕ್ಷಣವೇ ಕ್ರಮ ಕೈಗೊಳ್ಳುತ್ತಿತ್ತು ಮೇ ತಿಂಗಳಲ್ಲಿ ಎಫ್.ಐ.ಆರ್ ದಾಖಲಾಗಿದೆ ಮತ್ತು ಘಟನೆಯು ಹೇಗೆ ನಡೆದಿದೆ ಎಂಬ ವಿಡಿಯೋ ಅದರಲ್ಲಿದೆ. ವಿಡಿಯೋ ಕಳೆದ ವಾರ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುವವರೆಗೆ ಯಾವುದೇ ತನಿಖೆ ನಡೆದಿರಲಿಲ್ಲ, ಯಾರನ್ನು ಬಂಧಿಸಿರಲಿಲ್ಲ. ಇದನ್ನು ಸೂಕ್ಷ್ಮವಾಗಿ ಗಮನಿಸಿದಾಗ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ತಪ್ಪಿತಸ್ಥರ ವಿರುದ್ಧ ಯಾವುದೇ ಕಾನೂನು ಕ್ರಮ ಕೈಗೊಳ್ಳದಿರುವುದು ಅನುಮಾನಗಳಿಗೆ ಕಾರಣವಾಗಿದೆಯಲ್ಲದೆ ಕಾನೂನು ಮತ್ತು ಸುವ್ಯವಸ್ಥೆ ಸಂಪೂರ್ಣವಾಗಿ ಕುಸಿದುಬಿದ್ದಿದೆ. ಇಷ್ಟೆಲ್ಲ ನಡೆದಿರುವಾಗ ವಿಶ್ವಗುರು ಎಂದು ಹೇಳುತ್ತಿರುವ ಪ್ರಧಾನಮಂತ್ರಿ ನರೇಂದ್ರ ಮೋದಿಯವರೇಕೆ ಮೌನ ವಹಿಸಿದ್ದಾರೆ ಎನ್ನುವುದು ಸಹ ಅನುಮಾನಕ್ಕೀಡು ಮಾಡಿದೆ.

"ಸುಪ್ರೀಂ ಕೋರ್ಟ ಮುಖ್ಯನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರು ಗಾಢ ಕಳವಳ ವ್ಯಕ್ತಪಡಿಸಿದ್ದಾರೆ. ತಳಮಟ್ಟದಲ್ಲಿ ಏನನ್ನು ಮಾಡಲು ಸರ್ಕಾರಕ್ಕೆ ಸಾಧ್ಯವಾಗುತ್ತಿಲ್ಲ ಎಂದಾದರೆ ನ್ಯಾಯಾಲಯವು ಮಧ್ಯಪ್ರವೇಶ ಮಾಡಬೇಕಾಗುತ್ತದೆ" ಎನ್ನುವ ಎಚ್ಚರಿಕೆಯನ್ನು ನೀಡಿದ್ದಾರೆ. ಪ್ರಧಾನಿ ನರೇಂದ್ರ ಮೋದಿಯವರು ಮಣಿಪುರಕ್ಕೆ ಸಂಬಂಧಿಸಿದ ತಮ್ಮ ಸುದೀರ್ಘ ಮತ್ತು ನಿಗೂಢ ಮೌನವನ್ನು ಕೊನೆಗೂ ಮುರಿದಿದ್ದಾರೆ. (ಮುಖ್ಯ ನ್ಯಾಯಮೂರ್ತಿ ಯವರ ಮಾತುಗಳು ಮತ್ತು ಜನರಲ್ಲಿ ಮೂಡುತ್ತಿರುವ ಆಕ್ರೋಶದಿಂದ ಅವರು ಮೌನ ಮುರಿದಿರಬಹುದು) ಈ ಘಟನೆಯಿಂದ ಇಡೀ ದೇಶವೇ ನಾಚಿಕೆಯಿಂದ ತಲೆ ತಗ್ಗಿಸುವಂತಾಗಿದೆ. ಮತ್ತು ತಪ್ಪಿತಸ್ಥರನ್ನು ಸುಮ್ಮನೆ ಬಿಡುವುದಿಲ್ಲವೆಂದು ಪ್ರಧಾನಿಯವರು ಹೇಳಿದ್ದಾರೆ. ಮಣಿಪುರದಲ್ಲಿ ನಡೆಯುತ್ತಿರುವ ಹಿಂಸಾಚಾರದ ಕುರಿತು ಮಾತನಾಡಲು ಇಂತಹದೊಂದು ಘೋರ ಕೃತ್ಯ ನಡೆಯ ಬೇಕಾಗಿತ್ತೇ? ಕುಕಿ ಜೋ ಬುಡಕಟ್ಟು ಸಮುದಾಯದ ಮಹಿಳೆಯರನ್ನು ಸಂಪೂರ್ಣ ಬೆತ್ತಲೆಗೊಳಿಸಿ ಸಾರ್ವಜನಿಕವಾಗಿ ಮೆರವಣಿಗೆ ಮಾಡಿ, ಸಾಮೂಹಿಕ ಅತ್ಯಾಚಾರ ಮಾಡಿರುವ ದುಷ್ಕರ್ಮಿಗಳನ್ನು ತಕ್ಷಣವೇ ಗಲ್ಲು ಶಿಕ್ಷೆಗೆ ಒಳಪಡಿಸಬೇಕು. ಸುಮಾರು 3 ತಿಂಗಳುಗಳಿಂದ ಜನಾಂಗೀಯ ಸಂಘರ್ಷ ಮತ್ತು ಹಿಂಸಾಚಾರದಿಂದ ನಲುಗಿ ಹೋಗಿರುವ ಮಣಿಪುರದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ನಿಯಂತ್ರಿಸುವಲ್ಲಿ ವಿಫಲರಾಗಿರುವ ಮಣಿಪುರ ಬೀರೇನ್ ಸಿಂಗ್ ನೇತೃತ್ವದ ಸರ್ಕಾರವನ್ನು ತಕ್ಷಣವೇ ವಜಾಗೊಳಿಸಿ ರಾಷ್ಟ್ರಪತಿ ಆಡಳಿತವನ್ನು ಜಾರಿ ಮಾಡಬೇಕು.

ಪ್ರಧಾನಿ ನರೇಂದ್ರ ಮೋದಿಯವರು ನೈತಿಕ ಹೊಣೆ ಹೊತ್ತು ತಮ್ಮ ಸ್ಥಾನಗಳಿಗೆ ರಾಜೀನಾಮೆ ಸಲ್ಲಿಸಲು ಒತ್ತಾಯಿಸಲಾಗಿದೆ.

ದಲಿತ ಸಂಘರ್ಷ ಸಮಿತಿ ರಾಜ್ಯ ಸಂಚಾಲಕ ಎಸ್.ಫಕ್ಕೀರಪ್ಪ, ಲೊಯೋಲಾ ವಿಕಾಸ ಸಂಸ್ಥೆ ನಿರ್ದೇಶಕ ಫಾ. ಅನಿಲ ಡಿಸೋಜಾ, ಜೋಜೆ ಸಿದ್ದಿ, ಗೋಪಾಲ ನಡಕಿನಮನಿ, ಎಚ್.ವಾಯ್.ಕಟ್ಟಿಮನಿ, ತೀರುಪತಿ ಕೊಂಡ್ಲಿ, ಪರಶುರಾಮ ಪೂಜಾರ, ಪ್ರಭು ಅರಶಿಣಗೇರಿ, ಕೋಟೆಪ್ಪ ಹರಿಜನ, ಸಂತೋಷ ಕಟ್ಟಿಮನಿ, ಹನ್ಮಂತ ಹರಿಜನ, ಎಲ್ ನರಶಿಂಹ ಮೂರ್ತಿ, ಸುರೇಶ ತಳವಾರ, ಸಂತೋಷ ಆಲೂರ, ನಾಗರಾಜ ಕಟ್ಟಿಮನಿ, ಯಲ್ಲವ್ವ ಹರಿಜನ, ರತ್ನವ್ವಾ ವಾಲ್ಮೀಕಿ ಮುಂತಾದವರು ಪಾಲ್ಗೊಂಡಿದ್ದರು.

# ರಾಶಿ -ಭವಿಷ್ಯ

**ರವಿವಾರ 30 ಜುಲೈ 2023**

**ಸೂ. ಉ. 7.20- ಸೂ. ಅ: 6.18**

| | |
|---|---|
| ಮೇಷ: | ನೀವು ಉದಾರರು ಆದರೆ ಅಗತ್ಯವಾದಾಗ ಕಿಲಾಡಿಗಳೂ ಆಗಿರುತ್ತೀರಿ. ಜನರು ಈ ವೇಳೆಗೆ ನಿಮ್ಮ ಕುರಿತು ತಿಳಿದಿರುತ್ತಾರೆ. ನೀವು ಮುನ್ನಡೆಯುವುದು ಸೂಕ್ತ. |
| ವೃಷಭ: | ನಿಮ್ಮೊಂದಿಗೆ ಸಮಯ ಕಳೆಯಲು ಏಕಾಂತ ಬೇಕು. ಬಾಂಧವ್ಯಗಳಲ್ಲಿ, ನೀವು ಜೀವಿಸು ಮತ್ತು ಜೀವಿಸಲು ಬಿಡು ಎನ್ನುವುದು ನಿಮ್ಮ ಉದ್ದೇಶ. |
| ಮಿಥುನ: | ಇಂದು ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವುದು ಕಠಿಣ ಕಾರ್ಯ, ಆದರೆ ನೀವು ಅದನ್ನು ಪೂರೈಸಬೇಕು. ಅದಕ್ಕೆ ಸಮಯ ಬೇಕಾಗಬಹುದು, ಆದರೆ ಭರವಸೆ ಕಳೆದುಕೊಳ್ಳಬೇಡಿ. |
| ಕಟಕ: | ಇಂದು ನೀವು ದಿನದ ಬಹುತೇಕ ಆಕ್ರಮಣಕಾರಿಯಾಗಿ ವರ್ತಿಸುತ್ತೀರಿ. ನೀವು ನಿಮ್ಮ ಆಕ್ರಮಣಶೀಲತೆಯನ್ನು ನಿಯಂತ್ರಿತ ರೀತಿಯಲ್ಲಿ ಬಳಸಿದರೆ, ನೀವು ಇಂದು ಬಹಳ ಮುಖ್ಯವಾದ ವ್ಯವಹಾರ ಪಡೆಯುತ್ತೀರಿ. |
| ಸಿಂಹ | ನೀವು ಇಂದು ನಿಮ್ಮ ಸಿದ್ಧಾಂತಗಳಲ್ಲಿ ರಾಜಿಯಾಗುವುದಿಲ್ಲ ಮತ್ತು ಫಲಿತಾಂಶವಾಗಿ ನೀವು ನಿಮ್ಮಲ್ಲಿ ಸಂತೃಪ್ತರಾಗುತ್ತೀರಿ. ಆದಾಗ್ಯೂ, ನಿಮ್ಮ ಸಮಾಧಾಕರ ವಿಧಾನವನ್ನು ಬಿಡದಿರಿ. |
| ಕನ್ಯಾ | ನೀವು ಕೆಲ ಕ್ಷುಲ್ಲಕ ವಿಷಯಗಳಿಂದ ಕದಡಿದಂತಿರುತ್ತೀರಿ. ಇದು ನಿಮ್ಮ ವ್ಯಕ್ತಿತ್ವವನ್ನು ಸುಧಾರಿಸುವ ಕೋರ್ಸ್ ಸೇರಿಕೊಳ್ಳಲು ನಿಮಗೆ ಪ್ರೇರೇಪಿಸುತ್ತದೆ. |
| ತುಲಾ | ಹಳೆಯ ಸ್ಮರಣೆಗಳಲ್ಲಿರುವ ನೀವು ಇಂದು ಹಿಂದಿನ ಒಳ್ಳೆಯ ನೆನಪುಗಳನ್ನು ಜ್ಞಾಪಿಸಿಕೊಳ್ಳಲು ಇಚ್ಛಿಸುತ್ತೀರಿ. ಸಮಾನ ಮನಸ್ಕರೊಂದಿಗೆ ಕುಳಿತು ನಿಮ್ಮ ಆಲೋಚನೆ ಮತ್ತು ಚಿಂತನೆಗಳನ್ನು ಹಂಚಿಕೊಳ್ಳುತ್ತೀರಿ. |
| ವೃಶ್ಚಿಕ | ಇಂದು ನಿಮಗೆ ಸಾಕಷ್ಟು ಆಶ್ಚರ್ಯಗಳು ಕಾದಿವೆ. ನಿಗೂಢವನ್ನು ನಿಧಾನವಾಗಿ ಅನಾವರಣ ಮಾಡುವ ಸಮಯ. ವೃತ್ತಿಪರ ಚರ್ಚೆಗಳ ವಿಷಯಕ್ಕೆ ಬಂದರೆ ಚೆಂಡು ನಿಮ್ಮ ಅಂಗಳದಲ್ಲಿದೆ. |
| ಧನಸ್ಸು | ಪ್ರೀತಿಯ ಜೀವನ ಮತ್ತು ನಿಮ್ಮ ಪ್ರಿಯತಮೆ ನಿಮ್ಮ ದಿನವನ್ನು ಆಕ್ರಮಿಸಿಕೊಳ್ಳುವ ಸಾಧ್ಯತೆ ಇದೆ. ನಿಮ್ಮ ವಾರ್ಡ್ ರೋಬ್ ಮೇಕೋವರ್ ನೀಡುತ್ತೀರಿ. |
| ಮಕರ | ಇಂದು ನೀವು ಹಿಂದೆ ಯಾವ ತಪ್ಪುಗಳನ್ನು ಮಾಡಿದ್ದೀರಿ ಎಂದು ಕುಳಿತು ಆಲೋಚಿಸುತ್ತೀರಿ. ಕೆಲಸದಲ್ಲಿ ನೀವು ತಂಡದ ಆಟಗಾರರಾಗಿ ಕೆಲಸ ಮಾಡಿ ತಂಡಕ್ಕೆ ಯಶಸ್ಸು ತಂದುಕೊಡುತ್ತೀರಿ. |
| ಕುಂಭ | ಹೊಳೆಯುವ ದಿನ ಮತ್ತು ತಾರೆಗಳ ರಾತ್ರಿ! ಈ ದಿನ ಮಿತ್ರರಿಗಾಗಿ. ನೀವು ಮಾತು, ಹಾಡು, ಕೂಗಾಟ ಮತ್ತು ತತ್ವಶಾಸ್ತ್ರ, ಮೌಲ್ಯಗಳು ಮತ್ತು ರಾಜಕೀಯವನ್ನು ನಿಮ್ಮ ಮಿತ್ರರೊಂದಿಗೆ ಚರ್ಚಿಸುತ್ತೀರಿ. |
| ಮೀನ | ಪ್ರಣಯ ಸಂಬಂಧಗಳಿಗೆ ಇಂದು ತಿರುವಿನ ಸಾಧ್ಯತೆ ಇದೆ. ಪ್ರೀತಿಯಲ್ಲಿ, ಕಛೇರಿಯಲ್ಲಿಯಂತೆ, ನೀವು ಕಠಿಣ ಪರಿಶ್ರಮಕ್ಕೆ ಪರ್ಯಾಯವಿಲ್ಲ ಎಂದು ಕಂಡುಕೊಳ್ಳುತ್ತೀರಿ. |

# ಕೃತಕ ಆಭರಣ ತಯಾರಿಕೆ

ಹಾವೇರಿ: ದೇವಗಿರಿಯ ಬ್ಯಾಂಕ್ ಆಫ್ ಬರೋಡಾ ಗ್ರಾಮೀಣ ಸ್ವ ಉದ್ಯೋಗ ತರಬೇತಿ ಸಂಸ್ಥೆ (ಆರ್‌ಸೆಟಿ)ಯಲ್ಲಿ 13 ದಿನಗಳ "ಕೃತಕ ಆಭರಣ ತಯಾರಿಕೆ" ತರಬೇತಿಗೆ ಜಿಲ್ಲೆಯ ನಿರುದ್ಯೋಗಿ ಯುವತಿಯರಿಂದ ಅರ್ಜಿ ಆಹ್ವಾನಿಸಲಾಗಿದೆ.

ಅಭ್ಯರ್ಥಿಯು 18 ರಿಂದ 45 ವರ್ಷದೊಳಗಿರಬೇಕು. ಜಾತಿ ಮತ್ತು ಆದಾಯ, ಆಧಾರ ಕಾರ್ಡ್, ಬ್ಯಾಂಕ್ ಪಾಸ್ ಬುಕ್, ಬಿಪಿಎಲ್ ಕಾರ್ಡ್, ಇತ್ತೀಚಿನ ಭಾವಚಿತ್ರ, ಜನ್ಮ ದಿನಾಂಕ ದೃಢೀಕರಣಪ್ರಮಾಣ ಪತ್ರದ ಝೆರಾಕ್ಸ್ ಪ್ರತಿಗಳನ್ನು ತರಬೇಕು. ತರಬೇತಿಯು ಊಟ ವಸತಿಯೊಂದಿಗೆ ಉಚಿತವಾಗಿರುತ್ತದೆ. ಆಸಕ್ತರು ದಿನಾಂಕ 15-08-2023ರೊಳಗಾಗಿ ಅರ್ಜಿ ಸಲ್ಲಿಸಬೇಕು. ಮೊದಲು ಅರ್ಜಿ ಸಲ್ಲಿಸಿದವರಿಗೆ ಹೆಚ್ಚಿನ ಆದ್ಯತೆಯನ್ನು ನೀಡಲಾಗುವುದು.

ಹೆಚ್ಚಿನ ಮಾಹಿತಿಗಾಗಿ ನಿರ್ದೇಶಕರು, ಬ್ಯಾಂಕ ಆಫ್ ಬರೋಡ ಗ್ರಾಮೀಣ ಸ್ವ-ಉದ್ಯೋಗ ತರಬೇತಿ ಸಂಸ್ಥೆ, ಡಿ.ಸಿ ಆಫೀಸ್ ಕಟ್ಟಡದ ಹಿಂಭಾಗ,ದೇವಗಿರಿ, ಹಾವೇರಿ-ಮೊ. 9611645907/8660219375 ಸಂಪರ್ಕಿಸಲು ಕೋರಲಾಗಿದೆ.

# ತರಬೇತಿಗೆ ಅರ್ಜಿ ಆಹ್ವಾನ

ಹಾವೇರಿ: ದೇವಗಿರಿಯ ಬ್ಯಾಂಕ್ ಆಫ್ ಬರೋಡಾ ಗ್ರಾಮೀಣ ಸ್ವ ಉದ್ಯೋಗ ತರಬೇತಿ ಸಂಸ್ಥೆ (ಆರ್‌ಸೆಟಿ)ಯಲ್ಲಿ 30 ದಿನಗಳ "ಫೋಟೋಗ್ರಾಫಿ ಮತ್ತು ವಿಡಿಯೋಗ್ರಾಫಿ" ತರಬೇತಿಗೆ ಜಿಲ್ಲೆಯ ನಿರುದ್ಯೋಗಿ ಯುವಕ ಮತ್ತು ಯುವತಿಯರಿಂದ ಅರ್ಜಿ ಆಹ್ವಾನಿಸಲಾಗಿದೆ.

ಅಭ್ಯರ್ಥಿಯು 18 ರಿಂದ 45 ವರ್ಷದೊಳಗಿರಬೇಕು. ಜಾತಿ ಮತ್ತು ಆದಾಯ, ಆಧಾರ ಕಾರ್ಡ್, ಬ್ಯಾಂಕ್ ಪಾಸ್ ಬುಕ್, ಬಿಪಿಎಲ್ ಕಾರ್ಡ್, ಇತ್ತೀಚಿನ ಭಾವಚಿತ್ರ, ಜನ್ಮ ದಿನಾಂಕ ದೃಢೀಕರಣಪ್ರಮಾಣ ಪತ್ರದ ಝೆರಾಕ್ಸ್ ಪ್ರತಿಗಳನ್ನು ತರಬೇಕು. ತರಬೇತಿಯು ಊಟ ವಸತಿಯೊಂದಿಗೆ ಉಚಿತವಾಗಿರುತ್ತದೆ. ಆಸಕ್ತರು ದಿನಾಂಕ 15-08-2023ರೊಳಗಾಗಿ ಅರ್ಜಿ ಸಲ್ಲಿಸಬೇಕು. ಮೊದಲು ಅರ್ಜಿ ಸಲ್ಲಿಸಿದವರಿಗೆ ಹೆಚ್ಚಿನ ಆದ್ಯತೆಯನ್ನು ನೀಡಲಾಗುವುದು.

ಹೆಚ್ಚಿನ ಮಾಹಿತಿಗಾಗಿ ನಿರ್ದೇಶಕರು, ಬ್ಯಾಂಕ ಆಫ್ ಬರೋಡ ಗ್ರಾಮೀಣ ಸ್ವ-ಉದ್ಯೋಗ ತರಬೇತಿ ಸಂಸ್ಥೆ, ಡಿ.ಸಿ ಆಫೀಸ್ ಕಟ್ಟಡದ ಹಿಂಭಾಗ,ದೇವಗಿರಿ, ಹಾವೇರಿ-ಮೊ. 9110865650/8660219375 ಸಂಪರ್ಕಿಸಲು ಕೋರಲಾಗಿದೆ.

# ನಿಲಯಗಳ ಪ್ರವೇಶಕ್ಕೆ ಅರ್ಜಿ ಆಹ್ವಾನ

ಹಾವೇರಿ: ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳಲ್ಲಿ(ಸಾಮಾನ್ಯ ಪದವಿ ಕೋರ್ಸ್‌ನ ವಿದ್ಯಾರ್ಥಿಗಳಿಗೆ ಮಾತ್ರ) ಪ್ರವೇಶಕ್ಕಾಗಿ ಹೊಸದಾಗಿ ಪ್ರವೇಶ ಬಯಸುವ ವಿದ್ಯಾರ್ಥಿಗಳಿಂದ ಆನ್‌ಲೈನ್ ಅರ್ಜಿ ಆಹ್ವಾನಿಸಲಾಗಿದೆ.

ಪ್ರವರ್ಗ-1, 2ಎ, 2ಬಿ, 3ಎ, 3ಬಿ, ಪಜಾ, ಪ.ವರ್ಗ ಮತ್ತು ಇತರೆ ಜನಾಂಗಗಳಿಗೆ ಸೇರಿದ ವಿದ್ಯಾರ್ಥಿಗಳಿಂದ 2023-24ನೇ ಸಾಲಿಗೆ ಅರ್ಜಿ ಆಹ್ವಾನಿಸಲಾಗಿದೆ. ಪ್ರವರ್ಗ-1, ಎಸ್.ಸಿ. ಮತ್ತು ಎಸ್.ಸಿ. ವಿದ್ಯಾರ್ಥಿಗಳ ಪೋಷಕರ ವಾರ್ಷಿಕ ಆದಾಯ ರೂ. 2.50ಲಕ್ಷ, ಪ್ರವರ್ಗ-2ಎ, 2ಬಿ, 3ಎ, 3ಬಿ ಇತರೆ ಹಿಂದುಳಿದ ವರ್ಗ ಹಾಗೂ ಇತರೆ ಹಿಂದುಳಿದ ವರ್ಗ ಹಾಗೂ ಇತರರ ವಾರ್ಷಿಕ ಆದಾಯ ರೂ. ಒಂದು ಲಕ್ಷದೊಳಗಿರಬೇಕು.

ಅರ್ಹ ವಿದ್ಯಾರ್ಥಿಗಳು ದಿನಾಂಕ 16-08-2023 ರೊಳಗಾಗಿ ವೆಬ್‌ಸೈಟ್‌ನಲ್ಲಿ www.shp.karnataka.gov.in ಅರ್ಜಿ ಸಲ್ಲಿಸಬೇಕು.

ತಾಲೂಕುವಾರು ವಿದ್ಯಾರ್ಥಿ ನಿಲಯಗಳ ವಿವರ ಹಾಗೂ ವಿದ್ಯಾರ್ಥಿ ನಿಲಯದ ಪ್ರವೇಶಕ್ಕೆ ಇರಬೇಕಾದ ಅರ್ಹತೆ, ಸಲ್ಲಿಸಬೇಕಾದ ದಾಖಲೆಗಳ ವಿವರಕ್ಕಾಗಿ ವೆಬ್‌ಸೈಟ್ ತಿತಿತಿ.ಛಿಥಿತಿಜ.ಇಚಿಡಿಟಿಚಿಣಚಿಞಚಿ.ರಿಠತ.ಎಟ ನೋಡಬಹುದು.

ಅರ್ಜಿ ಸಲ್ಲಿಸುವಾಗ ತಾಂತ್ರಿಕ ತೊಂದರೆಗಳಾದಲ್ಲಿ ಇ-ಮೇಲ್ bcwd.hostels@karnataka.gov.in ಮುಖಾಂತರ ಅಥವಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ ಮತ್ತು ತಾಲೂಕು ಅಧಿಕಾರಿಗಳ ಕಚೇರಿ ಸಂಪರ್ಕಿಸಬಹುದು.

ಹೆಚ್ಚಿನ ಮಾಹಿತಿಗಾಗಿ ಸಹಾಯವಾಣಿ ಸಂಖ್ಯೆ 080-8050370006 ಸಂಪರ್ಕಿಸಲು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಇಲಾಖೆಯ ಪಿಂಚಣಿ ಅದಾಲತ್

ಹಾವೇರಿ: ಹಾವೇರಿ ಅಂಚೆ ವಿಭಾಗದ ಅಂಚೆ ಇಲಾಖೆಯ ಪಿಂಚಣಿದಾರರಿಗೆ ಪಿಂಚಣಿ ಆದಾಲತ್ ಜುಲೈ 28 ರಂದು ಹಾವೇರಿ ಅಂಚೆ ಅಧೀಕ್ಷಕರ ಕಚೇರಿಯಲ್ಲಿ ಬೆಳಿಗ್ಗೆ 11 ಗಂಟೆಗೆ ಆಯೋಜಿಸಲಾಗಿದೆ.

ಅಂಚೆ ಸೇವೆಯಿಂದ ನಿವೃತ್ತರಾದ ನೌಕರರ ಪಿಂಚಣಿ ಮತ್ತು ಇತರೆ ನಿವೃತ್ತಿ ಸೌಲಭ್ಯಗಳ ಹಾಗೂ ಕುಟುಂಬ ಪಿಂಚಣಿದಾರರ ಅಹವಾಲುಗಳೇನಾದರೂ ಇದ್ದಲ್ಲಿ ಅವುಗಳನ್ನು ಅದಾಲತ್ತನಲ್ಲಿ ಆಲಿಸಲಾಗುವುದು. ಗ್ರಾಮೀಣ ಅಂಚೆ ಸೇವಕರು ಮತ್ತಿತರರಿಗೆ ಈ ಅದಾಲತ್ತನಲ್ಲಿ ಪಾಲ್ಗೊಳ್ಳಲು ಅವಕಾಶವಿಲ್ಲ.

ಅದಾಲತ್ತನಲ್ಲಿ ತೀರ್ಮಾನಿಸುವ ಅಹವಾಲುಗಳಿದ್ದಲ್ಲಿ, ಅಂಚೆ ಅಧೀಕ್ಷಕರು, ಹಾವೇರಿ ಅಂಚೆ ವಿಭಾಗ ಹಾವೇರಿ-581110 ಇವರಿಗೆ ಲಿಖಿತವಾಗಿ ಅಥವಾ ಇ ಅಂಚೆ ಜಝುಚಿತಜಡು.ಇಚಿ@ುಜಟುಚಿರಿಥಣ.ರಠತ.ಎಟ ಮೂಲಕ ಸಲ್ಲಿಸಬಹುದು ಎಂದು ಹಾವೇರಿ ಅಂಚೆ ವಿಭಾಗದ ಅಂಚೆ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಿಧಾನಸಭೆ ಉಪಾಧ್ಯಕ್ಷರ ಪ್ರವಾಸ ವಿವರ

ಹಾವೇರಿ: ವಿಧಾನಸಭಾ ಉಪಾಧ್ಯಕ್ಷರಾದ ರುದ್ರಪ್ಪ ಲಮಾಣಿ ಅವರು ಜುಲೈ 28 ರಂದು ಹಾವೇರಿ ಜಿಲ್ಲಾ ಪ್ರವಾಸಕೈಗೊಂಡು ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ.

ಜುಲೈ 28 ರಂದು ಬೆಳಿಗ್ಗೆ 9-30ಕ್ಕೆ ರಾಣೇಬೆನ್ನೂರು ಜೆಸಿಐ ಅವರು ಸಮುದಾಯ ಆರೋಗ್ಯ ಕೇಂದ್ರದಲ್ಲಿ ಆಯೋಜಿಸಿರುವ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಬೆಳಿಗ್ಗೆ 10 ಗಂಟೆಗೆ ಹಾವೇರಿಯ ಶಿವಬಸವೇಶ್ವರ ಕಲ್ಯಾಣಮಂಟಪದಲ್ಲಿ ಜಿಲ್ಲಾ ಹೈನುಗಾರರ ಸಮ್ಮೇಳನದಲ್ಲಿ ಭಾಗವಹಿಸಲಿದ್ದಾರೆ. ಬೆಳಿಗ್ಗೆ 11 ಗಂಟೆಗೆ ಪಶುವೈದ್ಯಕೀಯ ಆಸ್ಪತ್ರೆಯಲ್ಲಿ ಜಿಲ್ಲಾ ಪ್ರಾಣಿ ಪ್ರಯೋಗಾಲಯದ ನೂತನ ಕಟ್ಟಡ ಕಾಮಗಾರಿ ಉದ್ಘಾಟನೆ ಮಾಡಲಿದ್ದಾರೆ. ಮಧ್ಯಾಹ್ನ 2-30ಕ್ಕೆ ಖಾಸಗಿ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಸಂಜೆ 4 ರಿಂದ 7ರವರೆಗೆ ಸಾರ್ವಜನಿಕ ಕುಂದು-ಕೊರತೆ ಆಲಿಸಿ ವಾಸ್ತವ್ಯ ಮಾಡಲಿದ್ದಾರೆ.

# ಚುನಾವಣೆ ಮುಂದೂಡಿಕೆ

ರಾಣೇಬೆನ್ನೂರು : ತಾಲೂಕಿನ ಹರನಗಿರಿ ಗ್ರಾಮ ಪಂಚಾಯತ್‌ನ ಎರಡನೇ ಅವಧಿಗಾಗಿ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಗಳ ಆಯ್ಕೆ ಸಲುವಾಗಿ ಶುಕ್ರವಾರ ನಿಗದಿಯಾಗಿದ್ದ ಚುನಾವಣೆಯನ್ನು ಧಾರವಾಡ ಉಚ್ಚ ನ್ಯಾಯಾಲಯದ ಆದೇಶದ ಮೇರೆಗೆ ಚುನಾವಣಾಧಿಕಾರಿ ತಹಸೀಲ್ದಾರ ಕೆ.ಗುರುಬಸವರಾಜ ಮುಂದೂಡಿದ್ದಾರೆ.

ಮೀಸಲಾತಿಗೆ ಆಕ್ಷೇಪ ವ್ಯಕ್ತಪಡಿಸಿ ಗ್ರಾಪಂ ಸದಸ್ಯೆ ಅಕ್ಕಮ್ಮ ಶಿವಪ್ಪ ಹಳ್ಳಿ ಎಂಬುವರು ಧಾರವಾಡ ಉಚ್ಚ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿದ್ದರು. ದಾವೆ ಸ್ವೀಕರಿಸಿದ ನ್ಯಾಯಾಲಯವು ಮುಂದಿನ ಆದೇಶ ನೀಡುವವರೆಗೂ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಗಳಿಗೆ ಚುನಾವಣೆ ನಡೆಸದಂತೆ ನಿರ್ದೇಶನ ನೀಡಿದೆ.

# ಗಾಂಧಿ ಭವನ ಕಟ್ಟಡ ವೀಕ್ಷಣೆ

ಹಾವೇರಿ: ಹಾವೇರಿ ನಗರದ ರೈಲ್ವೆ ನಿಲ್ದಾಣ ರಸ್ತೆಯಲ್ಲಿ ನಿರ್ಮಾಣ ಮಾಡಿರುವ ಜಿಲ್ಲಾ ಗಾಂಧಿ ಭವನಕ್ಕೆ ಶುಕ್ರವಾರ ವಿಧಾನಸಭಾ ಉಪಾಧ್ಯಕ್ಷರಾದ ರುದ್ರಪ್ಪ ಲಮಾಣಿ ಅವರು ಭೇಟಿ ನೀಡಿ ಪರಿಶೀಲನೆ ನೀಡಿದರು.

ಗಾಂಧಿ ಭವನ ಒಳಾಂಗಣ ಹಾಗೂ ಹೊರಾಂಗಣವನ್ನು ಪರಿಶೀಲಿಸಿದರು. ಈ ಸಂದರ್ಭದಲ್ಲಿ ಹಿರೇಕೆರೂರು ಕ್ಷೇತ್ರದ ಶಾಸಕ ಯು.ಬಿ.ಬಣಕಾರ, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯರಾದ ಕೊಟ್ರೇಶಪ್ಪ ಬಸೇಗಣ್ಣಿ, ಜಿಲ್ಲಾ ನಿರ್ಮಿತಿ ಕೇಂದ್ರದ ಯೋಜನಾ ನಿರ್ದೇಶಕ ತಿಮ್ಮೇಶಕುಮಾರ ಇತರರು ಉಪಸ್ಥಿತರಿದ್ದರು.



e-mail: news.kannadamma@gmail.com|Kannadamma.advt@gmail.com. Kannadamma Daily Published by Owner Rajkumar M Topannavar at M.G Towers, Club Road, Belagavi & Printed at Elegant Offset Printers Pvt. Ltd., Plot No.331 & 15/1(Eastern Part), M.T Sagar Industrial Estate, Gokul Road, Hubballi-30, T: Hubballi D: Dharwad. Editor: Rajkumar Mahadev Topannavar.
ಸಂಸ್ಥಾಪಕರು: ದಿ. ಎಂ.ಎಸ್ ಟೋಪಣ್ಣವರ

# ಕನಸುಗಳು ನನಸಾಗುತ್ತವೆ, ಕಾಣುವ ಧೈರ್ಯವಿದ್ದರೆ ಮಾತ್ರ!



**ಬೆಂಗಳೂರು:** ಒಂದೂವರೆ ವರ್ಷದ ಹಿಂದೆ ಬಾರ್ಸಿಲೋನಾದ 160, ಕರೀರ್ ದಿ ಪದಿಯಾದ ಸಣ್ಣ ಕೋಣೆಯಲ್ಲಿ 2 ಸೆಮಿಸ್ಟರಿನ ಪರೀಕ್ಷೆ ಮುಗಿಸಿ ಕೂತಿದ್ದೆ. ಬಾರ್ಸಿಲೋನಾದಲ್ಲಿ ಅಥವಾ ಯುರೋಪಿನಲ್ಲಿ ಪರೀಕ್ಷೆ ಮುಗಿದ ನಂತರ ದೊಡ್ಡ ಪಾರ್ಟಿ, ಒಂದು ಸಂಗೀತ ಕಾರ್ಯಕ್ರಮ ಕಡ್ಡಾಯವಾಗಿ ಆಗುತ್ತಿತ್ತು. ಮೊದಲ ಸೆಮಿಸ್ಟರಿನ ಪರೀಕ್ಷೆಯ ನಂತರ ಈ ಸಮಾರಂಭದಲ್ಲಿ ಭಾಗಿಯಾಗಿದ್ದೆ.

ಎರಡನೇ ಸೆಮಿಸ್ಟರಿನ ನಂತರ, ಅದಕ್ಕಿಂತ ಮನೆಯಲ್ಲಿ ನಡೆದ ಯುಗಾದಿಯ ಹೋಳಿಗೆ ಮತ್ತು ಮನೆಯಲ್ಲಿ ಎಲ್ಲರೂ ಸೇರಿದ್ದ ಫೋಟೋ ತುಂಬಾ ನೆನಪಾಗುತ್ತಿತ್ತು. ಮಧ್ಯರಾತ್ರಿಯಾದರೂ ಅದೇ ಅದೇ ಫೋಟೋವನ್ನ ತಿರುಗಿಸಿ ಮರುಗಿಸಿ ನೋಡುತ್ತಿದ್ದೆ. ಕನ್ನಡ ಹೇಳಿಕೊಡುವ ಗುಂಪೂ ಸಹ ಅವತ್ತು ಬಹಳ ನಿಶ್ಯಬ್ದವಾಗಿತ್ತು. ಬೆಂಗಳೂರಿನಲ್ಲಿ ಮುಂಜಾವವಾಗಿದ್ದರಿಂದ ಎಬ್ಬಿಸುವ ಮನಸ್ಸಾಗಿರಲ್ಲಿಲ್ಲ. ಇನ್ನು ಹೊಸದಾಗಿ ಕೊಂಡುಕೊಂಡ ಮ್ಯಾಕ್ ಬುಕ್ ಗೆ ಕನ್ನಡವೇ ಗೊತ್ತಿರಲ್ಲಿಲ್ಲ. ಭಾರತದಲ್ಲಿನ ಗೆಳೆಯ ಗೆಳತಿಯರೆಲ್ಲ ಮಲಗಿದ್ದರು, ಅಮೇರಿಕಾದ ಸ್ನೇಹಿತರಿಗೆ ಇನ್ನೂ ಆಫೀಸಿನ ಕೆಲಸ, ಯುರೋಪಿನವರು ಆ ಪಾರ್ಟಿಯಲ್ಲಿದ್ದರು. ಸುಮಾರು ವರ್ಷದಿಂದ ಪರಿಚಯವಿದ್ದ ಶಾಮ್ ಸರ್ ಗೆ ಮೆಸೆಂಜರ್ ನಲ್ಲಿ ಬರುವ ನೂರಾರು ಮೆಸೇಜ್ ಗಳಲ್ಲಿ ಅವತ್ತು ನನ್ನದೂ ಬಹು ಸಂಕೋಚವಾಗಿ ಬರೆದ ಮೆಸೇಜ್ ಒಂದು ಬಂದಿತ್ತು.

"I think I can write something up about growing up in a ooru called bengalooru" ಇದಷ್ಟನ್ನ ಬರೆದು ತಾತ ಬರೆದ ಯಾವುದೋ ಹಳೆಯ ಬರಹವನ್ನ ಓದುತ್ತಾ ಕೂತು ಹಾಗೆ ಒಂದಷ್ಟು ವರ್ಷಗಳ ಹಿಂದೆ ನಡೆದ ಘಟನೆ ನೆನಪಿಸಿಕೊಂಡೆ.

ನಾನು ಶಾಲೆಯಲ್ಲಿದ್ದಾಗ ಎಲ್ಲಾ ಕಾರ್ಯಕ್ರಮದಲ್ಲಿಯೂ ಭಾಗವಹಿಸುತ್ತಿದ್ದೆ. ಟೀಚರ್ಸ್ ಅಂತೂ ಎಲ್ಲಾ ಕಾರ್ಯಕ್ರಮಕ್ಕೂ ನನ್ನನ್ನ ಸೇರಿಸಿಕೊಳ್ಳುತ್ತಿದ್ದರು. ಯಾವುದೇ ಭಯವಿಲ್ಲದೆ ಸ್ಟೇಜ್ ಮೇಲೆ ಮಾತಾಡುವ ಕಲೆ ಗೊತ್ತಿತ್ತು. ಕನ್ನಡ ತಿದ್ದೋದಕ್ಕೆ ತಾತ ಮತ್ತು ಅಮ್ಮ ಇದ್ದರು. ಹಾಗಾಗಿ ಭಾಷಣ, ಹಾಡು, ನಿರೂಪಣೆ ಎಲ್ಲದಕ್ಕೂ ನನ್ನದೇ ಅಧಿಪತ್ಯ. ಆದರೂ ನನಗೆ ಡ್ಯಾನ್ಸ್ ಮಾಡುವ ಹುಚ್ಚಿತ್ತು. ಅದೊಂದಕ್ಕೆ ಮಾತ್ರ ನನ್ನನ್ನ ಕರೀತಿರಲ್ಲಿಲ್ಲ. ಕರೀಲಿ ಅನ್ನೋ ಮನಸ್ಸಾಗಿತ್ತು. ಆದರೆ ಪ್ರತಿ ವರ್ಷವೂ ಅವಕಾಶ ಸಿಗುತ್ತಿರಲ್ಲಿಲ್ಲ.

ಭಾಷಣ ಸ್ಪರ್ಧೆಯಲ್ಲಿ ನನಗೆ ಬಹುಮಾನ ಬಂದ್ದದ್ದನ್ನು ದೊಡ್ಡ ನೋಟೀಸ್ ಬೋರ್ಡಿನ ಮೇಲೆ ಹಾಕಿದ್ದನ್ನು ಅಮ್ಮ ಮನೆಯಲ್ಲಿ ಹೇಳುತ್ತಿದ್ದಾಗ ನಾನು ಮುಖ ಸಪ್ಪೆ ಮಾಡಿಕೊಂಡು ತಾತನ ವರಾಂಡ ರೂಮಿಗೆ ಹೋದೆ. ಎಂದಿನಂತೆ ಗುಡ್ಡಿಯ ಕಥೆ ಕೇಳಲು ತಾತ ಕಾದಿದ್ದರು. "ದೊಡ್ಡ ಭಾಷಣವಂತೆ ಇವತ್ತು" ಎಂದು ರೇಗಿಸುತ್ತಿದ್ದರು. ಇದೇನು ಪ್ರೈಝ್ ಬಂದಿದ್ದರೂ ಮುಖ ಗಂಟುಹಾಕಿದ್ದಾಳೆ ಎಂದು ಕೇಳಿದಾಗ "ನನ್ನನ್ನ ಒಂದು ಸರ್ತಿನೂ ಡ್ಯಾನ್ಸ್ ಗೆ ಸೇರ್ಸ್ಕೊಳಲ್ಲ ತಾತ" ಎಂದು ಕೋಪದಿಂದ ಅಂದೆ.

ತಾತ ನೀ ಹಾಡ್ತೀಯ, ಮಾತಾಡ್ತೀಯ ಎಂದು ಸಮಾಧಾನ ಪಡಿಸಿದರೂ ನಾ ಕೇಳಲು ತಯಾರಿರಲ್ಲಿಲ್ಲ. ನಂತರ "ನೋಡು ಗುಡ್ಡಿ, ನಿನಗೇನು ಬೇಕೋ ಅದನ್ನ ಗಳಿಸಿಕೊಳ್ಳಲು ಈ ಜಗತ್ತಲ್ಲಿ ಅವಕಾಶವಿದೆ, ಒಮ್ಮೆ ಕೇಳಿದರೆ ಕೆಲವೊಂದು ಸಾಧ್ಯವಾಗುತ್ತದೆ, ಕೇಳದೇ ನಿನ್ನ ಮನಸ್ಸಿನ ಇಚ್ಛೆಯನ್ನ ಮತ್ತ್ಯಾರೋ ಅರ್ಥ ಮಾಡಿಕೊಳ್ಳುತ್ತಾರೆ ಎಂದು ಕೂರಬಾರದು" ಎಂದು ಹೇಳಿ ಬಹುಮಾನ ಬಂದಿದ್ದಕ್ಕೆ ಕಲ್ಲುಸಕ್ಕರೆ ಕೊಟ್ಟು ಗಲ್ಲ ಸವರಿ ಕಳಿಸಿದ್ದರು ತಾತ. ಆ ಮಾತು ನನ್ನ ಮನಸಲ್ಲಿಯೇ ಯಾವಾಗಲೂ ಇತ್ತು. ಇದೇ ನೆನೆಸಿಕೊಂಡು ಬರೀತೀನಿ ಎಂದು ಶ್ಯಾಮ್ ಸರ್ ಗೆ ಬರೆದೆ. ಉತ್ತರ ಅಪೇಕ್ಷೆ ಇರಲ್ಲಿಲ್ಲ, ಆದರೂ ಪ್ರಯತ್ನ ಮಾಡೋಣ ಎಂದಷ್ಟೆ ನನ್ನ ಮನಸ್ಸು ಹೇಳುತ್ತಿತ್ತು.

ಬಾರ್ಸಿಲೋನಾ ಬೆಳಗ್ಗಿನ ಸಮಯಕ್ಕೆ ಉತ್ತರ ಬಂದಿತ್ತು. ಶ್ಯಾಮ್ ಸರ್ ಉತ್ತರ ಬರೆದು ಪ್ರಸಾದ್ ಸರ್ ನ ಪರಿಚಯ ಮಾಡಿಕೊಟ್ಟರು. ಪ್ರತಿವಾರ ಅಂಕಣ ಬರೆಯುವ ಅವಕಾಶ, ಹೆಸರು 'ಜಯನಗರದ ಹುಡುಗಿ'ಯೆಂದು ನಾನೇ ಸೂಚಿಸಿ ಬರೆಯಲು ಶುರು ಮಾಡು ಅಂದರು. ಮೊದಲ ಬರಹ ಬರೆಯುವ ಹೊತ್ತಿಗೆ ನನ್ನ ಹೊಟ್ಟೆಲಿ ಚಿಟ್ಟೆ ಬಿಟ್ಟಂಗಾಗಿತ್ತು. ಇದು ಸರಿಯೋ ತಪ್ಪೋ ಅವೆಲ್ಲಾ ಯೋಚನೆಗಳೂ ಶುರುವಾಗಿತ್ತು. ಇದೆಲ್ಲ ಕಳಿಸೋದಕ್ಕೆ ಮುಂಚೆ ತಾತ ಒಮ್ಮೆ ಓದಿದ್ದರೆ ಚೆಂದ ಇರುತ್ತಿತ್ತು ಎಂದೂ ಅನಿಸಿದರೂ ಕಳಿಸಿದ್ದೆ.

ಒಂದು 4 ಲೇಖನ ಬರೆಯಬಹುದು ಎಂದು ಅಂದಾಜು ಮಾಡಿದ್ದೆ. ಆದರೆ ಮೇಘನಾಳನ್ನು ಶಾಶ್ವತವಾಗಿ ಜಯನಗರದ ಹುಡುಗಿಯಾಗಿ ಮಾಡುವ ಎಲ್ಲಾ ಹುನ್ನಾರವೂ ಒಂಡಿಯಾಗೆ ಇದೆ ಎಂದು ಗೊತ್ತಾಯಿತು. 75 ವಾರಗಳ ಕಾಲ ನಾ ಹೋದಲ್ಲೆಲ್ಲ ಲ್ಯಾಪ್ ಟಾಪ್ ತೆಗೆದುಕೊಂಡು ಹೋಗುವಹಾಗೆ ಮಾಡಿದ್ದು ಈ ಕಾಲಂ. ಬೆಂಗಳೂರು, ಮೈಸೂರು, ಶಿವಮೊಗ್ಗ, ಬಾರ್ಸಿಲೋನಾ, ದೆನ್ ಹಾಗ್, ಬೆಲ್ಜಿಯಂ, ರೋಮ್, ಅರ್ಡೆನಸ್, ಸ್ವಿಸ್, ಎಲ್ಲಾ ಕಡೆ ಎಲ್ಲಾ ಜನರಲ್ಲಿಯೂ ಅಂಕಣಕ್ಕೆ ಹೊಸ ವಿಷಯ ಹುಡುಕುವ ಪ್ರಯತ್ನ ಮಾಡುತ್ತಾ ಇದ್ದೇನೆ.

ಅಂಕಣದ ಸೆಟ್ ಅಪ್ ತುಂಬಾ ಪ್ರೊಫೆಶನಲ್. ನಮ್ಮ ಆಫೀಸಿನ ಥರವೇ ಇಲ್ಲೂ ಲೇಖನ ಬರಿಯಬೇಕು, ಪೋರ್ಟಲ್ ಗೆ ಸಬ್ಮಿಟ್ ಮಾಡಬೇಕು. ರೆವ್ಯೂ ಆಗತ್ತೆ. ಥೇಟ್ ನಮ್ಮ ಐಟಿ ಮಂದಿಯ ಕೋಡ್ ರೆವ್ಯೂ ಥರಹ. ಅದೂ ನನ್ನ ರೆವ್ಯೂ ಪ್ರಸಾದ್ ಸರ್ ಮಾಡುವುದರಿಂದ ನನಗೆ ಪ್ರತಿ ಬುಧವಾರ ಅಗ್ನಿ ಪರೀಕ್ಷೆ. ನನ್ನ ಕಛೇರಿಯಲ್ಲಿ ಸಹ ನಾನು ನೇರವಾಗಿ ಸಿಟಿಓಗೆ ರಿಪೋರ್ಟ್ ಆಗುವುದರಿಂದ ಇಲ್ಲೂ ಅಲ್ಲೂ ಒಂದೇ ಅನುಭವ. ಆದರೆ ದೊಡ್ಡ ಸ್ಥಾನದಲ್ಲಿ ಕೂತಿರುವವರು ಬಹಳ ವಿನಯವಂತರಾಗಿರುತ್ತಾರೆ ಎಂದು ಇವರನ್ನ ನೋಡಿಯೇ ಕಲಿತ್ತಿದ್ದೇನೆ.

ಇನ್ನು ಜೋಗಿ ಸರ್ ಅಂತೂ ನಮ್ಮಂಥ ಚಿಕ್ಕವರಿಗೆ ದಾರಿದೀಪ. ಅವರ ಮುಂದೆ ಬರಹ ಹಿಡಿದು ನಿಂತರೆ, ಓದಿ ಒಂದಷ್ಟು ಮೆಚ್ಚುಗೆಯೋ ಅಥವಾ ಕರೆಕ್ಷನ್ನನ್ನೋ ಹೇಳುವ ಸ್ವಭಾವ. ಗುರುಗಳು ಎಂದರೂ ತಪಲ್ಲ. ಪುಸ್ತಕ ಮಾಡು ಎಂದು ಹುರಿದುಂಬಿಸಿದ್ದು ಅವರೇ.

ಜಯನಗರದ ಹುಡುಗಿಯ ಪ್ರತಿ ಲೇಖನದಲ್ಲಿಯೂ ಒಂದೊಂದು ಪಾತ್ರವಿದೆ, ಕಥೆಯಿದೆ, ನೆನಪಿದೆ. ಇವೆಲ್ಲವನ್ನ ಸಾವಣ್ಣ ಪ್ರಕಾಶನದ ಜಮೀಲ್ ಸರ್ ಪ್ರಕಟಿಸುತ್ತಿದ್ದಾರೆ. ಇವರಷ್ಟು ಸಮಯ ಪರಿಪಾಲನೆ, ಶಿಸ್ತು ಮತ್ತು ಪ್ರೀತಿಯನ್ನು ನಾನು ಎಲ್ಲಿಯೂ ನೋಡಿಲ್ಲ. ಅವರ ಆಫೀಸಿಗೆ ಹೋದಾಗ ನಾ ತಿಂದ ಪುಳಿಯೋಗರೆ, ಕುಡಿದ ಜ್ಯೂಸ್ ಮತ್ತು ಮಜ್ಜಿಗೆಗಳೆಷ್ಟೋ.

ಅಪ್ಪ, ಅಮ್ಮ, ಮಾಧುರ್ಯ, ಅಜ್ಜಿಯರು, ಅತ್ತೆ, ಮಾವ, ಅಕ್ಷರ, ಆದಿತ್ಯ, ಶ್ರವಣ್, ಪ್ರಸಾದ್, ರುತುಪರ್ಣ, ನವ್ಯ, ಸ್ಪರ್ಶ, ಮಾನಸ, ಶ್ರೀಧರ, ಸುಷ್ಮಾ, ಕೃಷ್ಣಕಾಂತ, ಕೆಜಿ ತಂಡ, ಇವರೆಲ್ಲಾ ಪುಸ್ತಕ ಬಿಡುಗಡೆಗೆ ಅವರ ಸಿಕ್ಕಾಪಟ್ಟೆ ಸಮಯ ಹಾಗೂ ಪ್ರೋತ್ಸಾಹವನ್ನ ನೀಡಿದ್ದಾರೆ. ಸೆಪ್ಟೆಂಬರ್ ಮೂವತ್ತಕ್ಕೆ ನಿಮ್ಮನ್ನೆಲ್ಲ ನೋಡಲು ಕಾಯುತ್ತಿದ್ದೇನೆ. ಪುಸ್ತಕ ಬಿಡುಗಡೆ ಸೆ.30ರ ಭಾನುವಾರ, ಜಯನಗರದ ಎನ್ ಕಲಾಕ್ಷೇತ್ರದಲ್ಲಿ, ಬೆಳಿಗ್ಗೆ 10.30ಕ್ಕೆ. ಪುಸ್ತಕ ಬಿಡುಗಡೆಗೆ ಬನ್ನಿ, ನಿಮ್ಮ ಹುಡುಗಿಯನ್ನ ಹರಸಿ.

# ಯುವಜನರ ಖಿನ್ನತೆ: ಹೊಸ ತಂತ್ರಜ್ಞಾನದ ಚಿಕಿತ್ಸೆ ಸಂಶೋಧನೆ

**ಬೆಂಗಳೂರು:** ಹದಿಹರೆಯದವರಲ್ಲಿ ಖಿನ್ನತೆಗೆ ಚಿಕಿತ್ಸೆ ನೀಡಲು ನ್ಯೂರೋಟೆಕ್ನಾಲಜಿಕಲ್ ವಿಧಾನಗಳ ಬಗ್ಗೆ ಹೊಸ ಸಂಶೋಧನೆಯಲ್ಲಿ ಆಶಾದಾಯಕ ಫಲಿತಾಂಶಗಳು ಕಂಡು ಬಂದಿದೆ.



ಸೈಮನ್ ಫ್ರೇಸರ್ ವಿಶ್ವವಿದ್ಯಾಲಯದ (SFU) ಪ್ರೊಫೆಸರ್ ಫರಾನಾಕ್ ಫರ್ಜಾನ್ ಈ ಅಧ್ಯಯನದ ನೇತೃತ್ವ ವಹಿಸಿದ್ದು, ಈ ಅಧ್ಯಯವನ್ನು ಜರ್ನಲ್ ಆಫ್ ಎಫೆಕ್ಟಿವ್ ಡಿಸಾರ್ಡರ್ಸ್ ವರದಿಗಳಲ್ಲಿ ಪ್ರಕಟಿಸಲಾಗಿದೆ. ಅಧ್ಯಯನ ಮಾಡಿದ 26 ಹದಿಹರೆಯದವರಲ್ಲಿ (16 – 24 ವರ್ಷ ವಯಸ್ಸಿನವರು) ಮೇಜರ್ ಡಿಪ್ರೆಸಿವ್ ಡಿಸಾರ್ಡರ್ (ಒಆಅ)ಗೆ ಚಿಕಿತ್ಸೆ ನೀಡಲು ಕಾಗ್ನಿಟಿವ್ ಎಕ್ಸರ್ಸೈಜ್ ನಂತರ ಮೆದುಳಿನ ಪ್ರಚೋದನೆ ಬಳಸುವ ವೈದ್ಯಕೀಯ ಮತ್ತು ನರಭೌತಶಾಸ್ತ್ರೀಯ ಪರಿಣಾಮಗಳು ಸೇರಿವೆ.ಥೀಟಾ-ಬರ್ಸ್ಟ್ ಸ್ಟಿಮ್ಯುಲೇಶನ್ (ಟಿಬಿಎಸ್), ಒಂದು ರೀತಿಯ ಮೆದುಳಿನ ಪ್ರಚೋದನೆಯಾಗಿದ್ದು, ವಯಸ್ಕರಲ್ಲಿ ಖಿನ್ನತೆಗೆ ಚಿಕಿತ್ಸೆ ನೀಡಲು ತ್ವರಿತ ಮತ್ತು ಪರಿಣಾಮಕಾರಿ ವಿಧಾನವಾಗಿದೆ ಎಂದು ಈಗಾಗಲೇ ಕಂಡುಬಂದಿದೆ. ಖಿಃಖ ಮೆದುಳಿನ ಪ್ರಿಫ್ರಂಟಲ್ ಕಾರ್ಟೆಕ್ಸ್ ಅನ್ನು ಉತ್ತೇಜಿಸಲು ಮ್ಯಾಗ್ನೆಟಿಕ್ ಪಲ್ಸ್ ಅಥವಾ ಬ್ಲಾಸ್ಟ್ ಬಳಸುತ್ತದೆ. ಮೆದುಳಿನ ಈ ಪ್ರದೇಶವು ತಾರ್ಕಿಕತೆ, ಸಮಸ್ಯೆ – ಪರಿಹಾರ, ಗ್ರಹಿಕೆ ಮತ್ತು ಉದ್ವೇಗ ನಿಯಂತ್ರಣದಂತಹ ಅರಿವಿನ ಹಲವು ಅಂಶಗಳಲ್ಲಿ ತೊಡಗಿಸಿಕೊಂಡಿದೆ. ಇದು ಒಆಅಯೊಂದಿಗೆ ಸಂಪರ್ಕ ಹೊಂದಿರುವ ಮೆದುಳಿನ ಪ್ರದೇಶವಾಗಿದೆ.

ಉದಾಹರಣೆಗೆ ಪ್ರಿಫ್ರಂಟಲ್ ಕಾರ್ಟೆಕ್ಸ್ ಅಪಸಾಮಾನ್ಯ ಕ್ರಿಯೆಯು ರೂಮಿನೇಷನ್ ಮತ್ತು ಆತ್ಮಹತ್ಯೆಯ ಕಲ್ಪನೆಯಂತಹ ರೋಗಲಕ್ಷಣಗಳೊಂದಿಗೆ ಸಂಬಂಧ ಹೊಂದಿದೆ. ಈ ಅಧ್ಯಯನದಲ್ಲಿ ಸಂಶೋಧಕರು ನಾಲ್ಕು ವಾರಗಳವರೆಗೆ ಭಾಗವಹಿಸಿದ ಯುವಜನರಲ್ಲಿ ಪ್ರಿಫ್ರಂಟಲ್ ಕಾರ್ಟೆಕ್ಸ್ ಅನ್ನು ಗುರಿಯಾಗಿಸಲು ಟಿಬಿಎಸ್ ಅನ್ನು ಬಳಸಿದರು.ಸಂಶೋಧಕರು ನಂತರ ಮೆದುಳಿನ ಚಟುವಟಿಕೆಯಲ್ಲಿನ ಬದಲಾವಣೆಗಳನ್ನು ಗಮನಿಸಲು ಮತ್ತು ಮೇಲ್ವಿಚಾರಣೆ ಮಾಡಲು ಎಲೆಕ್ಟ್ರೋ ಎನ್ಸೆಫಲೋಗ್ರಫಿಯೊಂದಿಗೆ ಸಂಯೋಜಿಸಲಾದ ಟ್ರಾನ್ಸ್ಕ್ರೇನಿಯಲ್ ಮ್ಯಾಗ್ನೆಟಿಕ್ ಸ್ಟಿಮುಲೇಶನ್ನ ಮಲ್ಟಿಮೋಡಲ್ ಮೆದುಳಿನ ಮ್ಯಾಪಿಂಗ್ ತಂತ್ರವನ್ನು ಬಳಸಲಾಗಿದೆ.

ನಾಲ್ಕು ವಾರಗಳ ಪ್ರಯೋಗದ ಕೊನೆಯಲ್ಲಿ, ಸಂಶೋಧಕರು ಚಿಕಿತ್ಸೆಯ ಪ್ರದೇಶಗಳಲ್ಲಿ ಮತ್ತು ಟಿಬಿಎಸ್ ನೊಂದಿಗೆ ನೇರವಾಗಿ ಪ್ರಚೋದಿಸಲ್ಪಡದ ಪ್ರದೇಶಗಳಲ್ಲಿ ಮೆದುಳಿನ ಚಟುವಟಿಕೆಯಲ್ಲಿ ಗಮನಾರ್ಹ ಬದಲಾವಣೆಗಳನ್ನು ಗಮನಿಸಿದ್ದಾರೆ. ಮೆದುಳಿನ ಚಟುವಟಿಕೆಯಲ್ಲಿನ ಬದಲಾವಣೆಗಳು ಖಿನ್ನತೆ ಮತ್ತು ರೂಮಿನೇಷನ್ ಸ್ಕೋರ್ ಗಳಲ್ಲಿನ ಇಳಿಕೆಯೊಂದಿಗೆ ಸಂಬಂಧ ಹೊಂದಿವೆ ಎಂದು ಅಧ್ಯನದಲ್ಲಿ ತಿಳಿದು ಬಂದಿದೆ.ಹೆಚ್ಚಿನ ಚಿಕಿತ್ಸಾ ಆಯ್ಕೆಗಳ ಅಗತ್ಯವಿದೆ: ಮೇಜರ್ ಡಿಪ್ರೆಸಿವ್ ಡಿಸಾರ್ಡರ್ ಸುಮಾರು 11 ಪ್ರತಿಶತದಷ್ಟು ಹದಿಹರೆಯದವರು ಮತ್ತು ಯುವಕರ ಮೇಲೆ ಪರಿಣಾಮ ಬೀರುತ್ತದೆ ಆದರೆ ಔಷಧ ಅಥವಾ ಮನೋಚಿಕಿತ್ಸೆಯಂತಹ ಅಸ್ತಿತ್ವದಲ್ಲಿರುವ ಚಿಕಿತ್ಸೆಗಳು ಸುಮಾರು 30 – 50 ಪ್ರತಿಶತ ಪ್ರಕರಣಗಳಲ್ಲಿ ರೋಗಲಕ್ಷಣಗಳನ್ನು ಗಮನಾರ್ಹವಾಗಿ ಸುಧಾರಿಸಲು ವಿಫಲವಾಗುತ್ತವೆ ಎಂದು ಎಫ್ಯುನ ಸ್ಕೂಲ್ ಆಫ್ ಮೆಕಾಟ್ರಾನಿಕ್ ಸಿಸ್ಟಮ್ಸ್ ಎಂಜಿನಿಯರಿಂಗ್ (ಎಂಎ) ನ ಪ್ರೊಫೆಸರ್ ಫರ್ಜಾನ್ ಹೇಳುತ್ತಾರೆ.

ಅವರು ಯೂತ್ ಅಡಿಕ್ಷನ್ ರಿಕವರಿ ಮತ್ತು ಮೆಂಟಲ್ ಹೆಲ್ತ್ ಟೆಕ್ನಾಲಜಿ ಇನ್ನೋವೇಶನ್ಸ್ ಫಾರ್ ಯೂತ್ ಅಡಿಕ್ಷನ್ ರಿಕವರಿ ಮತ್ತು ಮೆಂಟಲ್ ಹೆಲ್ತ್ ನ ಅಧ್ಯಕ್ಷರಾಗಿದ್ದಾರೆ ಮತ್ತು ಎಫ್ಯುನ ಹೊಸ ಇಬ್ರೇನ್ ಲ್ಯಾಬ್ನ ಮುಖ್ಯಸ್ಥರಾಗಿದ್ದಾರೆ. ಕೆಲವು ಔಷಧಗಳು ಯುವಕರಲ್ಲಿ ಆತ್ಮಹತ್ಯೆ ಆಲೋಚನೆಗಳು ಮತ್ತು ಅವರ ನಡವಳಿಕೆಗಳಲ್ಲಿ ಅಡ್ಡಪರಿಣಾಮಗಳೊಂದಿಗೆ ಸಂಬಂಧ ಹೊಂದಿವೆ ಎಂದು ಸಂಶೋಧಕರು ಗಮನಿಸಿದ್ದಾರೆ. ಇದರಿಂದ ಇತರೆ ಸುರಕ್ಷಿತ ಚಿಕಿತ್ಸಾ ಆಯ್ಕೆಗಳ ಹುಡುಕಾಟಕ್ಕೆ ಕಾರಣವಾಗಿದೆ.ಹಿಂದಿನ ಸಂಶೋಧನೆಗಳು ಆಧಾರ: ಹಿಂದಿನ ಸಂಶೋಧನೆಯು ಪ್ರಿಫ್ರಂಟಲ್ ಕಾರ್ಟೆಕ್ಸ್ ಮತ್ತು ಎಂಡಿಡಿಯ ಅಪಸಾಮಾನ್ಯ ಕ್ರಿಯೆಯ ನಡುವಿನ ಸಂಬಂಧವನ್ನು ತೋರಿಸಿದೆ. ಟಿಎಂಎಸ್-ಇಇಜಿ ಬ್ರೈನ್ ಮ್ಯಾಪಿಂಗ್ ತಂತ್ರಜ್ಞಾನವನ್ನು ಬಳಸಿಕೊಂಡು, ಎಂಡಿಡಿ ಹೊಂದಿರುವ ಯುವಕರಲ್ಲಿ ಪ್ರಿಫ್ರಂಟಲ್ ಕಾರ್ಟೆಕ್ಸ್ ಆರೋಗ್ಯಕರ ಯುವಕರಿಗೆ ಹೋಲಿಸಿದರೆ ಹೆಚ್ಚಿನ ಮೆದುಳಿನ ಚಟುವಟಿಕೆಯನ್ನು ಪ್ರದರ್ಶಿಸಿದೆ ಎಂದು ನಾವು ಕಂಡುಕೊಂಡಿದ್ದೇವೆ ಎಂದು ತಿಳಿಸಿದ್ದಾರೆ.

ಪ್ರಸ್ತುತ ಅಧ್ಯಯನದಲ್ಲಿ ನಾಲ್ಕು ವಾರಗಳ ಟಿಬಿಎಸ್ ಚಿಕಿತ್ಸೆಯು ಈ ಅತಿಯಾದ ಮೆದುಳಿನ ಚಟುವಟಿಕೆಯನ್ನು ಕಡಿಮೆ ಮಾಡುತ್ತದೆ, ಬಹುಶಃ ಆರೋಗ್ಯಕರ ಸ್ಥಿತಿಗೆ ಮರಳುವುದನ್ನು ಪ್ರತಿಬಿಂಬಿಸುತ್ತದೆ ಎಂದು ಪ್ರಸ್ತುತ ಅಧ್ಯಯನದಲ್ಲಿ ನೋಡುವುದು ತುಂಬಾ ಆಸಕ್ತಿದಾಯಕವಾಗಿದೆ ಎಂದು ಅಧ್ಯಯನದ ಮೊದಲ ಲೇಖಕ ಖಈಗ ವೈದ್ಯಕೀಯ ವಿದ್ಯಾರ್ಥಿ ಪ್ರಭ್ಜೋತ್ ಧಾಮಿ ಹೇಳುತ್ತಾರೆ.ಒಆಅ ಹೊಂದಿರುವ ಯುವಕರಲ್ಲಿ ಪ್ರಿಫ್ರಂಟಲ್ ಕಾರ್ಟೆಕ್ಸ್ ದೌರ್ಬಲ್ಯಗಳು ರೂಮಿನೇಷನ್ ಮತ್ತು ಆತ್ಮಹತ್ಯೆಯ ಆಲೋಚನೆ ಮತ್ತು ನಡವಳಿಕೆಯಂತಹ ರೋಗಲಕ್ಷಣಗಳಿಗೆ ಸಹ ಕೊಡುಗೆ ನೀಡಬಹುದು ಎಂದು ಫರ್ಜಾನ್ ಹೇಳುತ್ತಾರೆ. ಕಾರ್ಯನಿರ್ವಾಹಕ ಕಾರ್ಯನಿರ್ವಹಣೆಗೆ ಪ್ರಿಫ್ರಂಟಲ್ ಕಾರ್ಟೆಕ್ಸ್ ನಿರ್ಣಾಯಕವಾಗಿರುವುದರಿಂದ, ಈ ಪ್ರದೇಶದಲ್ಲಿನ ಅಪಸಾಮಾನ್ಯ ಕ್ರಿಯೆ ಅಥವಾ ಕೊರತೆಗಳು ಖಿನ್ನತೆಯ ರೋಗಲಕ್ಷಣಗಳ ಪ್ರಾರಂಭ ಮತ್ತು ನಿರ್ವಹಣೆಗೆ ಕಾರಣವಾಗಬಹುದು ಎಂದು ಅಭಿಪ್ರಾಯಪಟ್ಟಿದ್ದಾರೆ.

ಪ್ರಿಫ್ರಂಟಲ್ ಕಾರ್ಟೆಕ್ಸ್ ಗೆ ಗುರಿಯಾಗಿರುವ ಟಿಬಿಎಸ್ ನ ಸಂಯೋಜನೆಯಂತಹ ನ್ಯೂರೋಟೆಕ್ನಾಲಜಿಕಲ್ ಚಿಕಿತ್ಸೆಗಳು, ನಂತರ ಈ ಮೆದುಳಿನ ಪ್ರದೇಶವನ್ನು ಸಹ ತೊಡಗಿಸಿಕೊಳ್ಳಬಹುದಾದ ಅರಿವಿನ ವ್ಯಾಯಾಮ, ರೋಗಲಕ್ಷಣಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ನಿವಾರಿಸಲು ಯುವ ಒಆಅಯಲ್ಲಿ ಪ್ರಿಫ್ರಂಟಲ್ ಕಾರ್ಟೆಕ್ಸ್ ಮೇಲೆ ಪರಿಣಾಮವನ್ನು ಉತ್ತಮಗೊಳಿಸುವ ಸಾಮರ್ಥ್ಯವನ್ನು ಹೊಂದಿವೆ ಎಂದು ಸಂಶೋಧಕರು ಹೇಳಿದ್ದಾರೆ.

# ಅಗತ್ಯಕ್ಕಿಂತ ಹೆಚ್ಚು ನೀರು ಕುಡಿಯುವುದು ಆರೋಗ್ಯಕ್ಕೆ ಅಪಾಯ!



**ಬೆಂಗಳೂರು:** ಆರೋಗ್ಯವಂತ ವ್ಯಕ್ತಿಗೆ ದಿನವಿಡೀ ಸರಾಸರಿ 3 ರಿಂದ 4 ಲೀಟರ್ ನೀರು ಕುಡಿಯಬೇಕೆಂದು ವೈದ್ಯರು ಹೇಳುತ್ತಾರೆ. ಈ ನೀರಿನ ಅನ್ನು ಒಂದೇ ಬಾರಿಗೆ ಕುಡಿಯುವ ಬದಲು ಸಿಪ್ ಮೂಲಕ ಕುಡಿಯುವುದು ಹೆಚ್ಚು ಪ್ರಯೋಜನಕಾರಿ. ಆದರೆ ಕೆಲವರು ದಿನವಿಡೀ ಅಗತ್ಯಕ್ಕಿಂತ ಹೆಚ್ಚು ನೀರನ್ನು ಒಟ್ಟಿಗೆ ಕುಡಿಯುತ್ತಾರೆ. ಇದು ಆರೋಗ್ಯಕ್ಕೆ ತುಂಬಾ ಅಪಾಯಕಾರಿ.

ಅಗತ್ಯಕ್ಕಿಂತ ಹೆಚ್ಚು ನೀರು ಕುಡಿದರೆ ನಿಮ್ಮ ಜೀರ್ಣಕಾರಿ ಶಕ್ತಿಯ ಮೇಲೆ ತುಂಬಾ ಪರಿಣಾಮ ಬೀರುತ್ತದೆ. ಅಲ್ಲದೆ, ಇದು ನಿಮ್ಮ ಮೂತ್ರಪಿಂಡದ ಸಮಸ್ಯೆಗಳನ್ನು ಉಂಟುಮಾಡುತ್ತದೆ. ಅಧಿಕ ನೀರು ಸೇವನೆ ಆರೋಗ್ಯಕ್ಕೆ ಹೇಗೆ ಅಪಾಯಕಾರಿ ಎಂಬುದನ್ನು ಇಲ್ಲಿ ತಿಳಿಯಿರಿ.

ಹೆಚ್ಚು ನೀರು ಕುಡಿಯುವ ಅನಾನುಕೂಲಗಳು

1. ಹೆಚ್ಚು ನೀರು ಕುಡಿಯುವುದರಿಂದ ವಾಂತಿ ಮತ್ತು ತಲೆನೋವಿನಂತಹ ಸಮಸ್ಯೆಗಳು ಉಂಟಾಗುತ್ತವೆ. ಇದು ದೇಹದಲ್ಲಿ ಉರಿಯೂತವನ್ನು ಉತ್ತೇಜಿಸುತ್ತದೆ. ಆರೋಗ್ಯ ತಜ್ಞರ ಪ್ರಕಾರ, ಅಗತ್ಯಕ್ಕಿಂತ ಹೆಚ್ಚು ನೀರು ಕುಡಿಯುವುದರಿಂದ ದೇಹದಲ್ಲಿನ ಸೋಡಿಯಂ ಮತ್ತು ಎಲೆಕ್ಟ್ರೋಲೈಟ್‌ಗಳ ಪ್ರಮಾಣ ಕಡಿಮೆಯಾಗುತ್ತದೆ. ಈ ಕಾರಣದಿಂದಾಗಿ, ಮೂತ್ರಪಿಂಡದ ಕಾರ್ಯನಿರ್ವಹಣೆಯ ಮೇಲೆ ಕೆಟ್ಟ ಪರಿಣಾಮವಿದೆ. ಹೆಚ್ಚಿನ ಪ್ರಮಾಣದ ನೀರಿನಿಂದ ಉಂಟಾಗುವ ಊತವು ದೇಹದ ಅಂಗಾಂಶಗಳನ್ನು ಹಾನಿಗೊಳಿಸುತ್ತದೆ.

2. ಹೆಚ್ಚು ನೀರು ಕುಡಿಯುವುದರಿಂದ ಪದೇ ಪದೇ ಮೂತ್ರ ವಿಸರ್ಜನೆಯಾಗುತ್ತದೆ. ಈ ಕಾರಣದಿಂದಾಗಿ, ಅತಿಸಾರದ ಅಪಾಯವೂ ಹೆಚ್ಚಾಗುತ್ತದೆ. ಹಾಗೆ, ದೇಹದಲ್ಲಿ ಆಯಾಸ ಮತ್ತು ಹೊಟ್ಟೆಯಲ್ಲಿ ತೀವ್ರವಾದ ನೋವು ಇರುತ್ತದೆ. ನಿರ್ಜಲೀಕರಣವು ದೇಹಕ್ಕೆ ಹೇಗೆ ಅಪಾಯಕಾರಿ, ಅದೇ ರೀತಿ ಅತಿಯಾದ ಜಲಸಂಚಯನವು ದೇಹಕ್ಕೆ ಸಮಸ್ಯೆಯಾಗಬಹುದು.

3. ಯುಎಸ್ ನ್ಯಾಷನಲ್ ಅಕಾಡೆಮಿ ಆಫ್ ಸೈನ್ಸಸ್ನ ಸಂಶೋಧನೆಯ ಪ್ರಕಾರ, 20 ಕೆಜಿ ತೂಕಕ್ಕೆ ಒಂದು ಲೀಟರ್ ನೀರನ್ನು ಸೇವಿಸಬೇಕು. ಅಂದರೆ, ಯಾರಾದರೂ 20 ಕೆಜಿ ಇದ್ದರೆ ಅವರು 1 ಲೀಟರ್ ನೀರು ಕುಡಿಯಬೇಕು, ಯಾರಾದರೂ 40 ಕೆಜಿ ಇದ್ದರೆ ಅವರು 2 ಲೀಟರ್ ಕುಡಿಯಬೇಕು ಮತ್ತು ಯಾರಾದರೂ 60 ಕೆಜಿ ಇದ್ದರೆ ಅವರು 3 ಲೀಟರ್ ನೀರು ಕುಡಿಯಬೇಕು. ಗರ್ಭಿಣಿ ಮಹಿಳೆ ಹೆಚ್ಚು ನೀರು ಕುಡಿಯಬೇಕು. ಜ್ವರ ಮತ್ತು ವಾಂತಿಯಲ್ಲಿಯೂ ಹೆಚ್ಚು ನೀರು ಕುಡಿಯಬೇಕು.

# ನಿಂಬೆ ಎಲೆಗಳು ಆರೋಗ್ಯಕ್ಕೆ ಉಪಯುಕ್ತ

**ಬೆಂಗಳೂರು:** ನಿಂಬೆಹಣ್ಣಿನ ಬಳಕೆಯಿಂದ ಅನೇಕ ಸಮಸ್ಯೆಗಳನ್ನು ನಿವಾರಿಸಬಹುದು. ಆದರೆ ನಿಂಬೆ ಎಲೆಗಳು ಆರೋಗ್ಯಕ್ಕೆ ತುಂಬಾ ಉಪಯುಕ್ತವಾಗಿದೆ. ನಿಂಬೆ ಎಲೆಗಳನ್ನು ಕುದಿಸಿ ಕುಡಿದರೆ ಹಲವಾರು ಸಮಸ್ಯೆಗಳನ್ನು ನಿವಾರಿಸಬಹುದು. ಅಂತಹ ಪರಿಸ್ಥಿತಿಯಲ್ಲಿ, ಜನರು ನಿಂಬೆ ಎಲೆಗಳ ನೀರಿನ ಪ್ರಯೋಜನಗಳ ಬಗ್ಗೆ ತಿಳಿದುಕೊಳ್ಳುವುದು ಬಹಳ ಮುಖ್ಯ. ಈ ಲೇಖನದ ಮೂಲಕ ನಿಂಬೆ ಎಲೆಗಳನ್ನು ಕುದಿಸಿ ಕುಡಿಯುವುದರಿಂದ ಆಗುವ ಆರೋಗ್ಯಕಾರಿ ಲಾಭಗಳೇನು ಎಂಬುದನ್ನು ತಿಳಿಸುತ್ತೇವೆ.



**ನಿಂಬೆ ಎಲೆಗಳನ್ನು ಹೇಗೆ ಬಳಸುವುದು?**


**ನೀವು 10 ರಿಂದ 12 ಎಲೆಗಳನ್ನು ಒಂದು ಲೋಟ ನೀರಿನಲ್ಲಿ ಕುದಿಸಿ ಮತ್ತು ಒಂದು ಲೋಟ ನೀರು ಅರ್ಧ ಗ್ಲಾಸ್ ಉಳಿದಿರುವಾಗ, ಅದನ್ನು ಫಿಲ್ಟರ್ ಮಾಡಿ ಮತ್ತು ಅದರಲ್ಲಿ ಜೇನುತುಪ್ಪವನ್ನು ಮಿಶ್ರಣ ಮಾಡಿ. ನಂತರ ಕುಡಿಯಿರಿ.**

ನಿಂಬೆ ಎಲೆಗಳನ್ನು ಕುದಿಸಿ ಕುಡಿಯುವುದರಿಂದ ಆಗುವ ಪ್ರಯೋಜನಗಳು :

ನಿಂಬೆ ಎಲೆಯ ನೀರನ್ನು ಕುಡಿದರೆ ತಲೆನೋವಿನಿಂದ ಪರಿಹಾರ ಸಿಗುತ್ತದೆ. ಆಂಟಿಆಕ್ಸಿಡೆಂಟ್ ಅಂಶಗಳು ನಿಂಬೆ ಎಲೆಗಳಲ್ಲಿ ಕಂಡುಬರುತ್ತವೆ. ಇದು ಒತ್ತಡ ಮತ್ತು ಮೈಗ್ರೇನ್ ಅನ್ನು ನಿವಾರಿಸಲು ಉಪಯುಕ್ತವಾಗಿದೆ.ನಿಮಗೆ ನಿದ್ರಾಹೀನತೆಯ ಸಮಸ್ಯೆ ಇದ್ದರೆ, ನಿಂಬೆ ಎಲೆಗಳನ್ನು ಬಳಸಿ ಈ ಸಮಸ್ಯೆಯನ್ನು ಹೋಗಲಾಡಿಸಬಹುದು. ನಿದ್ರೆಯನ್ನು ಸುಧಾರಿಸುವ ಗುಣಲಕ್ಷಣಗಳು ನಿಂಬೆಯಲ್ಲಿ ಕಂಡುಬರುತ್ತವೆ. ಅಂತಹ ಪರಿಸ್ಥಿತಿಯಲ್ಲಿ, ನೀವು ಉತ್ತಮ ನಿದ್ರೆ ಪಡೆಯಲು ಬಯಸಿದರೆ, ನಿಂಬು ಎಲೆಗಳನ್ನು ಬಳಸಬಹುದು.

ಮೂತ್ರಪಿಂಡದ ಕಲ್ಲಿನ ಸಮಸ್ಯೆಯನ್ನು ತೊಡೆದುಹಾಕಲು ನಿಂಬೆ ಎಲೆಗಳ ನೀರು ನಿಮಗೆ ತುಂಬಾ ಉಪಯುಕ್ತವಾಗಿದೆ. ಈ ಸಾರದಲ್ಲಿ ಸಿಟ್ರಿಕ್ ಆಮ್ಲವಿದೆ. ಇದು ಮೂತ್ರಪಿಂಡದಲ್ಲಿ ಕಲ್ಲುಗಳ ರಚನೆಯನ್ನು ತಡೆಯುತ್ತದೆ. ಅಲ್ಲದೆ, ನೀವು ಈಗಾಗಲೇ ಮೂತ್ರಪಿಂಡದ ಕಲ್ಲುಗಳನ್ನು ಹೊಂದಿದ್ದರೆ, ಅದರ ಗಾತ್ರವನ್ನು ಹೆಚ್ಚಿಸದಂತೆ ತಡೆಯಲು ನಿಂಬೆ ಎಲೆಗಳು ತುಂಬಾ ಉಪಯುಕ್ತವಾಗಿವೆ.

# ಸದಾ ಯಂಗ್ ಹಾಗೂ ಹೆಲ್ದಿಯಾಗಿರಲು ಯಾವ ವಯಸ್ಸಿಯಲ್ಲಿ ಏನು ಸೇವನೆ ಮಾಡಬೇಕು?



**ಬೆಂಗಳೂರು:** ಯಂಗ್ ಮತ್ತು ಆರೋಗ್ಯದಿಂದ ಕೂಡಿರುವುದು ಯಾರಿಗೆ ತಾನೇ ಇಷ್ಟವಾಗುವುದಿಲ್ಲ ಹೇಳಿ. ಜೀವನದ ಪ್ರತಿಯೊಂದು ಹಂತದ ಕಾಯಿಲೆಗಳು ಮತ್ತು ತೊಂದರೆಗಳಿಂದ ದೂರವಿರಲು ಪ್ರತಿಯೊಬ್ಬರೂ ಬಯಸುತ್ತಾರೆ. ಇದಕ್ಕಾಗಿ, ತಜ್ಞರು ಸಮತೋಲಿತ ಆಹಾರ, ಉತ್ತಮ ಜೀವನಶೈಲಿ ಮತ್ತು ವ್ಯಾಯಾಮವನ್ನು ಶಿಫಾರಸು ಮಾಡುತ್ತಾರೆ. ಆದರೆ ಮೊದಲು ನೀವು ಜೀವನದ ಯಾವ ಹಂತದಲ್ಲಿ ಏನನ್ನು ಸೇವಿಸಬೇಕು ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ಟೆಕ್ಸಾಸ್ ವಿಶ್ವವಿದ್ಯಾಲಯದ ತಜ್ಞರ ಪ್ರಕಾರ, ನೀವು ಬುದ್ಧಿಮಾಂದ್ಯತೆಯನ್ನು ತಪ್ಪಿಸಲು ಬಯಸುತ್ತಿದ್ದರೆ, ನೀವು 40-60 ವರ್ಷ ವಯಸ್ಸಿನಲ್ಲಿ ಎಣ್ಣೆಯುಕ್ತ ಮೀನುಗಳನ್ನು ಸೇವಿಸಬೇಕು ಎನ್ನಲಾಗಿದೆ.

ಯಾವ ವಯಸ್ಸಿನಲ್ಲಿ ಏನನ್ನು ಸೇವಿಸಬೇಕು?

ನೀವು 20 ವರ್ಷದವರಾಗಿದ್ದಾಗ ಏನು ಸೇವಿಸಬೇಕು

ಈ ವಯಸ್ಸಿನಲ್ಲಿ ನಿಮಗೆ ಸಾಕಷ್ಟು ಶಕ್ತಿ ಬೇಕು. ಆದ್ದರಿಂದ, ನೀವು ಆಹಾರದಲ್ಲಿ ಕಬ್ಬಿಣಯುಕ್ತ ಆಹಾರಗಳನ್ನು ಸೇರಿಸಬೇಕು. ಇತ್ತೀಚಿನ ದಿನಗಳಲ್ಲಿ ಯುವಕರಲ್ಲಿ ಕಬ್ಬಿಣದ ಕೊರತೆ ಹೆಚ್ಚಾಗಿ ಕಂಡು ಬರುತ್ತಿದೆ. ಇದರಿಂದಾಗಿ ಆಯಾಸ, ಒತ್ತಡ, ಏಕಾಗ್ರತೆಯಲ್ಲಿ ತೊಂದರೆ ಮುಂತಾದ ಸಮಸ್ಯೆಗಳು ಗೋಚರಿಸುತ್ತವೆ. ಇದಕ್ಕಾಗಿ, ನೀವು ಮೊಟ್ಟೆ, ಉಪಹಾರ ಧಾನ್ಯಗಳು, ಮೀನು, ಮ್ಯಾಕೆರೆಲ್ ಮೀನು, ಬೇಯಿಸಿದ ಬೀನ್ಸ್, ಒಣ ವಾಲ್ನಟ್ಸ್ ಮತ್ತು ಬಟಾಣಿಗಳನ್ನು ಸೇವಿಸಬೇಕು. ಇದಲ್ಲದೇ ವಾರದಲ್ಲಿ ಮೂರು ಬಾರಿ ಮೊಸರು ಸೇವಿಸಿ ಮತ್ತು ಡ್ರೈ ಫ್ರೂಟ್ಸ್ ತಿನ್ನುವುದರಿಂದ ರೋಗನಿರೋಧಕ ಶಕ್ತಿಯೂ ಕೂಡ ಹೆಚ್ಚುತ್ತದೆ.

30 ನೇ ವಯಸ್ಸಿನಲ್ಲಿ ಏನು ಸೇವಿಸಬೇಕು?

ಜೀವನದ ಈ ಹಂತದಲ್ಲಿ, ಹೆಚ್ಚುತ್ತಿರುವ ವಯಸ್ಸಿನ ಪರಿಣಾಮವು ಗೋಚರಿಸಲು ಆರಂಭಿಸುತ್ತದೆ. ಹೀಗಾಗಿ ಬಾದಾಮಿಯನ್ನು ವಾರಕ್ಕೆ ಮೂರು ಬಾರಿ ಸೇವಿಸಬೇಕು. ಇದಲ್ಲದೆ, ನಟ್ಸ್, ಬೀಜಗಳು, ಧಾನ್ಯಗಳು, ಆವಕಾಡೊ ಮತ್ತು ಪಾಲಕವನ್ನು ಸೇವಿಸಿ, ಇವು ನಿಮಗೆ ವಿಟಮಿನ್ ಇ ನೀಡುತ್ತವೆ. ಇದಲ್ಲದೆ, ನೀವು ವಾರಕ್ಕೊಮ್ಮೆ ಕೆಫೀನ್ ಹೊಂದಿರುವ ಚಹಾ ಅಥವಾ ಕಾಫಿ ಕುಡಿಯುವುದನ್ನು ತಪ್ಪಿಸಿ. ನೀವು ಗಿಡಮೂಲಿಕೆ ಚಹಾ ಅಥವಾ ಯಾವುದೇ ಆರೋಗ್ಯಕರ ಪರ್ಯಾಯವನ್ನು ಆಯ್ಕೆ ಮಾಡಬಹುದು.

40 ನೇ ವಯಸ್ಸಿನಲ್ಲಿ ಏನನ್ನು ಸೇವಿಸಬೇಕು?

ಈ ವಯಸ್ಸಿನಲ್ಲಿ, ನೀವು ನಿಧಾನವಾಗಿ ಬಿಡುಗಡೆಯಾಗುವ ಕಾರ್ಬೋಹೈಡ್ರೇಟ್ಗಳನ್ನು ಸೇವಿಸಬೇಕು. ಈ ಕಾರ್ಬೋಹೈಡ್ರೇಟ್, ಫೈಬರ್ ಮತ್ತು ಪಿಷ್ಟ ತರಕಾರಿಗಳು ಹಾಗೂ ವಿವಿಧ ಹಣ್ಣುಗಳಲ್ಲಿ ಕಂಡುಬರುತ್ತದೆ. ಇವು ಜೀರ್ಣವಾಗಲು ಸಹ ಬಹಳ ಸಮಯ ತೆಗೆದುಕೊಳ್ಳುತ್ತದೆ. ಇವು ದೀರ್ಘ ಕಾಲದವರೆಗೆ ನಿಮಗೆ ಹೊಟ್ಟೆ ತುಂಬಿದ ಅನುಭವ ನೀಡುತ್ತವೆ. ಇವು ರಕ್ತದಲ್ಲಿನ ಸಕ್ಕರೆಯ ಮಟ್ಟವನ್ನು ಸಹ ನಿಯಂತ್ರಣದಲ್ಲಿಡುತ್ತವೆ.

50 ನೇ ವಯಸ್ಸಿನಲ್ಲಿ ಏನು ಸೇವಿಸಬೇಕು?

ಈ ವಯಸ್ಸಿನಲ್ಲಿ ಸ್ವಯಂ ಕಾಳಜಿ ತುಂಬಾ ಅಗತ್ಯ. ಆದ್ದರಿಂದ, ವಯಸ್ಸಿನ ಪರಿಣಾಮವನ್ನು ತಡೆಗಟ್ಟಲು, ಕ್ಯಾರೆಟ್, ಕೆಂಪು ಮೆಣಸಿನಕಾಯಿಗಳು, ಪಾಲಕ ಮತ್ತು ಕೋಸುಗಡ್ಡೆಗಳನ್ನು ತಿನ್ನಬೇಕು. ಇದಲ್ಲದೆ, ಬೆರಿಹಣ್ಣುಗಳನ್ನು ತಿನ್ನಿರಿ. ಸಾಲ್ಮನ್ ಮೀನು, ಸಾರ್ಡೀನ್‌ಗಳ ಮೂಲಕ ನೀವು ಹೃದಯ ಕಾಯಿಲೆಗಳು ಮತ್ತು ರಕ್ತದೊತ್ತಡವನ್ನು ನಿಯಂತ್ರಿಸಬಹುದು.

60 ನೇ ವಯಸ್ಸಿನಲ್ಲಿ ಏನು ಸೇವಿಸಬೇಕು?


ಜೀವನದ ಈ ಹಂತದಲ್ಲಿ, ನೀವು ಪ್ರತಿದಿನ ಪ್ರೋಟೀನ್ ಭರಿತ ಆಹಾರವನ್ನು ಸೇವಿಸಬೇಕು. ಮಾಂಸ-ಮೀನು, ನಟ್ಸ್, ಬೀಜಗಳಲ್ಲಿ ಉತ್ತಮ ಪ್ರಮಾಣದ ಪ್ರೋಟೀನ್ ಗಳಿರುತ್ತವೆ. ಇದು ನಿಮ್ಮ ಸ್ನಾಯುಗಳನ್ನು ಸಹ ಆರೋಗ್ಯಕರವಾಗಿರಿಸುತ್ತದೆ.

70 ನೇ ವಯಸ್ಸಿನಲ್ಲಿ ಏನು ಸೇವಿಸಬೇಕು?

ಮೂಳೆಗಳಲ್ಲಿ ಕ್ಯಾಲ್ಸಿಯಂ ಕೊರತೆಯ ಅಭಾವ ಎದುರಾಗಿರುತ್ತದೆ, ಆದ್ದರಿಂದ ವಿಟಮಿನ್ ಡಿ ಹೊಂದಿರುವ ವಸ್ತುಗಳನ್ನು ಸೇವಿಸಿ. ತೆಂಗಿನ ನೀರು, ಹಣ್ಣು ಮತ್ತು ತರಕಾರಿ ರಸಗಳು ಹಾಗೂ ಸಾಕಷ್ಟು ನೀರು ಕುಡಿಯುವುದು ಸಹ ಈ ಹಂತದಲ್ಲಿ ಪ್ರಯೋಜನಕಾರಿಯಾಗಿದೆ. ಈ ವಸ್ತುಗಳ ಕೊರತೆಯಿದ್ದರೆ, ಆಯಾಸ, ಗೊಂದಲ ಮತ್ತು ಒತ್ತಡದ ಸಮಸ್ಯೆ ಹೆಚ್ಚಾಗುತ್ತವೆ. ಇದರ ಹೊರತಾಗಿ ಪೋಷಕಾಂಶಗಳಿರುವ ದ್ರವ ಆಹಾರವನ್ನು ಸೇವಿಸಬೇಕು.

# ಕಿಬ್ಬೊಟ್ಟೆಯ ನೋವಿಗೆ ಚಿಕಿತ್ಸೆ ನೀಡುವುದು ಅವಶ್ಯಕ

**ಬೆಂಗಳೂರು:** ಹೊಟ್ಟೆ ನೋವು ಒಂದು ಸಾಮಾನ್ಯ ಸಮಸ್ಯೆಯಾಗಿದೆ. ಆದರೆ ಈ ಸಮಸ್ಯೆಯು ನಿಮಗೆ ಪದೇ ಪದೇ ಪೀಡಿಸುತ್ತಿದ್ದರೆ, ಅದನ್ನು ಅಪ್ಪಿತಪ್ಪಿಯೂ ಕೂಡ ನಿರ್ಲಕ್ಷಿಸಬೇಡಿ. ಇಂತಹ ಪರಿಸ್ಥಿತಿಯಲ್ಲಿ, ಕಿಬ್ಬೊಟ್ಟೆಯ ನೋವಿಗೆ ಚಿಕಿತ್ಸೆ ನೀಡುವುದು ಅವಶ್ಯಕ. ಕಿಬ್ಬೊಟ್ಟೆಯ ನೋವು ಯಾವುದೇ ವಯಸ್ಸಿನಲ್ಲಿ ಮತ್ತು ಯಾವುದೇ ಸಮಯದಲ್ಲಿ ಸಂಭವಿಸುವ ಸಾಧ್ಯತೆ ಇದೆ. ಆದರೆ ಕೆಲವರಿಗೆ ಹೊಟ್ಟೆಯ ಮಧ್ಯದಲ್ಲಿ ಯಾವಾಗಲೂ ಸೌಮ್ಯವಾದ ನೋವು ಕಾಣಿಸಿಕೊಳ್ಳುತ್ತದೆ, ಆದ್ದರಿಂದ ತಪ್ಪಾಗಿಯೂ ಅದನ್ನು ನಿರ್ಲಕ್ಷಿಸಬೇಡಿ, ಹೊಟ್ಟೆಯ ಮಧ್ಯದಲ್ಲಿ ನೋವಿಗೆ ಕಾರಣಗಳು ಯಾವುವು ಎಂಬುದನ್ನು ತಿಳಿದುಕೊಳ್ಳೋಣ ಬನ್ನಿ.



ಹೊಟ್ಟೆಯ ಮಧ್ಯ ಭಾಗದಲ್ಲಿನ ನೋವಿನ ಕಾರಣಗಳು

ಅಜೀರ್ಣ ಸಮಸ್ಯೆ

ಹೊಟ್ಟೆಯ ಮಧ್ಯದಲ್ಲಿ ಸೌಮ್ಯವಾದ ನೋವು ಕಾಣಿಸಿಕೊಳ್ಳುವುದು ಒಂದು ಅಜೀರ್ಣದ ಸಮಸ್ಯೆಯೂ ಆಗಿದೆ. ಆಹಾರ ಸರಿಯಾಗಿ ಜೀರ್ಣವಾಗದ ಕಾರಣ, ಹೊಟ್ಟೆಯ ಮೇಲ್ಭಾಗದಲ್ಲಿ ಸಾಕಷ್ಟು ಅಸ್ವಸ್ಥತೆ ಇರುತ್ತದೆ. ಈ ಕಾರಣದಿಂದಾಗಿ ನೀವು ಹೊಟ್ಟೆ ತುಂಬಿದ ಭಾವನೆ ಅನುಭವಿಸುವಿರಿ. ಹೀಗಾಗಿ ಹೊಟ್ಟೆ ನೋವು ಕಾಣಿಸಿಕೊಂಡರೆ ಅದನ್ನು ಎಂದಿಗೂ ಕೂಡ ನಿರ್ಲಕ್ಷಿಸಬೇಡಿ.

ಪಿತ್ತಕೋಶದ ಕಲ್ಲುಗಳು

ಪಿತ್ತಕೋಶದ ಕಲ್ಲು ಇದ್ದಾಗಲೂ ಹೊಟ್ಟೆಯ ಮಧ್ಯದಲ್ಲಿ ನೋವು ಉಂಟಾಗುತ್ತದೆ. ಏಕೆಂದರೆ ಪಿತ್ತಕೋಶದಲ್ಲಿ ಕಲ್ಲು ಇದ್ದಾಗ ಹೊಟ್ಟೆಯಲ್ಲಿ ಹೆಚ್ಚಿನ ಪ್ರಮಾಣದ ಗ್ಯಾಸ್ ಉತ್ಪತ್ತಿಯಾಗುತ್ತದೆ, ಇದರಿಂದ ಹೊಟ್ಟೆಯ ಮೇಲ್ಭಾಗದಲ್ಲಿ ನೋವು ಕಾಣಿಸಿಕೊಳ್ಳಬಹುದು. ಆದ್ದರಿಂದ, ಹೊಟ್ಟೆಯಲ್ಲಿ ನೋವು ಇದ್ದರೆ, ಅದನ್ನು ನಿರ್ಲಕ್ಷಿಸಬೇಡಿ.

ಮೂತ್ರನಾಳದ ಹರಳುಗಳು

ಮೂತ್ರನಾಳದ ಸೋಂಕಿನಿಂದ ಬಳಲುತ್ತಿರುವ ಜನರು ಸಾಮಾನ್ಯವಾಗಿ ಹೊಟ್ಟೆಯ ಮಧ್ಯಭಾಗದಲ್ಲಿ ನೋವು ಅನುಭವಿಸುವ ಸಾಧ್ಯತೆ ಇದೆ. ಮಹಿಳೆಯರಲ್ಲಿ ಈ ಸಮಸ್ಯೆ ಹೆಚ್ಚಾಗಿ ಕಂಡು ಬರುತ್ತದೆ. ಇದರಿಂದ ಹೊಟ್ಟೆ ನೋವು ಮಾತ್ರವಲ್ಲ, ಜ್ವರವೂ ಬರಬಹುದು. ಹೀಗಾಗಿ ಅದನ್ನು ನಿರ್ಲಕ್ಷಿಸಬೇಡಿ.

ಮೇದೋಜ್ಜೀರಕ ಗ್ರಂಥಿಯಲ್ಲಿ ಸಮಸ್ಯೆ

ಮೇದೋಜ್ಜೀರಕ ಗ್ರಂಥಿಯು ನಮ್ಮ ಹೊಟ್ಟೆಯಲ್ಲಿರುವ ಒಂದು ಪ್ರಮುಖ ಗ್ರಂಥಿಯಾಗಿದೆ. ಇದು ಗ್ಲೂಕೋಸ್ ಅನ್ನು ಉತ್ಪಾದಿಸಲು ನಮಗೆ ಸಹಾಯ ಮಾಡುತ್ತದೆ. ಇದರಲ್ಲಿ ಯಾವುದೇ ರೀತಿಯ ಸಮಸ್ಯೆ ಇದ್ದರೆ, ನೀವು ಹೊಟ್ಟೆ ನೋವು ಅನುಭವಿಸಬಹುದು. ಈ ಕಾರಣದಿಂದಾಗಿ, ಹೊಟ್ಟೆಯ ಮಧ್ಯ ಭಾಗದಲ್ಲಿ ನೋವು ಇರುತ್ತದೆ. ಆದ್ದರಿಂದ ನಿರ್ಲಕ್ಷಿಸಬೇಡಿ.

# ಚಿಕನ್ ಜೊತೆ ಈ ವಸ್ತುಗಳನ್ನು ತಪ್ಪಿಯೂ ತಿನ್ನಬೇಡಿ!

**ಬೆಂಗಳೂರು:** ನೀವು ಚಿಕನ್ ತಿನ್ನಲು ಬಯಸಿದರೆ, ಕೋಳಿಯಿಂದ ಮಾಡಿದ ಅನೇಕ ಭಕ್ಷ್ಯಗಳಿವೆ. ಆದರೆ ಚಿಕನ್ ಜೊತೆ ಈ ವಸ್ತುಗಳನ್ನು ತಿನ್ನಬಾರದು. ಏಕೆಂದರೆ ಕೆಲವು ಕೋಳಿಗಳೊಂದಿಗೆ ಇಂತಹ ವಸ್ತುಗಳನ್ನು ತಿನ್ನುವುದು ನಿಮ್ಮ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ಇದು ದೇಹದಲ್ಲಿ ಅಲರ್ಜಿಯನ್ನು ಉಂಟುಮಾಡಬಹುದು. ಇದು ಗಂಭೀರ ಕಾಯಿಲೆಗಳಿಗೆ ಕಾರಣವಾಗಬಹುದು. ಚಿಕನ್ ಜೊತೆ ಯಾವ ಪದಾರ್ಥಗಳನ್ನು ಸೇವಿಸಿದರೆ ಹಾನಿಕಾರಕ ಎಂದು ತಿಳಿಯೋಣ.

ಹಾಲಿನೊಂದಿಗೆ ಚಿಕನ್ : ಹಾಲಿನೊಂದಿಗೆ ಚಿಕನ್ ತಿನ್ನುವುದು ವಿಷವಿದ್ದಂತೆ. ಹಾಲು ಮತ್ತು ಚಿಕನ್ ಒಟ್ಟಿಗೆ ದೇಹದ ಮೇಲೆ ಕೆಟ್ಟ ಪರಿಣಾಮ ಬೀರುತ್ತವೆ. ಈ ಕಾರಣದಿಂದಾಗಿ, ದೇಹದಲ್ಲಿ ಅಲರ್ಜಿಗಳು ಸಂಭವಿಸಬಹುದು. ಹಾಲು ಮತ್ತು ಚಿಕನ್ ಅನ್ನು ಒಟ್ಟಿಗೆ ತಿನ್ನುವುದು ಚರ್ಮದ ಸಮಸ್ಯೆಗಳಿಗೆ ಕಾರಣವಾಗಬಹುದು. ಚಿಕನ್ ಜೊತೆ ಹಾಲು ತಿನ್ನುವುದರಿಂದ ಹಲವರಿಗೆ ದದ್ದು, ಬಿಳಿ ಚುಕ್ಕೆ, ತುರಿಕೆ ಸಮಸ್ಯೆ ಇರುತ್ತದೆ.

ಚಿಕನ್ ಮತ್ತು ಮೊಸರು : ಅನೇಕರು ಎಲ್ಲದಕ್ಕೂ ಮೊಸರು ಸೇರಿಸಿ ತಿನ್ನುತ್ತಾರೆ. ಮೊಸರು ಎಲ್ಲದರ ರುಚಿಯನ್ನು ಹೆಚ್ಚಿಸುತ್ತದೆ, ಮತ್ತು ಇದು ಆರೋಗ್ಯಕ್ಕೂ ಪ್ರಯೋಜನಕಾರಿಯಾಗಿದೆ. ಕೆಲವರು ಚಿಕನ್ ಜೊತೆ ಮೊಸರು ಕೂಡ ತಿನ್ನುತ್ತಾರೆ. ಮೊಸರಿನ ಪರಿಣಾಮವು ತಂಪಾಗಿರುತ್ತದೆ, ಆದರೆ ಕೋಳಿಯ ಪರಿಣಾಮವು ಬಿಸಿಯಾಗಿರುತ್ತದೆ. ಅಂತಹ ಪರಿಸ್ಥಿತಿಯಲ್ಲಿ ಕೋಳಿ ಮತ್ತು ಮೊಸರು ಒಟ್ಟಿಗೆ ತಿನ್ನುವುದು ಜೀರ್ಣಕ್ರಿಯೆಯ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ಚಿಕನ್ ಮತ್ತು ಮೊಸರು ಒಟ್ಟಿಗೆ ತಿನ್ನುವುದನ್ನು ತಪ್ಪಿಸಿ.

ಮೀನು ಮತ್ತು ಕೋಳಿ : ಚಿಕನ್ ಜೊತೆ ಮೀನು ತಿನ್ನುವುದು ಆರೋಗ್ಯಕ್ಕೆ ಒಳ್ಳೆಯದಲ್ಲ. ಕೋಳಿ ಮತ್ತು ಮೀನು ಎರಡೂ ಪ್ರೋಟೀನ್‌ನಲ್ಲಿ ಸಮೃದ್ಧವಾಗಿವೆ, ಆದರೆ ಎರಡರಲ್ಲೂ ವಿಭಿನ್ನ ರೀತಿಯ ಪ್ರೋಟೀನ್ ಕಂಡುಬರುತ್ತದೆ. ಈ ಪ್ರೋಟೀನ್ ದೇಹದ ಮೇಲೆ ಪ್ರತಿಕ್ರಿಯಿಸಬಹುದು. ಇದರಿಂದ ದೇಹಕ್ಕೆ ಹಾನಿಯಾಗಬಹುದು ಹಾಗಾಗಿ ಕೋಳಿ ಮತ್ತು ಮೀನು ಒಟ್ಟಿಗೆ ತಿನ್ನುವುದು ಆರೋಗ್ಯಕ್ಕೆ ಒಳ್ಳೆಯದಲ್ಲ.

| ಬೆಳಗಾವಿ | ಬಾಗಲಕೋಟ | ವಿಜಯಪುರ | ಹುಬ್ಬಳ | ಧಾರವಾಡ | ಕೊಪ್ಪಳ | ಕಾರವಾರ | ಹಾವೇರಿ |
|---|---|---|---|---|---|---|---|
| 26/21°C | 31/24°C | 31/23°C | 27/22°C | 26/21°C | 30/23°C | 28/27°C | 28/26°C |

**ಸಂಜಯ್ ದತ್ ಜನ್ಮದಿನದ ಸಂಭ್ರಮದಲ್ಲಿದ್ದಾರೆ. 64ನೇ ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿರುವ ನಟನಿಗೆ ಕುಟುಂಬಸ್ಥರು, ಸಿನಿ ಸದಸ್ಯರು, ಸ್ನೇಹಿತರೂ ಸೇರಿದಂತೆ ಅಭಿಮಾನಿಗಳು ಶುಭಾಶಯಗಳ ಮಳೆ ಹರಿಸಿದ್ದಾರೆ. ಅವರ ಮುಂದಿನ ಚಿತ್ರದ ಅಪ್‌ಡೇಟ್ಸ್ ಹೊರಬಿದ್ದಿದೆ.**

**ನೆಟ್‌ಫ್ಲೆಕ್ಸ್‌ತನ್ನ ಮುಂಬರುವ ಡಾಕ್ಯು-ಸರಣಿ 'ದಿ ಹಂಟ್ ಫಾರ್ ವೀರಪ್ಪನ್' ಟೀಸರ್ ಅನ್ನು ಬಿಡುಗಡೆ ಮಾಡಿದೆ. ಇದು ತಮಿಳುನಾಡು, ಕರ್ನಾಟಕ ಮತ್ತು ಕೇರಳದ ಕಾಡುಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಕುಖ್ಯಾತ ಕಾಡುಗಳ್ಳ ವೀರಪ್ಪನ್ ಕುರಿತದ್ದಾಗಿದೆ.**

**ಪುಷ್ಪ 2' ಸಿನಿಮಾ ಕೆಲಸಗಳಲ್ಲಿ ಬ್ಯುಸಿ ಇರುವ ಅಲ್ಲು ಅರ್ಜುನ್ ಅವರು ಸೋಶಿಯಲ್ ಮೀಡಿಯಾದಲ್ಲಿ ಹೊಸ ಸಾಧನೆ ಮಾಡಿದ್ದಾರೆ. ಈ ವಿಚಾರ ಕೇಳಿ ಫ್ಯಾನ್ಸ್ ಖುಷಿ ಪಟ್ಟಿದ್ದಾರೆ. ಒಂದೇ ಪೋಸ್ಟ್‌ಗೆ 1 ಮಿಲಿಯನ್ ಫಾಲೋವರ್ಸ್**

# ಇಂಗ್ಲೆಂಡ್ ಕಮ್‌ಬ್ಯಾಕ್



ಆಶಸ್ ಸರಣಿಯ ಕೊನೆಯ ಪಂದ್ಯ ಕೂಡ ತೀವ್ರ ಪೈಪೋಟಿಯಿಂದ ಸಾಗುತ್ತಿದೆ. ಮೊದಲ ದಿನ ಸಂಪೂರ್ಣ ಮೇಲುಗೈ ಸಾಧಿಸಿದ್ದ ಆಸ್ಟ್ರೇಲಿಯಾ ತಂಡದ ವಿರುದ್ಧ ಎರಡನೇ ದಿನದಾಟದಲ್ಲಿ ಇಂಗ್ಲೆಂಡ್ ಬೌಲರ್‌ಗಳು ಅದ್ಭುತವಾಗಿ ತಿರುಗಿಬಿದ್ದಿದ್ದಾರೆ. ಹೀಗಾಗಿ ಉತ್ತಮ ಬ್ಯಾಟಿಂಗ್ ನಡೆಸಿ ದೊಡ್ಡ ಮುನ್ನಡೆ ಪಡೆಯಬೇಕೆಂಬ ಲೆಕ್ಕಾಚಾರದಲ್ಲಿದ್ದ ಆಸ್ಟ್ರೇಲಿಯಾಗೆ ಭಾರೀ ಆಘಾತವುಂಟಾಗಿದೆ.

ಮೊದಲ ದಿನದಾಟದಲ್ಲಿ 283 ರನ್‌ಗಳನ್ನು ಗಳಿಸಿ ಇಂಗ್ಲೆಂಡ್ ಆಲೌಟ್ ಆದ ಬಳಿಕ ಬ್ಯಾಟಿಂಗ್ ಆರಂಭಿಸಿದ ಆಸ್ಟ್ರೇಲಿಯಾ ಮೊದಲ ದಿನದಾಟ ಅಂತ್ಯವಾಗುವ ವೇಳೆಗೆ 61 ರನ್‌ಗೆ 1 ವಿಕೆಟ್ ಕಳೆದುಕೊಂಡಿತ್ತು. ಇಲ್ಲಿಂದ ಎರಡನೇ ದಿನದಾಟ ಆರಂಭಿಸಿದ ಆಸ್ಟ್ರೇಲಿಯಾ ಮೊದಲ ಹಿನ್ನಡೆಯುಂಟು ಮಾಡಿದ್ದು ಸ್ಟುವರ್ಟ್ ಬ್ರಾಡ್. ಅರ್ಧ ಶತಕದ ಅಂಚಿನಲ್ಲಿದ್ದ ಉಸ್ಮಾನ್ ಖವಾಜ ಅವರನ್ನು 47 ರನ್‌ಗೆ ಎಲ್‌ಬಿಡಬ್ಲ್ಯು ಬಲೆಗೆ ಬೀಳಿಸುವಲ್ಲಿ ಯಶಸ್ವಿಯಾಗಿದ್ದರು.

ಸ್ಟೀವ್ ಸ್ಮಿತ್ ಒಂದು ತುದಿಯಲ್ಲಿ ಗಟ್ಟಿಯಾಗಿ ನೆಲೆಯೂರಿದ್ದರೆ ಮತ್ತೊಂದು ಭಾಗದಲ್ಲಿ ವಿಕೆಟ್‌ಗಳು ಉರುಳುತ್ತಾ ಸಾಗಿತ್ತು. 185 ರನ್‌ಗಳಿಗೆ 7 ವಿಕೆಟ್ ಕಳೆದುಕೊಂಡಿದ್ದಾಗ ಆಸ್ಟ್ರೇಲಿಯಾ ದೊಡ್ಡ ಅಂತರದ ಹಿನ್ನಡೆ ಅನುಭವಿಸುವ ಸೂಚನೆ ಕಾಣಿಸಿತ್ತು. ಆದರೆ ಕೊನೆಯ ಹಂತದಲ್ಲಿ ನಾಯಕ ಪ್ಯಾಟ್ ಕಮ್ಮಿನ್ಸ್ 36 ರನ್ ಹಾಗೂ ಟಾಡ್ ಮರ್ಫಿ ಸ್ಫೋಟಕ 34 ರನ್‌ಗಳಿಸುವ ಮೂಲಕ ಕಡೆಗೂ ಮುನ್ನಡೆ ಸಾಧಿಸುವಲ್ಲಿ ಯಶಸ್ವಿಯಾಯಿತು. ಸ್ಟೀವ್ ಸ್ಮಿತ್ 71 ರನ್‌ಗಳಿಸಿ ಔಟಾಗುವ ಮೂಲಕ ತಂಡದ ಮುನ್ನಡೆಯಲ್ಲಿ ಮಹತ್ವದ ಪಾತ್ರವಹಿಸಿದರು. ಅಂತಿಮವಾಗಿ ಆಸ್ಟ್ರೇಲಿಯಾ 295 ರನ್‌ಗೆ ಆಲೌಟ್ ಆಗಿದೆ.

ಆಸ್ಟ್ರೇಲಿಯಾ ಮೊದಲ ಇನ್ನಿಂಗ್ಸ್‌ನಲ್ಲಿ ಈಗ 12 ರನ್‌ಗಳ ಅಲ್ಪ ಮುನ್ನಡೆ ಪಡೆದ ಕಾರಣ ಎರಡನೇ ಇನ್ನಿಂಗ್ಸ್‌ನಲ್ಲಿ ಮತ್ತೊಮ್ಮೆ ತೀವ್ರ ಜಿದ್ದಾಜಿದ್ದಿನ ಪ್ರದರ್ಶನ ಏರ್ಪಡುವುದು ನಿಶ್ಚಿತ. ಹೀಗಾಗಿ ಮೂರನೇ ದಿನದಾಟದಲ್ಲಿ ಇಂಗ್ಲೆಂಡ್ ತಂಡ ಯಾವ ರೀತಿಯ ಪ್ರದರ್ಶನ ನೀಡಲಿದೆ ಎಂಬುದು ತೀವ್ರ ಕುತೂಹಲ ಮೂಡಿಸಿದೆ.



ವಿಶ್ವಕಪ್ ನಾನು ರೆಡಿ ಅಭ್ಯಾಸದಲ್ಲಿ ನಿರತನಾಗಿದ್ದೇನೆ ಬುಮ್ರಾ

# ಹ್ಯಾಟ್ರಿಕ್ ಜಯ



ಪುದುಚೇರಿಯಲ್ಲಿ ನಡೆದ ದೇವಧರ್ ಟ್ರೋಫಿಯ ಒಂಬತ್ತನೇ ಪಂದ್ಯದಲ್ಲಿ ಈಶಾನ್ಯ ವಲಯ ತಂಡವನ್ನು 9 ವಿಕೆಟ್‌ಗಳಿಂದ ಮಣಿಸಿದ ಮಯಾಂಕ್ ಅಗರ್ವಾಲ್ ನೇತೃತ್ವದ ದಕ್ಷಿಣ ವಲಯ ತಂಡ ಲೀಗ್‌ನಲ್ಲಿ ಹ್ಯಾಟ್ರಿಕ್ ಗೆಲುವನ್ನು ದಾಖಲಿಸಿದೆ.

ಈ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಈಶಾರನ್ಯ ವಲಯ ತಂಡ, ದಕ್ಷಿಣ ವಲಯ ತಂಡದ ಬೌಲರ್‌ಗಳ ದಾಳಿಗೆ ತತ್ತರಿಸಿ, ಕೇವಲ 136 ರನ್‌ಗಳಿಗೆ ಆಲೌಟ್ ಆಯಿತು. ಈ ಸಾಧಾರಣ ಗುರಿ ಬೆನ್ನಟ್ಟಿದ ದಕ್ಷಿಣ ವಲಯ ತಂಡ ಆರಂಭಿಕರಾದ ರೋಹನ್ ಮತ್ತು ನಾಯಕ ಮಯಾಂಕ್ ಅಗರ್ವಾಲ್ ಅವರ 95 ರನ್‌ಗಳ ಜೊತೆಯಾಟದಿಂದಾಗಿ ಕೇವಲ 1 ವಿಕೆಟ್ ಕಳೆದುಕೊಂಡು, 19.3 ಓವರ್‌ಗಳಲ್ಲಿ ಗೆಲುವಿನ ದಡ ಸೇರಿತು.

ಈ ಪಂದ್ಯದಲ್ಲಿ ಈಶಾನ್ಯ ವಲಯ ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ದಕ್ಷಿಣ ವಲಯದ ಬೌಲಿಂಗ್ ಮುಂದೆ ಈಶಾನ್ಯ ತಂಡದ ಬ್ಯಾಟಿಂಗ್ ಕುಸಿತ ಕಂಡಿತು. ಹೀಗಾಗಿ ಈಶಾನ್ಯ ವಲಯದ ಪರ ನಾಲ್ವರು ಆಟಗಾರರು ಮಾತ್ರ ಎರಡಂಕಿ ತಲುಪುವಲ್ಲಿ ಯಶಸ್ವಿಯಾದರು. ತಂಡದ ಪರ ಫಿರೋಯಿಜಮ್ ಜೋತಿನ್ 40 ರನ್ ಬಾರಿಸಿದರೆ, ನಾಯಕ ಲ್ಯಾಂಗ್ಲೋನ್ಯಾಂಬಾ ಕೇಶಂಗ್ಬಾಮ್ 23, ಅಭಿಷೇಕ್ ಕುಮಾರ್ 15 ಮತ್ತು ರೆಕ್ಸ್ ಸಿಂಗ್ 14 ರನ್ ಕಲೆಹಾಕಿದರು. ಈ ನಾಲ್ವರನ್ನು ಹೊರತುಪಡಿಸಿ ಉಳಿದ 5 ಮಂದಿ ಎರಡಂಕಿ ತಲುಪಲು ಸಾಧ್ಯವಾಗಲಿಲ್ಲ.ಇನ್ನು ದಕ್ಷಿಣ ವಲಯದ ಪರ ಬೌಲಿಂಗ್‌ನಲ್ಲಿ ಮಿಂಚಿದ ಸಾಯಿ ಕಿಶೋರ್ 3 ವಿಕೆಟ್ ಪಡೆದರೆ, ವಿದ್ವತ್ ಕಾವೇರಪ್ಪ ಕೂಡ 3 ಬ್ಯಾಟ್ಸ್‌ಮನ್‌ಗಳನ್ನು ವಾಪಸ್ ಕಳುಹಿಸಿದರು. ಅರ್ಜುನ್ ತೆಂಡೂಲ್ಕರ್, ವೈಶಾಕ್ ವಿಜಯಕುಮಾರ್, ವಾಷಿಂಗ್ಟನ್ ಸುಂದರ್ ಮತ್ತು ರೋಹಿತ್ ರಾಯುಡು ತಲಾ 1 ವಿಕೆಟ್ ಪಡೆದರು.ಈ ಅಲ್ಪ ಗುರಿಯನ್ನು ಬೆನ್ನಟ್ಟಿದ ದಕ್ಷಿಣ ವಲಯ ತಂಡದ ಮೂವರು ಆರಂಭಿಕರು ಗೆಲುವಿನ ಇನ್ನಿಂಗ್ಸ್ ಆಡಿದರು. ಇದರಲ್ಲಿ ಆರಂಭಿಕರಾದ ರೋಹನ್ ಮತ್ತು ನಾಯಕ ಮಯಾಂಕ್ ಅಗರ್ವಾಲ್ ಇಬ್ಬರೂ ಮೊದಲ ವಿಕೆಟ್‌ಗೆ 95 ರನ್‌ಗಳ ಜೊತೆಯಾಟವನ್ನು ಹಂಚಿಕೊಂಡರು. ಈ ವೇಳೆ ಮಯಾಂಕ್ 46 ಎಸೆತಗಳಲ್ಲಿ 3 ಬೌಂಡರಿ ಸಹಿತ 32 ರನ್ ಗಳಿಸಿ ಔಟಾದರೆ, ನಂತರ ರೋಹನ್ ಮತ್ತು ಎನ್ ಜಗದೀಸನ್ ಅಜೇಯ 42 ರನ್‌ಗಳ ಜೊತೆಯಾಟ ನೀಡಿ ದಕ್ಷಿಣ ವಲಯಕ್ಕೆ ಜಯ ತಂದುಕೊಟ್ಟರು. ರೋಹನ್ 58 ಎಸೆತಗಳಲ್ಲಿ 5 ಸಿಕ್ಸರ್ ಮತ್ತು 8 ಬೌಂಡರಿಗಳ ನೆರವಿನಿಂದ ಔಟಾಗದೆ 87 ರನ್ ಬಾರಿಸಿದರೆ, ಜಗದೀಶನ್ 15 ರನ್ ಗಳಿಸಿ ಅಜೇಯರಾಗಿ ಉಳಿದರು. ಈಶಾನ್ಯ ವಲಯ ಪರ ಇಮ್ಲಿವಾಟಿ ಲೆಮಟೂರ್ ಏಕೈಕ ವಿಕೆಟ್ ಪಡೆದರು.

# ಜಪಾನ್ ಓಪನ್: ಲಕ್ಷ್ಯಸೇನ್‌ಗೆ ಸೋಲು

ಟೋಕಿಯೊ: ಕೆನಡಾ ಓಪನ್ 2023 ವಿಜೇತ ಲಕ್ಷ್ಯ ಸೇನ್ ಜಪಾನ್ ಓಪನ್ ಸೂಪರ್ 750 ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ತಮ್ಮ ಪ್ರಯಾಣ ಅಂತ್ಯಗೊಳಿಸಿದ್ದಾರೆ. ಭಾರತ-ಕ್ಕೆ ಸೇನ್ ಅವರಿಂದ ಒಂದು ಪ್ರಶಸ್ತಿಯ ನಿರೀಕ್ಷೆ ಇತ್ತು. ಆದರೆ, ಸೆಮಿಸ್‌ನಲ್ಲಿ ಸೋಲು ಕಂಡ ಸೇನ್ ಪ್ರಶಸ್ತಿ ಸುತ್ತಿಗೆ ಅರ್ಹತೆ ಪಡೆಯುವಲ್ಲಿ ಎಡವಿದರು.ಶನಿವಾರ ನಡೆದ ಜಪಾನ್ ಓಪನ್ ಸೂಪರ್ 750 ಬ್ಯಾಡ್ಮಿಂಟನ್ ಪಂದ್ಯಾವಳಿಯ ಸೆಮಿಫೈನಲ್‌ನಲ್ಲಿ ಭಾರತದ ಸ್ಟಾರ್ ಷಟ್ಲರ್ ಲಕ್ಷ್ಯ ಸೇನ್ ಅವರು ವಿಶ್ವದ 9 ನೇ ಶ್ರೇಯಾಂಕಿತ ಮತ್ತು ಏಷ್ಯನ್ ಗೇಮ್ಸ್ ಚಾಂಪಿಯನ್ ಜೊನಾಟನ್ ಕ್ರಿಸ್ಟಿ ವಿರುದ್ಧ 15–21, 21–13, 16–21 ರಿಂದ ಸೋಲನುಭವಿಸಿದರು. ಇಬ್ಬರ ನಡುವೆ 68 ನಿಮಿಷಗಳ ಕಾಲ ರೋಚಕ ಸ್ಪರ್ಧೆ ಏರ್ಪಟ್ಟಿತು. ಸೇನ್ ಸೋಲು ಕಂಡರೂ ಸುಲಭವಾಗಿ ಸ್ಪರ್ಧೆಯನ್ನು ಬಿಟ್ಟುಕೊಡಲಿಲ್ಲ.21 ವರ್ಷದ ಯುವ ಸ್ಟಾರ್ ಆಟಗಾರ ಸೇನ್ ತಮ್ಮ ಎದುರಾಳಿಯ ಮೇಲೆ ಮೊದಲ ಸೆಟ್‌ನಲ್ಲಿ ಪ್ರತಿರೋಧ ಒಡ್ಡುವಲ್ಲಿ ವಿಫಲರಾದರು. ವಿಶ್ವದ 9 ನೇ ಶ್ರೇಯಾಂಕಿತ ಜೊನಾಟನ್ ಕ್ರಿಸ್ಟಿ ಮುನ್ನಡೆಯನ್ನು ಕಾಯ್ದುಕೊಂಡು 15–21 ರಿಂದ ಮೊದಲ ಗೇಮ್ ತಮ್ಮದಾಗಿಸಿಕೊಂಡರು. ಎರಡನೇ ಸೆಟ್‌ನಲ್ಲಿ ಪುಟಿದೆದ್ದ ಸೇನ್, ಕ್ರಿಸ್ಟಿ ವಿರುದ್ಧ ಬಲಿಷ್ಠ ಹೋರಾಟವನ್ನು ತೋರಿದರು. ಮೊದಲ ಸೆಟ್‌ನ ವೈಫಲ್ಯಗಳನ್ನು ತಿದ್ದಿಕೊಂಡ ಲಕ್ಷ್ಯ ಎರಡನೇ ಗೇಮ್‌ನಲ್ಲಿ ಉತ್ತಮ ಮುನ್ನಡೆ ಪಡೆದುಕೊಂಡರು. ಗೆಲುವಿಗಾಗಿ ನಡೆದ ಮೂರನೇ ಸೆಟ್‌ನ ಪೈಪೋಟಿ ಜೋರಾಗಿಯೆ ಇತ್ತು. ಇಬ್ಬರು ಆಟಗಾರರು ಮಾಡುತ್ತಿದ್ದ ಸಣ್ಣ ಪುಟ್ಟ ತಪ್ಪುಗಳೇ ಅಂಕಕ್ಕೆ ಕಾರಣವಾಗಿತ್ತು. ಲಕ್ಷ್ಯ ಸೇನ್ ಅವರ ಕೆಲ ತಪ್ಪು ಹೊಡೆತಗಳು ಕ್ರಿಸ್ಟಿಗೆ ಅಂಕವನ್ನು ತಂದುಕೊಟ್ಟಿತು. ಮೂರನೇ ಸೆಟ್‌ನ್ನು 16–21 ರಿಂದ ಕ್ರಿಸ್ಟಿ ವಶಪಡಿಸಿಕೊಂಡು ಫೈನಲ್ ಪ್ರವೇಶ ಪಡೆದರು. ಇದು ಲಕ್ಷ್ಯ ಸೇನ್‌ಗೆ ಕ್ರಿಸ್ಟಿ ವಿರುದ್ಧ ಮೂರನೇ ಹೆಡ್–ಟು–ಹೆಡ್ ಪಂದ್ಯವಾಗಿದ್ದು, ಸೇನ್ ಎರಡರಲ್ಲಿ ಸೋಲು ಕಂಡಿದ್ದಾರೆ.

# ಮುಂದಿನ ವರ್ಷ ಟಿ,20 ವಿಶ್ವಕಪ್ ಆಯೋಜನೆ ಸಾಧ್ಯತೆ ಚರ್ಚೆ ಆರಂಭ

2023ರ ಐಸಿಸಿ ಏಕದಿನ ವಿಶ್ವಕಪ್ ಪಂದ್ಯಾವಳಿಯ ನವೀಕರಿಸಿದ ವೇಳಾಪಟ್ಟಿಗಾಗಿ ಜಗತ್ತಿನ ಕ್ರಿಕೆಟ್ ಅಭಿವಾನಿಗಳು ಕಾಯುತ್ತಿರುವಾಗ, ಮುಂದಿನ ವರ್ಷ ನಡೆಯುವ 2024ರ ಟಿ20 ವಿಶ್ವಕಪ್ ಪಂದ್ಯಾವಳಿಯ ದಿನಾಂಕ ಹೊರಬಿದ್ದಿದೆ.

ವೆಸ್ಟ್ ಇಂಡೀಸ್ ಮತ್ತು ಯುಎಸ್‌ಎ ಜಂ–ಟಿಯಾಗಿ ಆಯೋಜಿಸಲಿರುವ 2024ರ ಟಿ20 ವಿಶ್ವಕಪ್ ಪಂದ್ಯಾವಳಿಯು ಜೂನ್ 4ರಿಂದ ಜೂನ್ 30ರವರೆಗೆ ನಡೆಯುವ ಸಾಧ್ಯತೆ ಇದೆ ಎಂದು ಇಖಕಓಭಿಡುಭಿಟಜಿ೦ ವರದಿ ಮಾಡಿದೆ. ವರದಿಗಳ ಪ್ರಕಾರ, ಐಸಿಸಿ ನಿಯೋಗವು ಈ ವಾರ ಯುಎಸ್‌ಎನ ಐದು ಶಾರ್ಟ್‌ಲಿಸ್ಟ್ ಸ್ಥಳಗಳಿಗೆ ಭೇಟಿ ನೀಡಿದೆ.

ಯುಎಸ್‌ಎ ಸ್ಥಳಗಳು ಮೊದಲ ಬಾರಿಗೆ ಅಂತಾರಾಷ್ಟ್ರೀಯ ಕ್ರಿಕೆಟ್ ಪಂದ್ಯಾವಳಿಯನ್ನು ಆಯೋಜಿಸಲಿವೆ. ಇವುಗಳಲ್ಲಿ ಮೋರಿಸ್ವಿಲ್ಲೆ, ಡಲ್ಲಾಸ್ ಮತ್ತು ನ್ಯೂಯಾರ್ಕ್ ಪಂದ್ಯಾವಳಿಯ ಪಂದ್ಯಗಳಿಗಾಗಿ ಮತ್ತು ಅಭ್ಯಾಸ ಪಂದ್ಯಗಳಿಗಾಗಿ ಫ್ಲೋರಿಡಾದ ಲಾಡರ್‌ಹಿಲ್ ಸೇರಿವೆ. ಮಾರಿಸ್ವಿಲ್ಲೆ ಮತ್ತು ಡಲ್ಲಾಸ್ ಪ್ರಸ್ತುತ ಯುಎಸ್‌ಎನ ಮೇಜರ್ ಲೀಗ್ ಕ್ರಿಕೆಟ್‌ನ ಉದ್ಘಾಟನಾ ಆವೃತ್ತಿಯನ್ನು ಆಯೋಜಿಸುತ್ತಿವೆ. ಆದರೂ ಈ ಮೈದಾನಗಳು ಇನ್ನೂ ಅಂತಾರಾಷ್ಟ್ರೀಯ ಮೈದಾನದ ಸ್ಥಾನಮಾನ ಪಡೆದಿಲ್ಲ. ಇದು ಐಸಿಸಿ ನಿಯಮಗಳ ಪ್ರಕಾರ ಕಡ್ಡಾಯವಾಗಿದೆ.

ಮುಂದಿನ ದಿನಗಳಲ್ಲಿ ಕ್ರಿಕೆಟ್ ವೆಸ್ಟ್ ಇಂಡೀಸ್ ಮತ್ತು ಯುಎಸ್ ಕ್ರಿಕೆಟ್ ಜೊತೆಗೆ ಐಸಿಸಿ ನಿಯೋಗವು, ಈ ಕ್ರೀಡಾಂಗಣಗಳಿಗೆ ಸಂಬಂಧಿಸಿದಂತೆ ಅಂತಿಮ ನಿರ್ಧಾರವನ್ನು ತೆಗೆದುಕೊಳ್ಳುತ್ತದೆ. ಐರ್ಲೆಂಡ್, ಸ್ಕಾಟ್ಲೆಂಡ್ ಮತ್ತು ಪಪುವಾ ನ್ಯೂಗಿನಿ 20 ತಂಡಗಳು ಇತ್ತೀಚಿಗೆ ಟಿ20 ವಿಶ್ವಕಪ್‌ಗೆ ಐಸಿಸಿ ಪ್ರಾದೇಶಿಕ ಅರ್ಹತಾ ವ್ಯವಸ್ಥೆಯನ್ನು ಬಳಸಿಕೊಂಡು 2024ರ ಟಿ20 ವಿಶ್ವಕಪ್‌ಗೆ ಅರ್ಹತೆ ಪಡೆದಿವೆ.

ಪಪುವಾ ನ್ಯೂಗಿನಿ ಪೂರ್ವ ಏಷ್ಯಾ–ಪೆಸಿಫಿಕ್ ವಲಯದ ಅರ್ಹತಾ ಪಂದ್ಯವನ್ನು ಗೆದ್ದರೆ, ಯುರೋಪ್ ವಲಯದ ಅರ್ಹತಾ ಪಂದ್ಯದಲ್ಲಿ ಅಗ್ರ ಎರಡು ಸ್ಥಾನ ಪಡೆದವರು ಐರ್ಲೆಂಡ್ ಮತ್ತು ಸ್ಕಾಟ್ಲೆಂಡ್ ತಂಡಗಳಾಗಿವೆ. ಮುಂಬರುವ ತಿಂಗಳುಗಳಲ್ಲಿ ಅಮೆರಿಕ (ಒಂದು ಸ್ಥಾನಕ್ಕಾಗಿ), ಆಫ್ರಿಕಾ (ಎರಡು ಸ್ಥಾನಗಳು) ಮತ್ತು ಏಷ್ಯಾ (ಎರಡು ಸ್ಥಾನಗಳು) ಪ್ರಾದೇಶಿಕ ಪ್ರದೇಶಗಳ ಅರ್ಹತಾ ತಂಡಗಳನ್ನು ನಿರ್ಧರಿಸಲಾಗುತ್ತದೆ. ಪ್ರಾದೇಶಿಕ ಅರ್ಹತೆಗಳ ಮೊದಲು, ಆತಿಥೇಯ ವೆಸ್ಟ್ ಇಂಡೀಸ್ ಮತ್ತು ಯುನೈಟೆಡ್ ಸ್ಟೇಟ್ಸ್ ನೇರವಾಗಿ ಅರ್ಹತೆ ಪಡೆದಿದ್ದರೆ, 2022ರ ಟಿ20 ವಿಶ್ವಕಪ್‌ನಿಂದ ಅಗ್ರ ಎಂಟು ತಂಡಗಳು ಸೇರಿದಂತೆ ಹನ್ನೆರಡು ದೇಶಗಳು ಈಗಾಗಲೇ ಸ್ಪರ್ಧೆಗೆ ಅರ್ಹತೆ ಪಡೆದಿವೆ.

ಅವುಗಳೆಂದರೆ, ಆಸ್ಟ್ರೇಲಿಯಾ, ಇಂಗ್ಲೆಂಡ್, ಭಾರತ, ನೆದರ್ಲ್ಯಾಂಡ್ಸ್, ನ್ಯೂಜಿಲೆಂಡ್, ಪಾಕಿಸ್ತಾನ, ದಕ್ಷಿಣ ಆಫ್ರಿಕಾ ಮತ್ತು ಶ್ರೀಲಂಕಾ ತಂಡಗಳು. ಅಫ್ಘಾನಿಸ್ತಾನ ಮತ್ತು ಬಾಂಗ್ಲಾದೇಶ ಟಿ20 ಶ್ರೇಯಾಂಕದಲ್ಲಿ ತಮ್ಮ ಸ್ಥಾನಗಳ ಆಧಾರದ ಮೇಲೆ ಅರ್ಹತೆ ಪಡೆದಿವೆ. 2024ರ ಟಿ20 ವಿಶ್ವಕಪ್ ಪಂದ್ಯಾವಳಿಯು ಹಿಂದಿನ ಆವೃತ್ತಿಗಳಿಗಿಂತ ವಿಭಿನ್ನ ಸ್ವರೂಪವನ್ನು ಹೊಂದಿರಲಿದೆ. ಈ ಮುನ್ನ ಮೊದಲ ಸುತ್ತಿನ ನಂತರ ಸೂಪರ್ 12 ಆಡಬೇಕಿತ್ತು. ಆದರೆ, ಮುಂದಿನ ಆವೃತ್ತಿಯಲ್ಲಿ ಮೊದಲ ಸುತ್ತಿಗೆ 20 ತಂಡಗಳನ್ನು ತಲಾ ಐದು ತಂಡಗಳ ನಾಲ್ಕು ಗುಂಪುಗಳಾಗಿ ವಿಂಗಡಿಸಲಾಗುತ್ತದೆ. ಪ್ರತಿ ಗುಂಪಿನಿಂದ ಅಗ್ರ ಎರಡು ತಂಡಗಳು ಸೂಪರ್ 8ರ ಹಂತಕ್ಕೆ ಅರ್ಹತೆ ಪಡೆಯುತ್ತವೆ. ಸೂಪರ್ 8 ತಂಡಗಳು ನಂತರ ತಲಾ ನಾಲ್ಕು ತಂಡಗಳ ಎರಡು ಗುಂಪುಗಳಾಗಿ ವಿಭಜಿಸಲ್ಪಡುತ್ತವೆ. ಪ್ರತಿ ಗುಂಪಿನಲ್ಲಿ ಅಗ್ರ ಎರಡು ತಂಡಗಳು ಸೆಮಿಫೈನಲ್ ಪಂದ್ಯಗಳನ್ನು ಆಡುತ್ತವೆ. ನಂತರ ತಲಾ ಒಂದು ಅಗ್ರ ತಂಡ ಫೈನಲ್‌ಗೆ ಮುನ್ನಡೆಯಲಿವೆ.



# ಬ್ರೂಕ್‌ಗೆ ಐಪಿಎಲ್ ಅತ್ಯಂತ ಕಠಿಣವಂತೆ



ನವದೆಹಲಿ: ಇಂಗ್ಲೆಂಡ್‌ನ ಬಲಗೈ ಬ್ಯಾಟ್ಸ್‌ಮನ್ ಹ್ಯಾರಿ ಬ್ರೂಕ್ ವಿಶ್ವ ಕ್ರಿಕೆಟ್‌ನ ಉದಯೋನ್ಮುಖ ತಾರೆ. ಕ್ರಿಕೆಟ್ ತಜ್ಞರು ಬ್ರೂಕ್ ಅವರನ್ನು ಭವಿಷ್ಯದ ದೊಡ್ಡ ಆಟಗಾರ ಎಂದು ಪರಿಗಣಿಸಿದ್ದಾರೆ. ಈ ಇಂಗ್ಲೆಂಡ್ ಬ್ಯಾಟ್ಸ್‌ಮನ್ ಟೆಸ್ಟ್‌ನಲ್ಲೂ ಟಿ20ಯಂತಹ ಬಿರುಸಿನ ಬ್ಯಾಟಿಂಗ್ ಮಾಡುತ್ತಾರೆ.

ನಡೆಯುತ್ತಿರುವ ಅಂತಿಮ ಆಶಸ್ ಟೆಸ್ಟ್ ಪಂದ್ಯದ ಮೊದಲ ಇನ್ನಿಂಗ್ಸ್‌ನಲ್ಲಿ 91 ಬಾಲ್‌ನಲ್ಲಿ 11 ಬೌಂಡರಿ ಮತ್ತು 2 ಸಿಕ್ಸ್‌ನಿಂದ 85 ರನ್ ಗಳಿಸಿ ತಂಡದ ಪರ ಅತಿ ಹೆಚ್ಚು ರನ್ ಗಳಿಸಿದ ಬ್ಯಾಟರ್ ಎನಿಸಿಕೊಂಡಿದ್ದಾರೆ.

ಇದುವರೆಗಿನ ಟೆಸ್ಟ್‌ಗಳಲ್ಲಿ ಅವರ ಅಂಕಿ – ಅಂಶಗಳು ಸಹ ಆಕರ್ಷಕವಾಗಿವೆ. ಬ್ರೂಕ್ ಅಂತಾರಾಷ್ಟ್ರೀಯ ಪಂದ್ಯಗಳಲ್ಲಿ ಸುಲಭವಾಗಿ ಸಾಕಷ್ಟು ರನ್ ಗಳಿಸುತ್ತಿದ್ದಾರೆ. ಆದರೆ, ಈ ಇಂಗ್ಲೆಂಡ್ ಬ್ಯಾಟ್ಸ್‌ಮನ್‌ಗೆ ಐಪಿಎಲ್‌ನ ಭಯ ಕಾಡುತ್ತಿದೆ. ಆಶಸ್ 2023ರಲ್ಲಿ ಆಡುತ್ತಿರುವ ಬ್ರೂಕ್ ಪತ್ರಿಕಾಗೋಷ್ಠಿಯಲ್ಲಿ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಅತ್ಯಂತ ಕಠಿಣ ಸ್ಪರ್ಧೆಯಾಗಿದೆ ಎಂದು ಹೇಳಿದ್ದಾರೆ.

5 ನೇ ಆಶಸ್ ಟೆಸ್ಟ್ ಸಮಯದಲ್ಲಿ, ಬ್ರೂಕ್ ಅವರನ್ನು ಆಶಸ್ ನಿಮ್ಮ ದೈಹಿಕವಾಗಿ ಮತ್ತು ಮಾನಸಿಕವಾಗಿ ಬಳಲಿಕೆಯ ಅನುಭವವಾಗಿದೆಯೇ? ಎಂದು ಕೇಳಿದ ಪ್ರಶ್ನೆಗೆ, ಪ್ರತಿಕ್ರಿಯೆಯಾಗಿ ಇಂಗ್ಲೆಂಡ್‌ನ ಸ್ಟಾರ್ ಬ್ಯಾಟ್ಸ್‌ಮನ್ ಹ್ಯಾರಿ ಬ್ರೂಕ್, "ಬಹುಶಃ ಆಶಸ್‌ನಲ್ಲಿ ಮಾನಸಿಕ ಬಳಲಿಕೆ ನೀಡಬಹುದು, ಆದರೆ, ಐಪಿಎಲ್ ದೈಹಿಕವಾಗಿ ಮತ್ತು ಮಾನಸಿಕವಾಗಿ ಅತ್ಯಂತ ಕಷ್ಟಕರವಾಗಿದೆ. ಐಪಿಎಲ್ ನಾನು ಮಾನಸಿಕವಾಗಿ ಮತ್ತು ದೈಹಿಕವಾಗಿ ಎದುರಿಸಿದ ಅತ್ಯಂತ ಕಠಿಣ ಸ್ಪರ್ಧೆಯಾಗಿದೆ" ಎಂದು ಬ್ರೂಕ್ ಹೇಳಿದ್ದಾರೆ.ಬ್ರೂಕ್ ಅವರನ್ನು ಐಪಿಎಲ್ ಫ್ರಾಂಚೈಸಿ ಸನ್ ರೈಸರ್ಸ್ ಹೈದರಾಬಾದ್ 13.25 ಕೋಟಿ ರೂಪಾಯಿಗೆ ತನ್ನ ತಂಡಕ್ಕೆ ಸೇರಿಸಿಕೊಂಡಿದೆ.

ಐಪಿಎಲ್ 2023ರಲ್ಲಿ ಬ್ರೂಕ್ ಮೇಲೆ ಹೆಚ್ಚಿನ ನಿರೀಕ್ಷೆ ಇರಿಸಲಾಗಿತ್ತು. ಆದರೆ, ಅವರ ಬ್ಯಾಟ್‌ನಿಂದ ನಿರೀಕ್ಷಿತ ಪ್ರದರ್ಶನ ಬಾರದಿದ್ದದ್ದು, ಸನ್ ರೈಸರ್ಸ್ ಈ ಬಾರಿ ಹೀನಾಯವಾದ ಹಿನ್ನಡೆಗೂ ಕಾರಣವಾಗಿತ್ತು. ಸನ್ ರೈಸರ್ಸ್ ತಂಡ ಈ ಬಾರಿ ಲೀಗ್ ಅಂತ್ಯಕ್ಕೆ ಅಂಕ ಪಟ್ಟಿಯಲ್ಲಿ 10ನೇ ಸ್ಥಾನವನ್ನು ಅಲಂಕರಿಸಿತ್ತು.

ಹ್ಯಾರಿ ಬ್ರೂಕ್ 2023 ರಲ್ಲಿ ಐಪಿಎಲ್‌ಗೆ ಪದಾರ್ಪಣೆ ಮಾಡಿದರು. ಅವರ ಅಂತಾರಾಷ್ಟ್ರೀಯ ಅಂಕಿ ಅಂಶದಿಂದ ಬಿಡ್‌ನಲ್ಲಿ ಹೆಚ್ಚು ಪೈಪೋಟಿ ಪಡೆದು ದೊಡ್ಡ ಮೊತ್ತ ಪಡೆದುಕೊಂಡರು. ಬ್ರೂಕ್ ಐಪಿಎಲ್ 2023ರ 11 ಪಂದ್ಯಗಳಲ್ಲಿ 21.11 ರ ಸಾಧಾರಣ ಸರಾಸರಿಯೊಂದಿಗೆ ಒಟ್ಟು 154 ರನ್ ಗಳಿಸಿದರು. ಅವರ ಬ್ಯಾಟ್‌ನಿಂದ ಪದಾರ್ಪಣೆ ವರ್ಷವೇ ಆಕರ್ಷಕ ಅಜೇಯ ಶತಕ ದಾಖಲಾಗಿದ್ದು, ವಿಶೇಷವಾಗಿದೆ. ಅವರ ಶತಕವನ್ನು ತೆಗೆದುಹಾಕಿದರೆ, 10 ಪಂದ್ಯಗಳಲ್ಲಿ ಅವರ ರನ್ ಸರಾಸರಿ ಕೇವಲ 5.4 ಆಗಿರುತ್ತದೆ. ಹೀಗಾಗಿ ಬ್ರೂಕ್ ಐಪಿಎಲ್‌ನಲ್ಲಿ ಶೂನ್ಯ ಸಾಧನೆ ಮಾಡಿದ್ದಾರೆ ಎಂದರೆ ತಪ್ಪಾಗದು, ಕೇವಲ ಒಂದು ಪಂದ್ಯದಲ್ಲಿ ಮಾತ್ರ ಘರ್ಜಿಸಿದ್ದಾರೆ. ಹೀಗಾಗಿ ಸ್ವತಃ ಬ್ರೂಕ್ ಅವರೇ ಐಪಿಎಲ್‌ನ್ನು ಕಠಿಣ ಸ್ಪರ್ಧೆ ಎಂದು ಕರೆದಿದ್ದಾರೆ.ಹ್ಯಾರಿ ಬ್ರೂಕ್ ಟೆಸ್ಟ್‌ನಲ್ಲಿ ಅತ್ಯಂತ ಅದ್ಭುತ ಪ್ರದರ್ಶನ ನೀಡಿದ್ದಾರೆ. ಬ್ರೂಕ್ 12 ಟೆಸ್ಟ್ ಪಂದ್ಯಗಳ 19 ಇನ್ನಿಂಗ್ಸ್‌ಗಳಲ್ಲಿ 65.22 ರ ಅತ್ಯುತ್ತಮ ಸರಾಸರಿ ಮತ್ತು 91.65 ಸ್ಟ್ರೈಕ್ ರೇಟ್‌ನೊಂದಿಗೆ ಒಟ್ಟು 1174 ರನ್ ಗಳಿಸಿದ್ದಾರೆ.


ಅವರು ಟೆಸ್ಟ್‌ನಲ್ಲಿ 7 ಅರ್ಧ ಶತಕ ಮತ್ತು 4 ಶತಕಗಳನ್ನು ಸಹ ಗಳಿಸಿದ್ದಾರೆ. ಅದೇ ಸಮಯದಲ್ಲಿ, ಅವರು 3 ಏಕದಿನಗಳಲ್ಲಿ 28.67 ರ ಸರಾಸರಿಯಲ್ಲಿ 86 ರನ್ ಗಳಿಸಿದ್ದಾರೆ ಮತ್ತು 20 ಟಿ20 ಪಂದ್ಯಗಳ 17 ಇನ್ನಿಂಗ್ಸ್‌ಗಳಲ್ಲಿ, ಬ್ರೂಕ್ 26.57 ರ ಸರಾಸರಿಯಲ್ಲಿ ಒಟ್ಟು 372 ರನ್ ಗಳಿಸಿದ್ದಾರೆ.

# ಭಾರತ ಎಂಟರ ಘಟಕ್ಕೆ ಪ್ರವೇಶ



ನವದೆಹಲಿ: ಭಾರತ ಮಹಿಳಾ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಮುಂಬರುವ ಏಷ್ಯನ್ ಗೇಮ್ಸ್‌ನಲ್ಲಿ ಆಡಬೇಕಾದಲ್ಲಿ ವನಿತೆಯರ ತಂಡ ಫೈನಲ್ಸ್ ಪ್ರವೇಶ ಪಡೆಯಬೇಕಾಗುತ್ತದೆ. ಏಷ್ಯನ್ ಗೇಮ್ಸ್‌ಗೆ ಭಾರತೀಯ ಕ್ರಿಕೆಟ್ ಪುರುಷ ಮತ್ತು ಮಹಿಳಾ ತಂಡ ನೇರ ಎಂಟರ ಘಟ್ಟಕ್ಕೆ ಪ್ರವೇಶ ಪಡೆದುಕೊಂಡಿದೆ. ಗೇಮ್ಸ್‌ನ ನಿಯಮದಂತೆ ಜೂನ್ 1ರ ಐಸಿಸಿ ಟಿ –20 ಅಂತಾರಾಷ್ಟ್ರೀಯ ಶ್ರೇಯಾಂಕದ ಆಧಾರದ ಮೇಲೆ ಭಾರತ, ಪಾಕಿಸ್ತಾನ, ಶ್ರೀಲಂಕಾ ಮತ್ತು ಬಾಂಗ್ಲಾದೇಶ ನೇರ ಸ್ಥಾನವನ್ನು ಪಡೆದುಕೊಂಡಿದೆ.ಈ ನೇರ ಪ್ರವೇಶ ಪಡೆದಿರುವ ಸಂತೋಷ ಭಾರತೀಯ ವನಿತೆಯ ತಂಡಕ್ಕೆ ಒಂದೆಡೆ ಆದರೆ, ಇನ್ನೊಂದೆಡೆ ನಾಯಕಿ ಇಲ್ಲದೇ ಮೈದಾನಕ್ಕೆ ಇಳಿಯ ಬೇಕಾದ ಪರಿಸ್ಥಿತಿ ಎದುರಾಗಿದೆ. ಹೌದು, ಇತ್ತೀಚೆಗೆ ಬಾಂಗ್ಲಾದೇಶ ವಿರುದ್ಧದ ಏಕದಿನ ಪಂದ್ಯದಲ್ಲಿ ಅಂಪೈರಿಂಗ್ ಅನ್ನು ಸಾರ್ವಜನಿಕವಾಗಿ ಟೀಕಿಸಿದ್ದಕ್ಕಾಗಿ ಹರ್ಮನ್‌ಪ್ರೀತ್‌ಗೆ ಎರಡು ಪಂದ್ಯಗಳಿಂದ ಐಸಿಸಿ ನಿಷೇಧ ಹೇರಿದೆ.ಹೀಗಾಗಿ ಹರ್ಮನ್‌ಪ್ರೀತ್ ಅವರು ಕ್ವಾರ್ಟರ್–ಫೈನಲ್‌ನಲ್ಲಿ ಆಡಲು ಸಾಧ್ಯವಾಗುವುದಿಲ್ಲ. ಸೆಮಿಫೈನಲ್ ಪಂದ್ಯದಲ್ಲಿ ಭಾರತ ಅರ್ಹತೆ ಪಡೆದು ಅಂತಿ ಪಂದ್ಯ–ಕ್ಕೆ ಸ್ಥಾನ ಗಿಟ್ಟಿಸಿಕೊಂಡಲ್ಲಿ ನಾಯಕಿ ಕೌರ್ ಬ್ಯಾಟ್ ಹಿಡಿಯಲಿದ್ದಾರೆ. ಮಹಿಳೆಯರ ಸ್ಪರ್ಧೆಗಳು ಸೆಪ್ಟೆಂಬರ್ 19 ರಂದು ಪ್ರಾರಂಭವಾಗಲಿದೆ ಮತ್ತು ಸೆಪ್ಟೆಂಬರ್ 26 ರಂದು ಚಿನ್ನ ಮತ್ತು ಕಂಚಿನ ಪದಕದ ಸ್ಪರ್ಧೆಯಿಂದ ಕೊನೆಗೊಳ್ಳಲಿದೆ. ರುತುರಾಜ್ ಗಾಯಕ್ವಾಡ್ ನೇತೃತ್ವದ ಪುರುಷರ ತಂಡವು ಸಹ ಐಸಿಸಿ ಟಿ20 ಶ್ರೇಯಾಂಕದ ಆಧಾರದ ಮೇಲೆ ಕ್ವಾರ್ಟರ್ ಫೈನಲ್‌ಗೆ ನೇರ ಪ್ರವೇಶ ಪಡೆದಿದೆ. ಪುರುಷರ ಈವೆಂಟ್ ಸೆಪ್ಟೆಂಬರ್ 28 ರಂದು ಪ್ರಾರಂಭವಾಗುತ್ತದೆ. ಏಕದಿನ ವಿಶ್ವಕಪ್ ಅಕ್ಟೋಬರ್ 5ಕ್ಕೆ ಆರಂಭವಾದರೆ, ಪುರುಷರ ಏಷ್ಯನ್ ಗೇಮ್ಸ್ ಫೈನಲ್ 7 ರಂದು ನಡೆಯಲಿದೆ. ಭಾರತೀಯ ಕ್ರಿಕೆಟ್ ತಂಡವು ಫೈನಲ್‌ಗೆ ಅರ್ಹತೆ ಪಡೆದರೆ ಅವರು ಸತತ ಮೂರು ದಿನ ಪಂದ್ಯವನ್ನು ಆಡಬೇಕಾಗುತ್ತದೆ. ಅಕ್ಟೋಬರ್ 5 ರಂದು ಕ್ವಾರ್ಟರ್ ಫೈನಲ್, ಅಕ್ಟೋಬರ್ 6 ಸೆಮಿಫೈನಲ್ ಮತ್ತು ಅಕ್ಟೋಬರ್ 7 ಫೈನಲ್ಸ್ ನಡೆಯಲಿದೆ.

# ಸಿಂಪಲಾಗಿದ್ದು ಎಲ್ಲರನ್ನೂ ಸೆಳದ ದೀಪಿಕಾ



ಬಾಲಿವುಡ್ ನಟಿ ದೀಪಿಕಾ ಪಡುಕೋಣೆ ತಮ್ಮ ಫ್ಯಾಷನ್‌ನಿಂದಲೇ ಗಮನ ಸೆಳೆಯುತ್ತಾರೆ. ಪ್ರತಿ ಬಾರಿಯೂ ವಿಭಿನ್ನ ಸ್ಟೈಲ್‌ನಲ್ಲಿ ಕಾಣಿಸಿಕೊಂಡು ಎಲ್ಲರನ್ನೂ ಆಕರ್ಷಿಸುತ್ತಾರೆ. ಮುಂಬೈ ವಿಮಾನ ನಿಲ್ದಾಣದಲ್ಲಿ ಯಾವಾಗ ಕಾಣಿಸಿಕೊಂಡರೂ ಸುದ್ದಿಯಾಗುತ್ತಾರೆ. ಸರಳವಾದ ಡ್ರೆಸ್ ಕೂಡ ಅವರ ಚೆಲುವನ್ನು ತೋರುವಂತೆ ಮಾಡುತ್ತದೆ.

ಪಾಪರಾಜಿಗಳ ಗಮನವನ್ನು ಕದಿಯಲು ಯಶಸ್ವಿಯಾಗುವುದರ ಜೊತೆಗೆ ಅಭಿವಾನಿಗಳನ್ನು ತಮ್ಮ ನೋಟದಿಂದಲೇ ಮಂತ್ರ ಮುಗ್ಧಗೊಳಿಸುತ್ತಾರೆ.ಇತ್ತೀಚೆಗಿನ ಅವರ ವಿಮಾನ ನಿಲ್ದಾಣದ ನೋಟ ಭಿನ್ನವಾಗಿರಲಿಲ್ಲ. ಶುಕ್ರವಾರ ಅಮೆರಿಕದಿಂದ ವಾಪಸಾಗುವ ವೇಳೆ ಮುಂಬೈ ಏರ್‌ಪೋರ್ಟ್‌ನಲ್ಲಿ ಕಾಣಿಸಿಕೊಂಡರು.

ಸಂಪೂರ್ಣ ಕಪ್ಪು ಉಡುಪಿನಲ್ಲಿ ಕಣ್ಮನ ಸೆಳೆದರು. ಪಾಪರಾಜಿ ಖಾತೆಯಿಂದ ಹಂಚಿಕೊಂಡಿರುವ ವಿಡಿಯೋದಲ್ಲಿ, ದೀಪಿಕಾ ಮ್ಯಾಚಿಂಗ್ ಕಾರ್ಗೋ ಪ್ಯಾಂಟ್‌ಗೆ ಕಪ್ಪು ಕಾಲರ್ ಸ್ವೆಟ್‌ಶರ್ಟ್ ಅನ್ನು ಧರಿಸಿದ್ದರು. ಕೈಯಲ್ಲಿ ಬ್ಲ್ಯಾಕ್ ಬ್ಯಾಗ್ ಜೊತೆಗೆ ಸನ್‌ಗ್ಲಾಸ್‌ನೊಂದಿಗೆ ತಮ್ಮ ನೋಟವನ್ನು ಸಂಪೂರ್ಣಗೊಳಿಸಿದರು. ಚೆನ್ನೈ ಎಕ್ಸ್‌ಪ್ರೆಸ್ ನಟಿ ಕಾರಿನತ್ತ ಸಾಗುವ ವೇಳೆ ಪಾಪರಾಜಿಗಳ ಕ್ಯಾಮರಾ ನೋಡಿ ಮುಗುಳ್ನಕ್ಕರು.

ವಿಡಿಯೋವನ್ನು ಕೈಬಿಟ್ಟ ಕೂಡಲೇ ಸಾಮಾಜಿಕ ಮಾಧ್ಯಮ ಬಳಕೆದಾರರು ಕಮೆಂಟ್ ವಿಭಾಗಕ್ಕೆ ಲಗ್ಗೆ ಇಟ್ಟರು. ನಟಿಯ ಅಂದ ಚೆಂದವನ್ನು ಹಾಡಿ ಹೊಗಳಿದರು. ನೆಟ್ಟಿಗರೊಬ್ಬರು, "ದೀಪಿಕಾ ಸರಳವಾದ ಡ್ರೆಸ್‌ನಲ್ಲೂ ಕೊಲ್ಲುತ್ತಾರೆ. ಸೌಂದರ್ಯ" ಎಂದು ಪ್ರತಿಕ್ರಿಯಿಸಿದ್ದಾರೆ. ಮತ್ತೊಬ್ಬರು, "ಅವರು ಯಾವಾಗಲೂ ವಿಮಾನ ನಿಲ್ದಾಣದ ನೋಟದಿಂದ ಆಕರ್ಷಿಸುತ್ತಾರೆ" ಎಂದಿದ್ದಾರೆ. ಅಭಿಮಾನಿಯೊಬ್ಬರು "ಸಂಪೂರ್ಣ ಸೌಂದರ್ಯ" ಎಂದು ಕಮೆಂಟ್ ಮಾಡಿದ್ದಾರೆ.ದೀಪಿಕಾ ಪಡುಕೋಣೆ ಅವರ ಸಿನಿಮಾ ವಿಚಾರವಾಗಿ ನೋಡುವುದಾದರೆ ಬಹುನಿರೀಕ್ಷಿತ 'ಕಲ್ಕಿ 2898 ಎಡಿ' ನಲ್ಲಿ ಕಾಣಿಸಿಕೊಳ್ಳಲಿದ್ದಾರೆ. ನಾಗ್ ಅಶ್ವಿನ್ ನಿರ್ದೇಶನದ ಸಿನಿಮಾವನ್ನು ವೈಜಯಂತಿ ಮೂವೀಸ್ ನಿರ್ಮಾಣ ಮಾಡುತ್ತಿದೆ.

**600 ಕೋಟಿ ಬಜೆಟ್‌ನಲ್ಲಿ ಚಿತ್ರ ನಿರ್ಮಾಣಗೊಳ್ಳುತ್ತಿದ್ದು, ಪ್ಯಾನ್ ಇಂಡಿಯಾ ಸ್ಟಾರ್ ಪ್ರಭಾಸ್, ಕಮಲ್ ಹಾಸನ್, ದೀಪಿಕಾ ಪಡುಕೋಣೆ, ಬಿಗ್ ಬಿ ಅಮಿತಾಭ್ ಬಚ್ಚನ್, ದಿಶಾ ಪಟಾನಿ ನಟಿಸಿದ್ದಾರೆ. ಜನವರಿ 12, 2024ರಂದು ಚಿತ್ರವನ್ನು ಬಿಡುಗಡೆ ಮಾಡಲು ನಿರ್ಧರಿಸಲಾಗಿದೆ. ಇದಲ್ಲದೇ ಮುಂಬರುವ ಆಕ್ಷನ್–ಡ್ರಾಮಾ ಫೈಟರ್‌ನಲ್ಲಿ ಬಾಲಿವುಡ್ ನಟ ಹೃತಿಕ್ ರೋಷನ್ ಜೊತೆಗೆ ದೀಪಿಕಾ ಕಾಣಿಸಿಕೊಳ್ಳಲಿದ್ದಾರೆ. ಸಿದ್ಧಾರ್ಥ್ ಆನಂದ್ ನಿರ್ದೇಶನದ ಈ ಚಿತ್ರದಲ್ಲಿ ಕರಣ್ ಸಿಂಗ್ ಗ್ರೋವರ್ ಮತ್ತು ಅಕ್ಷಯ್ ಒಬೆರಾಯ್ ಕೂಡ ನಟಿಸಿದ್ದಾರೆ. ಫೈಟರ್ ಜನವರಿ 25, 2024 ರಂದು ಥಿಯೇಟರ್‌ಗೆ ಬರಲು ಸಿದ್ಧವಾಗಿದೆ.**

# ಸಿನಿಮಾ: ರಾಕಿ ಔರ್ ರಾಣಿ ಕಿ ಪ್ರೇಮ್ ಕಹಾನಿ ಗಳಿಸಿದ್ದು ಅಷ್ಟಕಷ್ಟೇ



ಆಲಿಯಾ ಭಟ್ ಮತ್ತು ರಣ್‌ವೀರ್ ಸಿಂಗ್ ಅಭಿನಯದ ಬಹುನಿರೀಕ್ಷಿತ ಸಿನಿಮಾ 'ರಾಕಿ ಔರ್ ರಾಣಿ ಕಿ ಪ್ರೇಮ್ ಕಹಾನಿ' ಶುಕ್ರವಾರದಂದು ವಿಶ್ವದಾದ್ಯಂತ ತೆರೆ ಕಂಡಿ–ದೆ. ವಿಮರ್ಶಕರಿಂದ ಉತ್ತಮ ವಿಮರ್ಶೆಗಳನ್ನು ಗಳಿಸಿದೆ. ಹೆಚ್ಚಿನ ಸಂಖ್ಯೆಯ ಪ್ರೇಕ್ಷಕರೂ ಕೂಡ ಸಿನಿಮಾವನ್ನು ಮೆಚ್ಚಿಕೊಂಡಿದ್ದಾರೆ.

ಬಾಕ್ಸ್ ಆಫೀಸ್ ಕಲೆಕ್ಷನ್ ವಿಚಾರದಲ್ಲಿ ಸಿನಿಮಾ ನಿರೀ–ಕ್ಷೆ ತಲುಪಿದೆ. ಕರಣ್ ಜೋಹರ್ ನಿರ್ದೇಶಿಸಿ, ನಿರ್ಮಾಣ ಮಾಡಿರುವ ಈ ಸಿನಿಮಾ ಮೊದಲ ದಿನ ಎರಡಂಕಿಯ ಹಣ ಸಂಪಾದಿಸುವಲ್ಲಿ ಯಶಸ್ವಿಯಾಗಿದೆ.'ರಾಕಿ ಔರ್ ರಾಣಿ ಕಿ ಪ್ರೇಮ್ ಕಹಾನಿ'ಯ ಆರಂಭಿಕ ಅಂಕಿ–ಅಂಶ ಉತ್ತಮವಾಗಿವೆ.

ಸಿನಿಮಾ ಸ್ವೀಕರಿಸಿರುವ ಸಕಾರಾತ್ಮಕ ಸ್ಪಂದನೆ ಮುಂದಿನ ದಿನಗಳಿಗೆ ಸಹಕಾರಿಯಾಗಲಿದೆ. 2ನೇ ಮತ್ತು ಮೂರನೇ ದಿನ ವಾರಾಂತ್ಯ ಆದ ಹಿನ್ನೆಲೆ ಮತ್ತು ಪಾಸಿಟಿವ್ ಮೌತ್ ಟಾಕ್ ಪರಿಣಾಮವಾಗಿ ಬಾಕ್ಸ್ ಆಫೀಸ್ ಕಲೆಕ್ಷನ್ ಸಂ–ಖ್ಯೆ ಏರುವ ಸಾಧ್ಯತೆ ಹೆಚ್ಚಿದೆ ಎಂದು ಸಿನಿ ಉದ್ಯಮಿಗಳು ಅಭಿಪ್ರಾಯಪಟ್ಟಿದ್ದಾರೆ.

ಪ್ರೇಕ್ಷಕರಿಂದ ಉತ್ತಮ ವಿಮರ್ಶೆ ಸ್ವೀಕರಿಸಿರುವುದರಿಂದ ವಾರಾಂತ್ಯದ ಸಂಗ್ರಹಣೆಯಲ್ಲಿ ಗಮನಾರ್ಹ ಏರಿಕೆ ಆಗಲಿದೆ ಎಂಬ ನಿರೀಕ್ಷೆಯಿದೆ.ಸಿನಿ ಉದ್ಯಮದ ಟ್ರ್ಯಾಕರ್ ಸಾಕ್ನಿಲ್ಕ್ ಪ್ರಕಾರ, 'ರಾಕಿ ಔರ್ ರಾಣಿ ಕಿ ಪ್ರೇಮ್ ಕಹಾನಿ' ಭಾರತದಲ್ಲಿ 11.50 ಕೋಟಿ ರೂಪಾಯಿಗಳನ್ನು ಗಳಿಸಿದೆ (ಆರಂಭಿಕ ಅಂದಾಜಿನ ಪ್ರಕಾರ). ಮೊದಲ ದಿನ ಚಿತ್ರಮಂದಿರಗಳಲ್ಲಿ ಒಟ್ಟು ಶೇ. 21.25 ರಷ್ಟು ಆಕ್ಯುಪೆನ್ಸಿ ದರ ಇತ್ತು. ಬೆಳಗ್ಗಿನ ಶೋಗಳು ಶೇ. 12.16 ರಷ್ಟು ಆಕ್ಯುಪೆನ್ಸಿಯನ್ನು ಹೊಂದಿದ್ದರೆ, ಸಂಜೆ–ರಾತ್ರಿ ಶೋಗಳು ಶೇ. 36.85 ರಷ್ಟು ಆಕ್ಯುಪೆನ್ಸಿ ಹೊಂದಿತ್ತು.

ಏ ದಿಲ್ ಹೈ ಮುಷ್ಕಿಲ್' ಕರಣ್ ಜೋಹರ್ ಅವರು ಕೊನೆಯದಾಗಿ ನಿರ್ದೇಶಿಸಿರುವ ಸಿನಿಮಾ. ಸರಿಸುಮಾರು ಏಳು ವರ್ಷಗಳ ಬ್ರೇಕ್ ನಂತರ ಕರಣ್ ಡೈರೆಕ್ಟರ್ ಕ್ಯಾಪ್ ತೊಟ್ಟಿದ್ದಾರೆ. ಇನ್ನು ಗಲ್ಲಿ ಬಾಯ್ ಸೂಪರ್ ಹಿಟ್ ಜೋಡಿ ಆಲಿಯಾ ಭಟ್ ಮತ್ತು ರಣ್‌ವೀರ್ ಸಿಂಗ್ ಅವರ ಎರಡನೇ ಸಿನಿಮಾವಿದು. ಅಲ್ಲದೇ, ಧರ್ಮೇಂದ್ರ, ಶಬಾನಾ ಅಜ್ಮಿ, ಜಯಾ ಬಚ್ಚನ್ ಅವರಂತಹ ಹಿರಿಯ ಸ್ಟಾರ್ ನಟರು ಚಿತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಹಾಗಾಗಿ ಈ ಚಿತ್ರದ ಮೇಲೆ ಅಭಿಮಾನಿಗಳು ಅಪಾರ ನಿರೀಕ್ಷೆ ಹೊಂದಿದ್ದರು. ಪ್ರಸ್ತುತ ಪ್ರೇಕ್ಷಕರ ವಿಮರ್ಶೆಗಳನ್ನು ಗಮನಿಸಿದರೆ ಅವರ ನಿರೀ–ಕ್ಷೆ ತಲುಪುವಲ್ಲಿ 'ರಾಕಿ ಔರ್ ರಾಣಿ ಕಿ ಪ್ರೇಮ್ ಕಹಾನಿ' ಬಹುತೇಕ ಯಶಸ್ವಿ ಆಗಿದೆ.

# ಪ್ರಭಾಸ ಬಗ್ಗೆ ನಂಗೆ ಗೌರವಯಿದೆ



'ದಿ ಕಾಶ್ಮೀರ್ ಫೈಲ್ಸ್' ಚಿತ್ರದ ಮೂಲಕ ಸಂಚಲನ ಮೂಡಿಸಿದ ನಿರ್ದೇಶಕ ವಿವೇಕ್ ಅಗ್ನಿಹೋತ್ರಿ. ಕೆಲವು ವಿವಾದಗಳಿಂದ ಅವರು ಆಗಾಗ ಸುದ್ದಿಯಲ್ಲಿರುತ್ತಾರೆ. ಇತ್ತೀಚೆಗಷ್ಟೇ ಪ್ಯಾನ್ ಇಂಡಿ–ಯಾ ಸ್ಟಾರ್ ಪ್ರಭಾಸ್ ವಿರುದ್ಧ ಅಗ್ನಿಹೋತ್ರಿ ಮಾತನಾಡಿರುವುದಾಗಿ ಸುದ್ದಿಯೊಂದು ಸೋಷಿಯಲ್ ಮೀಡಿಯಾದಲ್ಲಿ ಹರಿದಾಡುತ್ತಿತ್ತು. ಈ ಬಗ್ಗೆ ಇದೀಗ ಸ್ವತಃ ಅಗ್ನಿಹೋತ್ರಿ ಅವರೇ ಸ್ಪಷ್ಟನೆ ನೀಡಿದ್ದಾರೆ. ಟ್ವೀಟ್ ಮಾಡುವ ಮೂಲಕ ಎಲ್ಲ ಸುಳ್ಳು ವದಂತಿಗಳಿಗೆ ತೆರೆ ಎಳೆದಿದ್ದಾರೆ."ನಾನು ಮತ್ತೊಮ್ಮೆ ಪ್ರಭಾಸ್ ಚಿತ್ರಕ್ಕೆ ಪೈಪೋಟಿ ನೀಡುತ್ತಿದ್ದೇನೆ ಎಂಬ ಮಾತುಗಳು ಕೇಳಿಬರುತ್ತಿವೆ. ಇಂತಹ ಸುಳ್ಳು ಸುದ್ದಿಯನ್ನು ಹಬ್ಬಿಸುತ್ತಿರುವವರು ಯಾರು? ಪ್ರಭಾಸ್ ಬಗ್ಗೆ ನನಗೆ ಅಪಾರ ಗೌರವವಿದೆ. ಅವರೊಬ್ಬ ಮೆಗಾ ಸ್ಟಾರ್. ಅವರು ಭಾರಿ ಬಜೆಟ್ ಚಿತ್ರಗಳನ್ನು ಮಾಡುತ್ತಾರೆ. ಆದರೆ, ನಾವು ಸ್ಟಾರ್ ನಟರಿಲ್ಲದೇ ಕಡಿಮೆ ಬಜೆಟ್‌ನಲ್ಲಿ ಜನ ಸಾಮಾನ್ಯರಿಗಾಗಿ ಸಿನಿಮಾ ಮಾಡುತ್ತೇವೆ. ನಮ್ಮ ನಡುವೆ ಯಾವುದೇ ಹೋಲಿಕೆ ಇಲ್ಲ. ದಯವಿಟ್ಟು ನನ್ನನ್ನು ಬಿಟ್ಟುಬಿಡಿ" ಎಂದು ವಿವೇಕ್ ಅಗ್ನಿಹೋತ್ರಿ ಟ್ವೀಟ್ ಮಾಡಿದ್ದಾರೆ. ಇದೀಗ ಈ ವಿಚಾರ ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಗುತ್ತಿದೆ.'ದಿ ಕಾಶ್ಮೀರ್ ಫೈಲ್ಸ್' 2022ರ ಮಾರ್ಚ್‌ನಲ್ಲಿ ತೆರೆಕಂಡಿತ್ತು. ಮಿಶ್ರ ಪ್ರತಿಕ್ರಿಯೆ ಪಡೆದಿದ್ದ ಈ ಸಿನಿಮಾ ಎಲ್ಲೆಡೆ ಸಖತ್ ಸದ್ದು ಮಾಡಿತ್ತು. ವಿವೇಕ್ ಅಗ್ನಿಹೋತ್ರಿ ನಿರ್ದೇಶನದಲ್ಲಿ ಈ ಚಿತ್ರ ಮೂಡಿ ಬಂದಿತ್ತು. ನಟ ಅನುಪಮ್ ಖೇರ್ ಮುಖ್ಯಭೂಮಿಕೆಯಲ್ಲಿ ಅಭಿನಯಿಸಿದ್ದರು. ಕಾಶ್ಮೀರಿ ಪಂಡಿತರ ವಲಸೆ ಮೇಲೆ ಕಥೆ ಹೆಣೆಯಲಾಗಿದೆ. ಇನ್ನು ನಿರ್ದೇಶಕ ವಿವೇಕ್ ಅಗ್ನಿಹೋತ್ರಿ ಸದ್ಯ 'ದಿ ವ್ಯಾಕ್ಸಿನ್ ವಾರ್' ಸಿನಿಮಾ ವಿಚಾರವಾಗಿ ಸುದ್ದಿಯಲ್ಲಿದ್ದಾರೆ. 'ದಿ ವ್ಯಾಕ್ಸಿನ್ ವಾರ್' ಸಿನಿಮಾದ ಮೇಲೆ ಜನರಿಗೆ ಸಾಕಷ್ಟು ನಿರೀಕ್ಷೆ ಇದೆ.ಕೋವಿಡ್ ಸಂದರ್ಭದಲ್ಲಿನ ನೈಜ ಘಟನೆಗಳನ್ನು ಆಧರಿಸಿ ಚಿತ್ರ ತಯಾರಾಗುತ್ತಿದೆ. ಜೊತೆಗೆ, ಭಾರತೀಯ ವಿಜ್ಞಾನಿಗಳ ಕಥೆಯಾಧರಿತವಾಗಿದೆ. ಇದರಲ್ಲಿ ಸಪ್ತಮಿ ಗೌಡ ಪಾತ್ರ ಹೇಗಿರಲಿದೆ ಎಂಬ ಬಗ್ಗೆ ಹೆಚ್ಚಿನ ಮಾಹಿತಿ ಹೊರ ಬರಬೇಕಿದೆ. ದಿ ವ್ಯಾಕ್ಸಿನ್ ವಾರ್ ಸಿನಿಮಾದ ಚಿತ್ರೀಕರಣ ಈಗಾಗಲೇ ನಡೆಯುತ್ತಿದೆ. ಈ ಸಿನಿಮಾ ದಸರಾ ವೇಳೆಗೆ 11 ಭಾಷೆಗಳಲ್ಲಿ ಬಿಡುಗಡೆಯಾಗುವ ಸಾಧ್ಯತೆ ಇದೆ. ಈ ಚಿತ್ರದಲ್ಲಿ, ಖ್ಯಾತ ಬಾಲಿವುಡ್ ನಟ ಅನುಪಮ್ ಖೇರ್, ರೈಮಾ ಸೇನ್, ಸಪ್ತಮಿ ಗೌಡ, ನಾನಾ ಪಾಟೇಕರ್ ಮತ್ತು ಇತರರು ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ.